ಸುಗಂಧದ್ರವ್ಯ ಸಸ್ಯಗಳು

ಡಾ॥ ಎ ಎಸ್ ನಲಿನಿ
ಡಾ॥ ಕೆ ವೆಂಕಟಸುಬ್ಬಯ್ಯ
ಡಾ॥ ಎ ಎಸ್ ಪ್ರಭಾಕರ್

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ 136

ಸುಗಂಧದ್ರವ್ಯ ಸಸ್ಯಗಳು

ಡಾ। ಎ. ಎಸ್. ನಲಿನಿ

ಸಸ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಕೃಷಿಕಾಲೇಜು, ಧಾರವಾಡ

ಡಾ। ಕೆ. ವೆಂಕಟಸುಬ್ಬಯ್ಯ

ಸಸ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಕೃಷಿಕಾಲೇಜು, ಧಾರವಾಡ

ಡಾ। ಎ. ಎಸ್. ಪ್ರಭಾಕರ್

ಬೇಸಾಯಶಾಸ್ತ್ರ ಸಹಪ್ರಾಧ್ಯಾಪಕರು ಕೃಷಿಕಾಲೇಜು, ಧಾರವಾಡ

1984

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560 065

ಸುಗಂಧದ್ರವ್ಯ ಸಸ್ಯಗಳು (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು, ಸಂವಹನ ಸಮಿತಿ ಪ್ರಕಾಶಿತ), ಪ್ರಥಮ ಮುದ್ರಣ 1984,
ಪ್ರತಿಗಳು 1000, ಪುಟಗಳು viii+119

ಬೆಲೆ: ಸಾದಾ ಪ್ರತಿ ರೂ. 12.50 ಕ್ಯಾಲಿಕೊ ಪ್ರತಿ ರೂ. 22.50

ಮುದ್ರಣ

ಕೃ. ವಿ. ವಿ. ಮುದ್ರಣಾಲಯ

ಹೆಬ್ಬಾಳ, ಬೆಂಗಳೂರು - 560 024

ಕುಲಪತಿಗಳ ಹಾರೈಕೆ

ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯದ ಎರಡನೆಯ ಘಟ್ಟದಲ್ಲಿ ನಾವಿಂದು ಇದ್ದೇವೆ. ಈಗಾಗಲೇ ನೂರಕ್ಕೆ ಮಿಕ್ಕ ಹೊತ್ತಗೆಗಳು ಪ್ರಕಟಗೊಂಡಿವೆ. ಹತ್ತಾರು ಎರಡನೆಯ ಮುದ್ರಣಗೊಳ್ಳುತ್ತಿವೆ. ಇದು ಈ ಗ್ರಂಥಗಳ ಉಪಯುಕ್ತತೆ ಹಾಗೂ ಜನಮೆಚ್ಚುಗೆಯ ದ್ಯೋತಕ.

ಕೃಷಿ ವಿಜ್ಞಾನಗಳು ಹಲವಾರು. ಅವುಗಳ ವ್ಯಾಪ್ತಿ ಅಪಾರ. ಅವುಗಳ ಮಹತಿ ಹೆಚ್ಚಿನದು. ಅವುಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಪಡೆದ ಜ್ಞಾನಸಂಪತ್ತು ಒಂದು ಮೇರುಪರ್ವತ. ಅದರ ಪ್ರಯೋಜನ ನಾಡಿಗರಿಗೆ ಹಾಗೂ ನಾಡಿಗೆ ಸಂಪೂರ್ಣವಾಗಿ ಆದಾಗ, ದೇಶದಲ್ಲಿ ಪುಷ್ಟಿ-ತುಷ್ಟಿ, ಭದ್ರತೆ-ಭವ್ಯತೆ, ಸುಖ-ಶಾಂತಿಗಳು ನೆಲೆಗೊಳ್ಳುತ್ತವೆ. ಈ ದಿಶೆಯಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಕೃಷಿಯ ಸಂದೇಶ ಹರಡಲನುವಾಗುವ ಪ್ರಯತ್ನಗಳು ದೇಶಸೇವೆಯ ಮಹತ್ ಕಾರ್ಯಗಳು.

ಒಂದು ದಶಕದ ಹಿಂದೆ ಮೊಳೆತ ಪೈರು, ಇಂದು ಹುಲುಸಾಗಿ ಬೆಳೆದಿದೆ. ಈ ಕಾರ್ಯದ ಮುಖ್ಯ ಹೇತುವಾದ ಕನ್ನಡ ಮಾಧ್ಯಮ ನನಸಾಗಲು ಈ ಬೆಳೆ ಏತಕ್ಕೂ ಸಾಲದು. ವಿಜ್ಞಾನದ ಒಂದೊಂದು ಪ್ರಕಾರಗಳಲ್ಲಿ ನೂರುನೂರು ಪುಸ್ತಕಗಳು ಪ್ರಕಟವಾಗಬೇಕು. ಆ ದಿನದ ಮೇಲೆ ಕಣ್ಣಿಟ್ಟು ಸಂಬಂಧಿಸಿದವರೆಲ್ಲರೂ ಉತ್ಸಾಹದಿಂದ ಕಾರ್ಯ ಮುಂದುವರಿಸಬೇಕೆಂದು ನನ್ನ ಕಳಕಳಿಯಹಾರೈಕೆ.

ಈಗ ಪ್ರಕಟವಾಗುತ್ತಿರುವ **ಸುಗಂಧದ್ರವ್ಯ ಸಸ್ಯಗಳು** ಈ ದಿಶೆಯಲ್ಲಿಯ ಮತ್ತೊಂದು ಹೆಜ್ಜೆ. ಇದರ ಉಪಯೋಗವನ್ನು ಸಂಬಂಧಪಟ್ಟವರೆಲ್ಲ ಮಾಡಿಕೊಳ್ಳಬೇಕು.

ಸಾ. ಗು. ಪೇರೂರ
ಕುಲಪತಿಗಳು

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಸಂಪಾದಕರ ಮಾತು

ಸುಗಂಧದ್ರವ್ಯಗಳು ಜನಪ್ರಿಯ ವಸ್ತುಗಳೇ ಅಲ್ಲದೆ ಅತ್ಯಂತ ಲಾಭಕರ ವಾಣಿಜ್ಯ ವಸ್ತುಗಳೂ ಆಗಿವೆ. ಇವು ಅನೇಕ ಮೂಲಗಳಿಂದ ಲಭಿಸುತ್ತವೆ. ಇವು ಲಭಿಸುವ ಸಸ್ಯಮೂಲ ಗಮನಾರ್ಹ ಅಂಶವಾಗಿದೆ. ಇವುಗಳ ತಿಳಿವಳಿಕೆ ಯಾರಿಗೂ ಆಸಕ್ತಿಯ ವಿಷಯವೇ.

ಸುಗಂಧದ್ರವ್ಯ ಕೊಡುವ ಅನೇಕಾನೇಕ ಸಸ್ಯಗಳಲ್ಲಿ 52 ಸಸ್ಯಗಳ ಶಾಸ್ತ್ರೀಯ ವಿವರಣೆ ಮತ್ತು ಉಪಯೋಗಗಳು ಈ ಪುಸ್ತಕದಲ್ಲಿ ಇವೆ. ವೈಜ್ಞಾನಿಕ ಹೆಸರುಗಳ ಜೊತೆಗೆ ಚಿತ್ರಗಳನ್ನೂ ಒದಗಿಸಿರುವುದರಿಂದ ಈ ಪುಸ್ತಕದ ಉಪಯುಕ್ತತೆ ಹೆಚ್ಚಿದೆ.

ಈ ಪುಸ್ತಕದ ತಾಂತ್ರಿಕ ಪರಿಶೀಲನೆಯನ್ನು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ| ಜಿ. ಬೋರಯ್ಯ ಅವರು ಮಾಡಿದ್ದಾರೆ. ಭಾಷಾಸಂಪಾದನೆಯನ್ನು ಶ್ರೀಮತಿ ಉಷಾಕಿರಣ್, ಕರಡೋದಿಕೆಯನ್ನು ಶ್ರೀ ಎಂ. ರಮೇಶ್, ಮುಖಪುಟ ವಿನ್ಯಾಸವನ್ನು ಶ್ರೀ ವಿದ್ಯಾಧರಯ್ಯ ನೆರವೇರಿಸಿದ್ದಾರೆ, ಪಡಿಯಚ್ಚುಗಳನ್ನು ಮೆ| ಬೆಂಗಳೂರು ಆರ್ಟ್ ಸ್ಟುಡಿಯೋದವರು ಮಾಡಿದ್ದಾರೆ. ಇವರಿಗೆ ನಮ್ಮ ಕೃತಜ್ಞತೆಗಳು.

ಸಸ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಮಾತ್ರವೇ ಅಲ್ಲದೆ ಇತರ ಸಾಮಾನ್ಯ ಕೃಷಿ ಅಭ್ಯಾಸಿಗಳಿಗೂ ಪ್ರಗತಿಪರ ರೈತರಿಗೂ ಇದು ಆಸಕ್ತಿಯ ಗ್ರಂಥವಾಗಬಲ್ಲದು. ಇವರೆಲ್ಲರೂ ಇದರ ಪ್ರಯೋಜನ ಪಡೆದುಕೊಳ್ಳುವರೆಂದು ಆಶಿಸಲಾಗಿದೆ.

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560065

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು ಮತ್ತು
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಪರಿವಿಡಿ

ಸುಗಂಧದ್ರವ್ಯ ಸಸ್ಯಗಳು

ಅಧ್ಯಾಯ 1

ಪೀಠಿಕೆ

ಮಾನವನು ಭೂಮಿಯ ಮೇಲೆ ಜೀವಿಸಬೇಕಾದರೆ ಅತನಿಗೆ ಮುಖ್ಯವಾಗಿ ಆಹಾರ, ಬಟ್ಟೆ, ಗಾಳಿ ಮತ್ತು ಮಳೆ ಅಗತ್ಯ. ಪುರಾತನ ಕಾಲದಿಂದ ಇತ್ತೀಚಿನ ವೈಜ್ಞಾನಿಕ ಯುಗದಲ್ಲಿಯೂ ಸಹ ಈ ಅವಶ್ಯಕ ವಸ್ತುಗಳನ್ನು ಸಸ್ಯಸಂಕುಲದಿಂದ ಹೆಚ್ಚಿನ ಪ್ರಮಾಣದಲ್ಲಿ ಪಡೆದು ಬಾಳಿಬದುಕುತ್ತಿರುವುದೊಂದು ನೈಸರ್ಗಿಕ ವೈಚಿತ್ರ್ಯ. ಈ ರೀತಿ ಮಾನವನ ಮತ್ತು ಸಸ್ಯಸಂಕುಲಗಳ ಜೀವಸಂಬಂಧ ಹಾಸುಹೊಕ್ಕಾಗಿರುವುದಲ್ಲದೆ ಸಸ್ಯಗಳ ಮೇಲಿನ ಮನುಷ್ಯನ ಅವಲಂಬನೆ ಅತ್ಯಧಿಕವಾಗುತ್ತಿದೆ. ಕಾರಣ, ಸಸ್ಯಗಳು ಪ್ರಪಂಚದಲ್ಲಿಯೇ ಅತ್ಯಮೂಲ್ಯ ಸಂಪತ್ತಾಗಿದ್ದು ಈ ಸಸ್ಯಸಂಪತ್ತನ್ನು ಮಾನವನು ಅತಿಶ್ರದ್ಧೆಯಿಂದ ಕಾಪಾಡುತ್ತ ಬಂದಿದ್ದಾನೆ ಸಸ್ಯಗಳಿಂದ ಮಾನವನು ಪಡೆಯುತ್ತಿರುವ ದೇಣಿಗೆ ಒಂದಲ್ಲ, ಎರಡಲ್ಲ ಅನೇಕ. ರೋಗಗಳಿಂದ ತನ್ನನ್ನು ತಾನು ಕಾಪಾಡಿಕೊಳ್ಳುವುದು ಮನುಷ್ಯನ ಅತೀ ಮುಖ್ಯ ಅವಶ್ಯಕತೆ. ಔಷಧಿಗಳ ಬಳಕೆ ರೋಗರುಜಿನಗಳನ್ನು ಹೋಗಲಾಡಿಸುವ ಮುಖ್ಯ ಸಾಧನವಾಗಿದೆ. ಅನೇಕ ಔಷಧಿಗಳು ಸಸ್ಯಗಳಿಂದ ಉತ್ಪತ್ತಿಯಾಗಿದ್ದು ಹಲವಾರು ರೋಗಗಳನ್ನು ಉಪಶಮನಗೊಳಿಸಲು ಸಹಾಯಕವಾಗಿರುವಂತಹ ಅನೇಕ ನಿದರ್ಶನಗಳಿವೆ. ಇದಲ್ಲದೆ ರಬ್ಬರ್, ಟ್ಯಾನಿನ್, ರೆಕ್ಸಿನ್, ಅಂಟು, ಸಾಬೂನು, ಬಣ್ಣಕಟ್ಟುವ ಕೆಲವು ಪದಾರ್ಥ, ತೈಲ ಮತ್ತು ಅನೇಕ ಬಗೆಯ ಸುಗಂಧದ್ರವ್ಯಗಳು ಸಸ್ಯಗಳಿಂದಲೇ ದೊರಕುತ್ತಿರುವುದಲ್ಲದೆ, ಅತ್ಯಧಿಕ ಲಾಭದಾಯಕ ವಾಣಿಜ್ಯ ಉದ್ದಿಮೆಗಳ ಮೂಲವಸ್ತುಗಳಾಗಿವೆ. ಈ ಅಪಾರ ಸಸ್ಯಸಂಪತ್ತಿನಲ್ಲಿ ಸುಗಂಧದ್ರವ್ಯಗಳನ್ನು ನೀಡುವ ಸಸ್ಯಗಳಿಗೇ ಒಂದು ವಿಶಿಷ್ಟ ಸ್ಥಾನವಿದೆ. ಸುಗಂಧ ಬೀರುವ ಕೆಲವು ಅಗತ್ಯ ತೈಲ ಮತ್ತು ವಿಶಿಷ್ಟ ಘಟಕಗಳನ್ನು ಹೊಂದಿರುವ ಸಸ್ಯಗಳನ್ನು ಸುಗಂಧದ್ರವ್ಯ ಗಿಡಗಳೆಂದು ಕರೆಯಲಾಗುತ್ತದೆ. ಕೆಲವು ಸುಗಂಧದ್ರವ್ಯಗಳು ಸಾಮಾನ್ಯ ಮನುಷ್ಯನ ಅವಶ್ಯಕ ವಸ್ತುಗಳಾಗಿದ್ದರೆ ಇನ್ನು ಕೆಲವು ಸಿರಿವಂತರ ಭೋಗವಸ್ತುಗಳಾಗಿವೆ. ಕೆಲವು ದುರ್ಗಂಧ ನಿವಾರಕವಾಗಿ ಆರೋಗ್ಯ ಸಾಧನಗಳೆಂದು ಬಳಸಲ್ಪಟ್ಟರೆ ಇನ್ನು ಕೆಲವು ನಿತ್ಯಬಳಕೆಯ ವಸ್ತುಗಳ ತಯಾರಿಕೆಗೆ ಮತ್ತು ಬಗೆಬಗೆಯ ತಿಂಡಿತೀರ್ಥಗಳಿಗೆ ವಿಶಿಷ್ಟ ರುಚಿ ನೀಡುತ್ತವೆ. ಈ ರೀತಿ ವಿಶಿಷ್ಟ ಗುಣಗಳನ್ನು ಹೊಂದಿ ದಿನನಿತ್ಯದ ನಮ್ಮ ಬಳಕೆಯಲ್ಲಿರುವ ಸುಗಂಧದ್ರವ್ಯಗಳು, ಅವುಗಳು ಲಭ್ಯವಾಗಲು ಕಾರಣವಾದ ಸಸ್ಯಗಳು, ಅವುಗಳಿಂದ ಸುಗಂಧದ್ರವ್ಯಗಳು ದೊರಕುವ ಬಗೆ ಮತ್ತು ಅವುಗಳ ಉಪಯೋಗ ಮೊದಲಾದವು ಪ್ರತಿಯೊಬ್ಬರೂ ತಿಳಿಯುವಂತಹ ಆಸಕ್ತಿಪೂರ್ಣ ವಿಷಯಗಳು.

ಸುಗಂಧದ್ರವ್ಯಗಳ ಬಳಕೆ ಮೂಲತಃ ಹೇಗೆ, ಎಲ್ಲಿ ಮತ್ತು ಯಾರಿಂದ ಪ್ರಾರಂಭವಾಯಿತು ಎಂದು ಹೇಳುವುದು ಕಷ್ಟ. ಆದರೆ, ಮಾನವನು ಇವುಗಳನ್ನು ಅನಾದಿ ಕಾಲದಿಂದಲೂ ಬಳಸುತ್ತಾ ಬಂದಿರುವ ಬಗ್ಗೆ ಅನೇಕ ನಿದರ್ಶನಗಳಿವೆ.

ಪುರಾಣ ಮತ್ತು ಪುರಾತನ ಬರವಣಿಗೆಗಳಲ್ಲಿ ಸುಗಂಧದ್ರವ್ಯಗಳ ಬಳಕೆಯ ಬಗ್ಗೆ ಉಲ್ಲೇಖಿಸಲಾಗಿದೆ. ಈಜಿಪ್ಟ್ ಮತ್ತು ಹೈಬ್ರೀವ್ ಜನರು ಆಗಿನ ಕಾಲದಲ್ಲಿ ಸುಗಂಧ ದ್ರವ್ಯಗಳನ್ನು ವಿಶೇಷವಾಗಿ ಹಬ್ಬದ ಸಮಾರಂಭಗಳಲ್ಲಿ ಬಳಸುತ್ತಿದ್ದರು. ರೋಮನ್ನರು ಮತ್ತು ಗ್ರೀಕರ ನಾಗರೀಕತೆಯ ಪ್ರಾರಂಭಕಾಲದಲ್ಲಿ ಸುಗಂಧದ್ರವ್ಯಗಳ ಬಳಕೆ ಹೆಚ್ಚಿನ ಪ್ರಮಾಣದಲ್ಲಿದ್ದು ತುಂಬಾ ಮಹತ್ವಪೂರ್ಣವಾಗಿತ್ತು. ಈ ಜನರು ದೇಹದ ವಿವಿಧ ಭಾಗಗಳಿಗೆ ಬೇರೆ ಬೇರೆ ತರದ ಸುಗಂಧದ್ರವ್ಯಗಳನ್ನು ಲೇಪಿಸುತ್ತಿದ್ದರೆಂಬ ವಿಚಿತ್ರ ಹೇಳಿಕೆಯುಂಟು. ಇದಲ್ಲದೆ ಹಿಂದಿನ ಕಾಲದಲ್ಲಿ ರಾಜಮಹಾರಾಜರನ್ನು ಒಲಿಸಿಕೊಳ್ಳಲು ವಿಶೇಷವಾದ ಸುಗಂಧದ್ರವ್ಯಗಳು ಮತ್ತು ಸುಗಂಧಯುಕ್ತ ಹೂವುಗಳನ್ನು ಕಾಣಿಕೆಯಾಗಿ ಕೊಡುತ್ತಿದ್ದರು. ವರ್ಸಲ್ಲೀಸದ ಹದಿನಾಲ್ಕನೇ ಲೂಯಿಸನು ಪ್ರತಿದಿವಸವೂ ಒಂದೊಂದು ತರಹದ ಸುಗಂಧದ್ರವ್ಯಗಳನ್ನು ಉಪಯೋಗಿಸುತ್ತಿದ್ದುದರ ಬಗ್ಗೆ ಉಲ್ಲೇಖವಿದೆ. ಹಿಂದಿನ ಕಾಲದಲ್ಲಿ ಸುಗಂಧದ್ರವ್ಯಗಳನ್ನು ಆರೋಗ್ಯದ ದೃಷ್ಟಿಯಿಂದ, ಸುವಾಸನೆಗಾಗಿ, ಪೂತಿನಾಶಕವಾಗಿ ಮತ್ತು ದುರ್ಗಂಧವನ್ನು ಹೋಗಲಾಡಿಸುವ ಸಲುವಾಗಿ ಉಪಯೋಗಿಸುತ್ತಿದ್ದರು.

ಇತ್ತೀಚೆಗೆ ಸುಗಂಧದ್ರವ್ಯಗಳ ಬಳಕೆ ಹೆಚ್ಚುತ್ತಿದ್ದು ಇವುಗಳ ಬೇಡಿಕೆ ಮತ್ತು ಬೆಲೆಗಳು ಸಹ ಹೆಚ್ಚಿವೆ. ಇಂದು ಕೃತಕ ರೀತಿಯಲ್ಲಿ ತಯಾರಾದ ಸುಗಂಧದ್ರವ್ಯಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿದ್ದಾಗ್ಯೂ ಸಸ್ಯಜನ್ಯವಾದ ಸುಗಂಧದ್ರವ್ಯಗಳಿಗೆ ಬೇಡಿಕೆ ಹೆಚ್ಚು. ದಿನಬಳಕೆಯ ಅನೇಕ ವಸ್ತುಗಳ ತಯಾರಿಕೆಯಲ್ಲಿ ಸುಗಂಧದ್ರವ್ಯಗಳನ್ನು ಉಪಯೋಗಿಸಲಾಗುತ್ತಿದೆ. ಅನೇಕ ದೇಶಗಳಲ್ಲಿ ಈ ವಸ್ತುಗಳ ತಯಾರಿಕೆ ಮಹತ್ವದ ಮತ್ತು ಲಾಭದಾಯಕ ಉದ್ಯಮವಾಗಿದೆ. ಸುಗಂಧದ್ರವ್ಯಗಳ ತಯಾರಿಕೆಗೆ ಫ್ರಾನ್ಸ್, ಸ್ವಿಟ್ಸರ್‌ಲ್ಯಾಂಡ್, ಅಮೆರಿಕ ಮೊದಲಾದ ದೇಶಗಳು ಸಿದ್ಧವಾಗಿವೆ.

ಸುಗಂಧದ್ರವ್ಯಗಳನ್ನು ಹೊಂದಿದ ಸುಗಂಧ ಬೀರುವ ಸುಂದರವಾದ ಸಸ್ಯಗಳನ್ನು ಪ್ರತಿಯೊಬ್ಬರೂ ಬೆಳೆಯಲು ಆಶಿಸುವುದು ಸ್ವಾಭಾವಿಕ. ಮನೆಯ ಹೂದೋಟಗಳಲ್ಲಿ ಅನೇಕ ಜನರು ಇಂತಹ ಸಸ್ಯಗಳನ್ನು ಬೆಳೆದು ಸಂತೋಷಪಡುವುದನ್ನು ಕಾಣಬಹುದು. ಮಲ್ಲಿಗೆ, ಸಂಪಿಗೆ, ಗುಲಾಬಿ, ದವನ ಮೊದಲಾದ ಸಸ್ಯಗಳನ್ನು ಜನಸಾಮಾನ್ಯರು ಬೆಳೆಯುವುದುಂಟು. ಕೆಲವು ಸುಗಂಧದ್ರವ್ಯ ಗಿಡಗಳು ಹಣದ ಬೆಳೆಗಳಾಗಿದ್ದು ನಮ್ಮ ದೇಶದಲ್ಲಿ ಇತ್ತೀಚೆಗೆ ಕೆಲವು ಪ್ರಗತಿಪರ ರೈತರು ಹೆಚ್ಚಿನ ಪ್ರಮಾಣದಲ್ಲಿ ಇವನ್ನು ಬೆಳೆದು ಲಾಭಪಡೆಯಲು ಮುಂದೆ ಬರುತ್ತಿದ್ದಾರೆ. ನಮ್ಮ ದೇಶದಲ್ಲಿ ಭೂಮಿ ಮತ್ತು

ಹವಾಗುಣವು ಈ ಸಸ್ಯಗಳ ಬೇವಣಿಗೆಗೆ ಸೂಕ್ತವಾಗಿದೆ. ನಮ್ಮ ದೇಶದಲ್ಲಿ ಸುಗಂಧ ದ್ರವ್ಯಗಳ ತಯಾರಿಕೆ ಒಂದು ಉದ್ಯಮವಾಗಿ ರೂಪುಗೊಳ್ಳಬೇಕಾಗಿದೆ. ಈಗೀಗ ಉದ್ಯಮಿಗಳು ಮತ್ತು ರೈತರು ಇತ್ತಕಡೆ ಗಮನಹರಿಸುತ್ತಿದ್ದಾರೆ. ಹಲವಾರು ಕಡೆ ಈ ಸಸ್ಯಗಳನ್ನು ಬೆಳೆದು ಅದರಿಂದ ಬಂದ ಹೂಹಣ್ಣುಗಳನ್ನು ರಫ್ತುಕೂಡ ಮಾಡುತ್ತಿದ್ದಾರೆ. ಕೃಷಿಗೆ ಹೆಚ್ಚು ಸೂಕ್ತವಲ್ಲದ ಭೂಮಿಯನ್ನು ಈ ಸಸ್ಯಗಳನ್ನು ಬೆಳೆಯಲು ಉಪಯೋಗಿಸಬಹುದಾಗಿದೆ.

ಕೆಲವು ಸುಗಂಧದ್ರವ್ಯ ಗಿಡಗಳು ವಿವಿಧೋಪಯೋಗಗಳನ್ನು ಹೊಂದಿದ್ದು ಅನೇಕ ಸಸ್ಯಗಳು ಅನೇಕ ರೋಗಗಳನ್ನು ತಡೆಗಟ್ಟುವಲ್ಲಿ ಮಹತ್ತರಪಾತ್ರ ವಹಿಸುತ್ತವೆ. ಈ ದಿಶೆಯಲ್ಲಿ ಅನೇಕ ವೈದ್ಯಕೀಯ ಸಂಶೋಧನೆಗಳು ರೂಪುಗೊಂಡಿವೆ. ಕೆಲವು ಸಸ್ಯಗಳು ಉತ್ತಮ ಮಸಾಲೆ ಸಾಮಾನುಗಳೆಂದು ಪರಿಗಣಿತವಾಗಿವೆ. ಅಲ್ಲದೆ ಸುಗಂಧದ್ರವ್ಯ ಗಿಡಗಳ ಹೂ ಮತ್ತು ಎಲೆಗಳನ್ನು ಪೂಜೆ ಮತ್ತು ಪುರಸ್ಕಾರಗಳಿಗೂ ಉಪಯೋಗಿಸಲಾಗುತ್ತಿದೆ.

ವಿವಿಧೋಪಯೋಗಿ ಸುಗಂಧಯುಕ್ತ ಸಸ್ಯಗಳನ್ನು ಬೆಳೆಯುವುದು ಅಷ್ಟೇನು ಯುಕ್ತಕಾರ್ಯವಲ್ಲ. ಈ ಸಸ್ಯಗಳಿಗೆ ರೋಗ ಮತ್ತು ಕೀಟಗಳ ಬಾಧೆ ಕಡಮೆ. ಆದ್ದರಿಂದ ಆಯಾ ಸಸ್ಯಗಳಿಗೆ ಸೂಕ್ತವಾದ ಭೂಮಿಯನ್ನು ಆಯ್ದು ಸೂಕ್ತವಾದ ವ್ಯವಸಾಯಕ್ರಮಗಳಿಗೆ ಒಳಪಡಿಸಿ ವಿಪುಲವಾದ ಬೆಳೆ ಬೆಳೆದು ಸುಗಂಧದ್ರವ್ಯ ತಯಾರಿಕೆಯ ಉದ್ದಿಮೆಗಳಿಗೆ ಒದಗಿಸುವುದರಿಂದ ಅಥವಾ ಹೊರದೇಶಗಳಿಗೆ ರಫ್ತು ಮಾಡುವುದರಿಂದ ಅಧಿಕಲಾಭ ಮತ್ತು ಸಂಪಾದನೆ ಸಾಧ್ಯ. ಈ ದಿಸೆಯಲ್ಲಿ ಆಸಕ್ತಿ ಉಳ್ಳವರಿಗೆ ಸಹಾಯಕಾರಿಯಾಗುವಂತೆ ವಿವಿಧ ಸುಗಂಧಯುಕ್ತ ಸಸ್ಯಗಳ ಪರಿಚಯವನ್ನು ಈ ಗ್ರಂಥದಲ್ಲಿ ಮಾಡಿಕೊಡಲಾಗಿದೆ.

ಅಧ್ಯಾಯ 2

ಸುಗಂಧದ್ರವ್ಯ ಸಸ್ಯಗಳು

1. ಅರಿಸಿನ

(ಕರ್ಕ್ಯುಮಾ ಡೊಮೆಸ್ಟಿಕಾ: Curcuma domestica Val.)

ವ್ಯಾಪನೆ : ಇದರ ತವರು ಚೀನಾ ಮತ್ತು ಈಸ್ಟ್ ಇಂಡೀಸ್, ಭಾರತದ ಉಷ್ಣಪ್ರದೇಶಗಳಲ್ಲಿ ಈ ಸಸ್ಯವನ್ನು ಅತ್ಯಧಿಕ ಪ್ರಮಾಣದಲ್ಲಿ ಸುಮಾರು 3000 ಹೆಕ್ಟೇರುಗಳಲ್ಲಿ ಬೆಳೆಯುತ್ತಾರೆ.

ವರ್ಣನೆ : ಭೂಮಿಯೊಳಗಡೆ ಕಿತ್ತಳೆ ಮಿಶ್ರಿತಹಳದಿ ಬಣ್ಣದ ಮೃದುವಾದ ಶಿಫಾವೃಂತಗಳಿದ್ದು ನೆಲದಮೇಲೆ ಎತ್ತರವಾದ ದೃಢವಾದ ಶಾಖೆಗಳಿರುತ್ತವೆ. ಸುಮಾರು 1.2 ಮೀಟರ್ ಉದ್ದದ ಪತ್ರವೃಂತ ಹೊಂದಿರುವ, ಕೆಳಭಾಗದಲ್ಲಿ ಸ್ವಲ್ಪ ಒಳಗಡೆಗೆ ತಿರುಚಿಕೊಂಡಿರುವ ದೊಡ್ಡ ಎಲೆಗಳಿರುತ್ತವೆ. ತಿಳಿನೇರಳೆ ಬಣ್ಣದ ಪುಷ್ಪಪತ್ರಕವುಳ್ಳ ಉದ್ದವಾಗಿರುವ ಸ್ಪೈಕ್ ಮಾದರಿಯ ಪುಷ್ಪಮಂಜರಿ. ಹೆಚ್ಚು ಪುಷ್ಪವೃಂತಪತ್ರಕಗಳಿರುವ ತಿಳಿಹಳದಿ ವರ್ಣದ ದ್ವಿಲಿಂಗ ಊರ್ಧ್ವ ಶಲಾಕೆ ಸ್ಥಿತಿಯ ಸಮದ್ವಿಪಾರ್ಶ್ವ ಹೂವುಗಳು. ಕೊಳವೆಯಾಕಾರದ, ಹಲ್ಲಿನ ರೀತಿಯಲ್ಲಿ ವಿಭಜನೆ ಹೊಂದಿದ 3 ಸಂಯುಕ್ತ ಪುಷ್ಪಪಾತ್ರ ಪತ್ರಕಗಳನ್ನು ಹೊಂದಿದ ಪುಷ್ಪಪಾತ್ರೆ. ಮೂರು ಸಂಯುಕ್ತ ಪುಷ್ಪದಳಗಳಿದ್ದು ಅಕ್ಷದ ಕಡೆಗೆ ಇರುವ ದಳವು ಉದ್ದವಾಗಿದ್ದು ಹೆಡೆಯನ್ನು ಹೋಲುವ ಲಾಳಿಕೆಯಾಕಾರದ ದಳವೃತ್ತ. ಆರು ಕೇಸರಗಳು ಎರಡು ವೃತ್ತಗಳಲ್ಲಿದ್ದು ಹೊರವೃತ್ತದ ಎರಡು ಪಾರ್ಶ್ವಕೇಸರಗಳು ಬಂಜೆಯಾಗಿ ಒಳವೃತ್ತದ ಅಕ್ಷದ ಕಡೆಯಿರುವ ದಳಾರೂಢ ಕೇಸರವು ಫಲವತ್ತಾಗಿದ್ದು ಉಳಿದ ಎರಡು ಕೇಸರಗಳು ಪುಷ್ಪದಳವಂತಿರುವ ಲೆಬೆಲಮ್ ಆಗಿ ಫಲವತ್ತಾದ ಕೇಸರದ ಸನಿಹದಲ್ಲಿ ಎರಡನೆಯ ಕೇಸರ ವೃತ್ತವಿರುತ್ತದೆ. ಮೂರು ಸಂಯುಕ್ತ ಅಂಡಕೋಶಗಳಲ್ಲಿ ಮೂರು ಕೋಣೆಯಿದ್ದು ಪ್ರತಿಯೊಂದು ಕೋಣೆಯಲ್ಲಿಯೂ ಅನೇಕ ಅಂಡಕಗಳು. ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಕೆಳಸ್ಥಾನದ ಅಂಡಾಶಯ. ಎರಡು ಭಾಗಗಳಾಗಿರುವ ಶಲಾಕಾಗ್ರವನ್ನು ಹೊಂದಿದ ಸರಳವಾಗಿ ದಾರದಂತಿರುವ ಶಲಾಕ. ಸಂಪುಟಿಕ ಮಾದರಿಯ ಹಣ್ಣು ಗೋಳಾಕಾರದ ನಿಧಾನವಾಗಿ ಒಡೆಯುವ ಮೂರು ಕವಾಟಗಳನ್ನು ಹೊಂದಿರುತ್ತದೆ.

ಉಪಯೋಗಗಳು : ಈ ಸಸ್ಯದ ಶಿಫಾವೃಂತಗಳನ್ನು ಚೆನ್ನಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಿ ಅರಿಸಿನ ಕೊಂಬನ್ನು ಸಿದ್ಧಪಡಿಸುವರು. ಈ ಅರಿಸಿನ ಕೊಂಬುಗಳಿಂದ ಪುಡಿಮಾಡಿದ ಅರಿಸಿನ ಪುಡಿಯು ತಿಳಿಕಿತ್ತಳೆಮಿಶ್ರಿತ ಹಳದಿ ವರ್ಣವಿದ್ದು

ಕಸ್ತೂರಿ ಸುವಾಸನೆಯನ್ನು ಬೀರುವುದಲ್ಲದೆ ಒಂದು ರೀತಿಯ ಕಹಿಯಾದ ರುಚಿಯನ್ನು ಹೊಂದಿರುತ್ತದೆ. ಅರಿಸಿನ ಪುಡಿಯನ್ನು ವಿವಿಧ ರೀತಿಯ ಆಹಾರ ಪದಾರ್ಥಗಳಾದ ಪಲ್ಯ, ಸಾಂಬಾರು, ಚೀಸ್, ಮಾಂಸಾಹಾರ ಪದಾರ್ಥಗಳ ತಯಾರಿಕೆಯಲ್ಲಿ ಬೇರೆ ಮಸಾಲೆಯ ಜೊತೆಗೆ ಬೆರೆಸಿ ಉಪಯೋಗಿಸುತ್ತಾರೆ. ಅರಿಸಿನವು ನಂಜುನಾಶಕ ಗುಣವನ್ನು ಹೊಂದಿರುವುದರಿಂದ ಇದನ್ನು ಅನೇಕ ಮುಖಾಲಂಕಾರ ವಸ್ತುಗಳಲ್ಲಿ ಬಳಸುವರು.



ಚಿತ್ರ 1 : ಅರಿಸಿನ

ಸಾಮಾನ್ಯವಾಗಿ ಮನೆಗಳಲ್ಲಿ ಚಿಕ್ಕಪುಟ್ಟ ರೋಗಗಳ ಉಪಶಮನಕ್ಕಾಗಿ ಅರಿಸಿನವನ್ನು ಉಪಯೋಗಿಸುವುದುಂಟು. ತಾಜಾ ಶಿಖಾವೃಂತಗಳನ್ನು ಕೊತ್ತಂಬರಿ ಮತ್ತು ದಾಲಚಿನ್ನಿಗಳ ಜೊತೆಗೆ ಬೆರೆಸಿ ಮಾಡಿದ ಕಷಾಯವನ್ನು ಕೆಮ್ಮು, ನೆಗಡಿ ಮೊದಲಾದವು

ಗಳ ನಿವಾರಣೆಗೆ ಉಪಯೋಗಿಸುವರು. ಅಲ್ಲದೆ ಅರಿಸಿನವನ್ನು ಆಗಾಗ್ಗೆ ಬರುವ ಜ್ವರ, ಕಾಮಣಿ ರೋಗ, ಜಠರ ರೋಗ, ಮೂತ್ರ ರೋಗಗಳ ನಿವಾರಣೆಗೆ ಉಪಯೋಗಿಸುವರು. ಅರಿಶಿನವು ನಂಜುನಾಶಕ ಗುಣವನ್ನು ಹೊಂದಿರುವ ಕಾರಣ ಇದರ ಪುಡಿಯನ್ನು ಸುಣ್ಣ ಅಥವಾ ಸ್ಫಟಿಕದ ಜೊತೆ ಬೆರೆಸಿ ತಯಾರಿಸಿದ ಮುಲಾಮನ್ನು ಹುಣ್ಣುಗಳಿಗೆ ಹಚ್ಚಲು ಹಾಗೂ ಉಳುಕು ಮತ್ತು ಬಾವುಗಳಂತಹ ಮೂಗುಪೆಟ್ಟುಗಳ ನೋವು ಕಡಮೆ ಮಾಡಲು ಉಪಯೋಗಿಸುವರು. ಶುಂಠಿ ಮತ್ತು ಅರಿಸಿನ ಕೊಂಬು ಗಳನ್ನು ತೇಯ್ದು ತಯಾರಿಸಿದ ಗಂಧವನ್ನು ತಲೆನೋವು ಕಡಮೆ ಮಾಡಲು ಉಪಯೋಗಿಸುತ್ತಾರೆ. ಬೆಚ್ಚಗಾದ ಸಾಸಿವೆ ಎಣ್ಣೆಯಲ್ಲಿ ಅರಿಸಿನ, ಈರುಳ್ಳಿ ಮತ್ತು ಗಾಂಜಾ ಎಲೆ ಇವುಗಳನ್ನು ಬೆರೆಸಿ ತಯಾರಿಸಿದ ಮುಲಾಮು, ಕಜ್ಜಿ, ಇಸಬು, ಗಜಕರ್ಣ ಮತ್ತು ಚರ್ಮದ ತುರಿ ಮೊದಲಾದ ಚರ್ಮದ ರೋಗಗಳನ್ನು ಗುಣಪಡಿಸಲು ದಿವ್ಯೌಷಧಿ ಯೆಂದು ಹೇಳುತ್ತಾರೆ. ಅರಿಸಿನವನ್ನು ಕೆಂಡದ ಮೇಲೆ ಹಾಕಿ ಬರುವ ಹೊಗೆಯನ್ನು ಚೇಳು ಕಡಿದ ಭಾಗಕ್ಕೆ ಹಿಡಿದರೆ ಉರಿ ಕಡಮೆಯಾಗುತ್ತದೆ.

2. ಏಲಕ್ಕಿ

(ಎಲೆಟ್ಟೇರಿಯ ಕಾರ್ಡಮೋಮಮ್: **Elettaria cardamomum Maton.**

ವ್ಯಾಪನೆ : ಈ ಸಸ್ಯದ ತವರು ಭಾರತ ದೇಶವೆಂದು ಹೇಳಬಹುದು. ಇದನ್ನು ಹೆಚ್ಚಾಗಿ ಭಾರತದ ದಕ್ಷಿಣ ಭಾಗ ಮತ್ತು ಶ್ರೀಲಂಕಾಗಳಲ್ಲಿ ಬೆಳೆಯುವರು. ಮಧ್ಯ ಅಮೆರಿಕೆಯಲ್ಲಿ ಮುಖ್ಯವಾಗಿ ಗ್ವಾಟೆಮಾಲಾ ಪ್ರದೇಶದಲ್ಲಿಯೂ ಸಹ ಬೆಳೆಯುವರು.

ವರ್ಣನೆ : ಸುಮಾರು 2.4 ಮೀಟರ್ ಅಡಿ ಎತ್ತರವಿದ್ದು, ಭೂಮಿಯೊಳಗಡೆ ಅನೇಕ ಕವಲುಗಳನ್ನು ಹೊಂದಿರುವ ಮೆದುವಾಗಿರುವ ಶಿಖಾವೃಂತದ ಮೇಲೆ ನೆಟ್ಟಗಿರುವ ಮಿಥ್ಯಾಕಾಂಡಗಳನ್ನು ಹೊಂದಿದ ಬಹುಸಾಂವತ್ಸರಿಕ ಶಾಖೆಗಳಿರುತ್ತವೆ. ಚಿಕ್ಕ ತೊಟ್ಟಿದ್ದು, ಸರಳವಾದ ಸಮ ಅಂಚಿನ, ಅಗಲ ಕಡಮೆಯಾಗಿರುವ ಎದ್ದು ಕಾಣುವ ಪತ್ರಮಧ್ಯನರವಿರುವ, ಎರಡು ಸಾಲಿನಲ್ಲಿ ಜೋಡಿಸಿರುವ ಎಲೆಗಳಿರುತ್ತವೆ. ಚಿಕ್ಕದಾದ ಪುಷ್ಪಮಂಜರಿ ವೃಂತವಿದ್ದು ಶಿಖಾವೃಂತವಿರದ ವಿಶೇಷವಾಗಿ ಹುಟ್ಟುವ ಮಿಶ್ರಪುಷ್ಪಮಂಜರಿಗಳು ನೆಲದ ಮೇಲೆ ಅಂಗಾತವಾಗಿ ಹರಡಿರುತ್ತವೆ. ಪುಷ್ಪವೃಂತ ಪತ್ರಕ ಹಾಗೂ ಪುಷ್ಪಪತ್ರಕವಿರುವ, ಸುಮಾರು 4 ಸೆಂಟಿಮೀಟರ್ ಉದ್ದವಿರುವ ಬಿಳಿ ಅಥವಾ ತಿಳಿಹಸುರು ಬಣ್ಣದ ದ್ವಿಲಿಂಗ ಊರ್ಧ್ವಶಲಾಕೆ ಸ್ಥಿತಿಯ ಸಮದ್ವಿಪಾರ್ಶ್ವ ರೂಪತೆಯ ಹೂವುಗಳಿರುತ್ತವೆ. ಪುಷ್ಪಪಾತ್ರೆ ಸಂಯುಕ್ತವಾಗಿದ್ದು ಪೊರೆಯಂತೆ, ಕೊಳವೆಯಾಕಾರ ಹಾಗೂ 3 ಚಿಕ್ಕ ಭಾಗಗಳಾಗಿದ್ದು ಶಾಶ್ವತವಾಗಿರುತ್ತದೆ. 3 ಸಂಯುಕ್ತ ದಳಗಳಿದ್ದು ಹೊರಉಬ್ಬಿದ ರೀತಿಯ ಮಧ್ಯದಳವು ದೀರ್ಘವೃತ್ತಾಕಾರ ವಾಗಿಯೂ ಪಾರ್ಶ್ವವೃತ್ತಾಕಾರವಾಗಿಯೂ ಪಾರ್ಶ್ವಭಾಗದ ದಳಗಳು ಕಿರಿದಾಗಿಯೂ ಇರುವ ಕೊಳವೆಯಾಕಾರದ ದಳವೃತ್ತ. ಬಿಳಿಮಿಶ್ರಿತನೇರಳೆ ವರ್ಣದ ಒಂದು ಲೆಬೆಲಮ್ ಉಳ್ಳ, ಹಲ್ಲಿನ ರೀತಿಯಲ್ಲಿ ವಿಭಜಿಸಿರುವ ಎರಡು ಬಂಜೆ ಕೇಸರ ಗಳಿರುವ ಚಿಕ್ಕ ಕೇಸರದಂಡವಿದ್ದು ಒಂದು ಫಲವತ್ತಾದ ಕೇಸರವನ್ನುಳ್ಳ ಕೇಸರ

ಮಂಡಲ. ಮೂರು ಸಂಯುಕ್ತ ಅಂಡಕೋಶಗಳುಳ್ಳ, ಕೆಳ ಅಂಡಾಶಯದಲ್ಲಿ ಮೂರು ಕೋಣೆಯಿದ್ದು ಪ್ರತಿಯೊಂದು ಕೋಣೆಯಲ್ಲಿ ಅಕ್ಷಕ ಅಂಡಕಾಧಾರಕ್ಕೆ ಅಂಟಿ ಕೊಂಡಿರುವ ಅನೇಕ ಅಂಡಕಗಳಿರುತ್ತವೆ. ಚಿಕ್ಕ ಲಾಳಿಕೆಯಾಕಾರದ ಶಲಾಕಾಗ್ರವಿದ್ದು, ದಾರದಂತಿರುವ ಶಲಾಕವುಳ್ಳ ಜಾಯಾಂಗವಿರುತ್ತದೆ. ತಿಳಿಹಸುರು ಅಥವಾ ಹಳದಿ ವರ್ಣದ 1.5 ಸೆಂಟಿಮೀಟರ್ ಉದ್ದವಿರುವ ಒಡೆಯದಂತಿರುವ ಸಂಪುಟಕ ಮಾದರಿ ಫಲ. ಮೂರುಕೋನಗಳಿರುವ, ಕಂದುಮಿಶ್ರಿತ ಕಪ್ಪು ಬಣ್ಣದ ಸುವಾಸನಾಯುಕ್ತ ಬೀಜಗಳು.



ಚಿತ್ರ 2 : ಏಲಕ್ಕಿ

ಉಪಯೋಗಗಳು : ಏಲಕ್ಕಿ ಕಾಯಿಗಳನ್ನು ಗಂಧಕದ ಹೊಗೆಯಿಂದ ಶುದ್ಧ ಪಡಿಸಿ ಬೆಳ್ಳಗೆಮಾಡಿ ಮಾರುಕಟ್ಟೆಗೆ ಕಳಿಸುವರು. ಏಲಕ್ಕಿಗೆ ಅತೀ ಸುವಾಸನೆಯಿರು ವುದರಿಂದ ಕೇಕ್, ಮಿಠಾಯಿ, ಎಲ್ಲ ಸಿಹಿತಿನಿಸುಗಳು ಮತ್ತು ಅನೇಕ ಪಾನೀಯಗಳನ್ನು ಸುವಾಸಿತಗೊಳಿಸಲು ಮತ್ತು ರುಚಿ ನೀಡಲು ಹೆಚ್ಚಾಗಿ ಉಪಯೋಗಿಸುವರು.

ಸುಗಂಧಯುಕ್ತ ತಾಂಬೂಲದಲ್ಲಿ ಏಲಕ್ಕಿಯನ್ನು ಮುಖ್ಯವಾಗಿ ಬಳಸುವರು. ಬೀಜಗಳಿಂದ ತಯಾರಿಸಿದ ಏಲಕ್ಕಿ ತೈಲವನ್ನು ಅನೇಕ ಪೇಯಗಳನ್ನು ಸುವಾಸಿತಗೊಳಿಸಲು ಮತ್ತು ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಉಪಯೋಗಿಸುವರು.

ಏಲಕ್ಕಿ ಬೀಜಗಳನ್ನು ಜೀರ್ಣಕಾರಿ ಹಾಗೂ ಹೊಟ್ಟೆ ಉಬ್ಬರ ನಿವಾರಕವಾಗಿ ಉಪಯೋಗಿಸುವರು. ಮುಖ್ಯವಾಗಿ ಲವಂಗ, ಶುಂಠಿ ಮತ್ತು ಸೀಮೆ ಸೋಂಪು ಜೊತೆ ಬೆರೆಸಿ ಮಾಡಿದ ಪುಡಿಯನ್ನು ಅಜೀರ್ಣರೋಗಗಳ ನಿವಾರಣೆಗೆ ಉಪಯೋಗಿಸುವರು. ಇದರ ತೈಲವನ್ನು ಹಲ್ಲು ಒಸಡುಗಳ ನೋವು ನಿವಾರಣೆಗಾಗಿ ಉಪಯೋಗಿಸುವರು.

3. ಏಂಜಲಿಕಾ

(ಏಂಜಲಿಕಾ ಆರ್ಕಾಂಜೆಲಿಕಾ: Angelica archangelica Linn.)

ವ್ಯಾಪನೆ : ಸಿರಿಯಾ ದೇಶವು ಈ ಸಸ್ಯವನ್ನು ಬೆಳೆಯುವ ಮೂಲ ದೇಶವಾಗಿದ್ದು ಯೂರೋಪ್ ಮತ್ತು ಪಶ್ಚಿಮ ಏಷಿಯಾದ ಅನೇಕ ಪ್ರದೇಶಗಳಲ್ಲಿ ಇದು ಬೆಳೆಯುತ್ತದೆ. ಅಲ್ಲದೆ ಲ್ಯಾಪ್‌ಲ್ಯಾಂಡ್ ಮತ್ತು ಆಲ್ಪ್ಸ್ ಪ್ರದೇಶಗಳಲ್ಲಿ ಕೂಡ ಬೆಳೆಯುತ್ತದೆ.

ವರ್ಣನೆ : ಸಾಮಾನ್ಯವಾಗಿ ಎತ್ತರವಾಗಿರುವ ಶಾಖೆಗಳು. 1 ರಿಂದ 3 ವಿಭಾಗಗಳಾಗಿರುವ ಪರ್ಯಾಯ ಜೋಡಣೆಯ, ಹಲ್ಲಿನ ರೀತಿ ಅಂಚುಳ್ಳ, ಸಾಮಾನ್ಯವಾಗಿ ದೊಡ್ಡದಾದ ಕಿರು ಎಲೆಗಳನ್ನು ಹೊಂದಿದ ಗರಿರೂಪದ ಸಂಯುಕ್ತ ಎಲೆಗಳು. ಸಂಯುಕ್ತ ಛತ್ರಿಮಾದರಿ ಪುಷ್ಪಮಂಜರಿ. ಪುಷ್ಪಪತ್ರಕ ಮತ್ತು ಚಿಕ್ಕ ಪುಷ್ಪವೃಂತ ಪತ್ರಕವಿರುವ, 5 ಸುತ್ತುಗಳಿರುವ ಉಪರಿಶಲಾಕೆ, ದ್ವಿಲಿಂಗ ಸಮದ್ವಿಪಾರ್ಶ್ವ ರೂಪತೆಯ ಹೂವುಗಳು. ಬಹುಚಿಕ್ಕದಾದ, ಹಲ್ಲಿನ ರೀತಿಯ, 5 ಬಿಡಿ ಪುಷ್ಪಪಾತ್ರಪತ್ರಕಗಳು. ದೀರ್ಘಅಂಡಾಕಾರದ, ಬಿಳಿಮಿಶ್ರಿತಹಸುರು ವರ್ಣದ 5 ಬಿಡಿ ಪುಷ್ಪದಳಗಳು. ಪ್ರವರ್ತನ ಮಾದರಿ ಜೋಡಣೆ. ಪರಾಗ ಕೋಶಗಳನ್ನು ಹೊಂದಿದ 5 ಬಿಡಿಯಾಗಿರುವ ಕೇಸರಗಳು. ಕೆಳಭಾಗದಲ್ಲಿರುವ ಎರಡು ಸಂಯುಕ್ತ ಅಂಡಕೋಶಗಳಲ್ಲಿ ಎರಡು ಕೋಣೆಗಳಿದ್ದು ಪ್ರತಿಕೋಣೆಯಲ್ಲೂ ಒಂದೊಂದು ಅಂಡಕ. ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಜಾಯಾಂಗವಿರುತ್ತದೆ. ಅಂಡಾಕಾರ ಅಥವಾ ದೀರ್ಘವೃತ್ತಾಕಾರದ, ಹೊರಮೈ ಕುಗ್ಗಿರುವ ಪಾರ್ಶ್ವ ಬದಿಯ ದಿಣ್ಣೆಗಳು. ಅಗಲವಾದ ರೆಕ್ಕೆಗಳನ್ನು ಹೊಂದಿರುವ, ಹೊರಮೈ ಮೇಲಿರುವ ಮತ್ತು ಮಧ್ಯಮ ಅಂಡಾಶಯವಿದ್ದು ಅಸ್ಪಷ್ಟ ದಿಣ್ಣೆಗಳಿರುವ ಕ್ರಿಮೋಕಾರ್ಪ್ ಫಲ.

ಉಪಯೋಗಗಳು : ಈ ಸಸ್ಯದ ಎಲ್ಲ ಭಾಗಗಳೂ ಸುವಾಸನೆಯನ್ನು ಹೊಂದಿರುತ್ತವೆ. ಇದರ ಬೇರು ಮತ್ತು ಹಣ್ಣುಗಳನ್ನು ಒಣಗಿಸಿ ಕೇಕ್, ಕ್ಯಾಂಡಿ ಮತ್ತು ಅನೇಕ ಒಗರಾಗಿರುವ ಮದ್ಯಪಾನೀಯಗಳನ್ನು ಸುವಾಸಿತಗೊಳಿಸಲು ಉಪಯೋಗಿಸುವರು. ಎಳೆಯಕಾಂಡ ಮತ್ತು ಎಲೆಗಳ ತೊಟ್ಟುಗಳನ್ನು ಸಕ್ಕರೆಪಾಕದಲ್ಲಿ ನೆನೆಸಿ(ಊರು ಹಾಕಿ)ಸಿಹಿ ಮಾಡುವರು. ಈ ಸಿಹಿ ಹಸುರು ವರ್ಣವನ್ನು ಹೊಂದಿದ್ದು


ತುಂಬಾ ಆಕರ್ಷಕವಾಗಿರುತ್ತದೆ. ಆದ್ದರಿಂದ ಕಾಂಡ ಮತ್ತು ಎಲೆಗಳ ತೊಟ್ಟುಗಳನ್ನು ಕ್ಯಾಂಡಿ ಮತ್ತು ಕೇಕ್‌ಗಳನ್ನು ಶೃಂಗರಿಸಲು ಮತ್ತು ಅವುಗಳಿಗೆ ರುಚಿನೀಡಲು ಉಪಯೋಗಿಸುತ್ತಾರೆ.

ಸುವಾಸಿತ ತೈಲವನ್ನು ಸಾಮಾನ್ಯವಾಗಿ ಫಲಗಳನ್ನು ಬಾಷ್ಪೀಕರಿಸಿ ತಯಾರಿಸುತ್ತಾರೆ. ಈ ತೈಲವನ್ನು ಅತ್ತರ್ ತಯಾರಿಕೆಯಲ್ಲಿ ಮತ್ತು ತಿನಿಸುಗಳಿಗೆ ರುಚಿನೀಡಲು ಹಾಗೂ ಕೆಲವು ಔಷಧಿಗಳಿಗೆ ಸುವಾಸನೆ ನೀಡಲು ಉಪಯೋಗಿಸುತ್ತಾರೆ.

4. ಐರಿಸ್ ಪೆಲ್ಲಿಡಾ (Iris pallida Linn.)

ವ್ಯಾಪನೆ : ಸಾಮಾನ್ಯವಾಗಿ ಉಷ್ಣವಲಯದ ಎತ್ತರಭಾಗದಲ್ಲಿ ಈ ಸಸ್ಯವನ್ನು ಬೆಳೆಯುವರು. ಈ ಸಸ್ಯವು ದಕ್ಷಿಣ ಯೂರೋಪ್; ಇಟಲಿ, ಇರಾನ್ ಮತ್ತು ಉತ್ತರ ಭಾರತದಲ್ಲಿ ಬೆಳೆಯುತ್ತದೆ.

ವರ್ಣನೆ : ಬಹು ಸಾಂವತ್ಸರಿಕ ಶಾಖೆಗಳು. ತೆವಳುವಂಥ ಅಥವಾ ಗಡ್ಡೆಯಾಕಾರದ ಶಿಫಾವೃಂತ. ಹೆಚ್ಚಾಗಿ ಕೆಳಭಾಗದಲ್ಲಿರುವ, ಸಮಾನಾಂತರ ನರವಿನ್ಯಾಸವನ್ನು ಹೊಂದಿದ, ಕತ್ತರಿಯಾಕಾರದ ಎಲೆಗಳು. ಅಂತ್ಯಾರಂಭಿ ರೀತಿಯ ಎರಡು ಪುಷ್ಪಪತ್ರಕಗಳನ್ನು ಹೊಂದಿದೆ. ಸುಂದರವಾಗಿ ಎದ್ದು ಕಾಣುವ, ಸಮದ್ವಿಲಿಂಗ ಹೂವುಗಳು. ಉದ್ದ ಅಥವಾ ಗಿಡ್ಡವಾಗಿರುವ ಪರಿದಳ ಪುಂಜಗಳು ಎರಡು ವೃತ್ತಗಳಲ್ಲಿದ್ದು ಹೊರಗಿನ ವೃತ್ತದಲ್ಲಿ 3 ದೊಡ್ಡವೂ ಒಳಗಿನ ವೃತ್ತದಲ್ಲಿ 3 ಸಣ್ಣವೂ ಇರುವ 6 ಪರಿದಳಗಳು. ಹೊರಗಿನ ವೃತ್ತದಲ್ಲಿರುವ ಪ್ರತಿಯೊಂದು ಪರಿದಳದ



ಚಿತ್ರ 3 : ಐರಿಸ್ ಪೆಲ್ಲಿಡಾ

ಕೆಳಭಾಗದಲ್ಲಿ ಜೋಡಿಸಿರುವ 3 ಕೇಸರಗಳು. 3 ಅಂಡಕೋಶಗಳುಳ್ಳ 3 ಕೋಣೆಗಳು. ಕೆಳ ಅಂಡಾಶಯದಲ್ಲಿ ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಅನೇಕ ಅಂಡಕಗಳು. ಗಿಡ್ಡ ಶಲಾಕೆಯಲ್ಲಿ ಎರಡು ಭಾಗಗಳಾಗಿ ವಿಭಜಿಸಿರುವ ಶಲಾಕಾಗ್ರವಿರುವ ಸ್ತ್ರೀಕೇಸರವಿದೆ. 3 ಅಥವಾ 6 ದಿಂಡುಗಳನ್ನು ಹೊಂದಿದ, ಒರಟಾಗಿರುವ ಸಂಪುಟಕ ಹಣ್ಣು; ಚಪ್ಪಟೆ ಅಥವಾ ದುಂಡಗಿರುವ ಬೀಜಗಳು.

ಉಪಯೋಗಗಳು : ಈ ಸಸ್ಯ ಮತ್ತು ಈ ಸಸ್ಯದ ಇನ್ನು ಕೆಲವು ಪ್ರಭೇದಗಳ ಶಿಫಾವೃಂತಗಳು ವಯೊಲೆಟ್ ತೈಲದ ರೀತಿಯ ಸುವಾಸನೆ ಬೀರುವ ಓರಿಸ್ ಸುಗಂಧ ತೈಲವನ್ನು ಹೊಂದಿರುತ್ತವೆ. ಸಸ್ಯಗಳ ಶಿಫಾವೃಂತಗಳನ್ನು ಸುಲಿದು ಬಿಸಿಲಿನಲ್ಲಿ ಒಣಗಿಸಿದರೆ ಕ್ರಮೇಣವಾಗಿ ಸುವಾಸನೆ ಹೊಮ್ಮಲು ಪ್ರಾರಂಭವಾಗುತ್ತದೆ. ಈ ಓರಿಸ್ ತೈಲವನ್ನು ಅನೇಕ ಆಹಾರ ಪದಾರ್ಥಗಳಿಗೆ ಸುವಾಸನೆ ಮತ್ತು ರುಚಿ ನೀಡಲು ಉಪಯೋಗಿಸುವರು. ಸುವಾಸನೆ ಬೀರುವ ವಯೊಲೆಟ್ ಪುಡಿ ತಯಾರಿಕೆಯಲ್ಲಿ ಈ ಸಸ್ಯದ ಬೇರಿನ ಸುಗಂಧಯುಕ್ತ ಚೂರ್ಣವನ್ನು ಮುಖ್ಯವಾಗಿ ಉಪಯೋಗಿಸುವರು. ಓರಿಸ್ ಸುಗಂಧ ತೈಲವು ವಯೊಲೆಟ್ ಸುಗಂಧ ತೈಲದಂತಹ ಸುವಾಸನೆಯನ್ನು ಹೊಂದಿರುವ ಕಾರಣ ಈ ಓರಿಸ್ ಟಿಂಕ್ಚರನ್ನು ವಯೊಲೆಟ್ ಸುಗಂಧ ತೈಲದಲ್ಲಿ ಬೆರಕೆ ಮಾಡಲು ಉಪಯೋಗಿಸುವರು.

5. ಕರ್ಪೂರ ತುಲಸಿ

(ಓಸಿಮಮ್ ಕಿಲಿಮಾಂಡ್‌ಶಾರಿಕಂ (ಕ್ಯಾಂಫರ್ ಬಾಸಿಲಮ್);

Ocimum kilimand scharicum Guerke (Camphor basilum))

ವ್ಯಾಪನೆ : ಪೂರ್ವ ಆಫ್ರಿಕ ಈ ಸಸ್ಯವನ್ನು ಬೆಳೆಯುವ ಮೂಲದೇಶ. 1942 ನೇ ವರ್ಷದಿಂದ ಈ ಸಸ್ಯವನ್ನು ಭಾರತ ದೇಶದಲ್ಲಿ ಬೆಳೆಸಲು ಪ್ರಾರಂಭಿಸಲಾಯಿತು. ಇತ್ತೀಚೆಗೆ ಭಾರತದ ಅನೇಕ ಪ್ರದೇಶಗಳಲ್ಲಿ ಈ ಸಸ್ಯವನ್ನು ಪ್ರಯೋಗಾತ್ಮಕವಾಗಿ ಬೆಳೆಯುವುದು ಕಂಡುಬಂದಿದೆ. ವಿವಿಧ ರೀತಿಯ ಮಣ್ಣು ಮತ್ತು ಹವಾಮಾನಗಳಲ್ಲಿ ಈ ಬೆಳೆಯನ್ನು ಬೆಳೆಯುವುದು ಸಾಧ್ಯವಾದರೂ ಜಿಗುಟು ಮಣ್ಣಿನ ಭೂಮಿಯು ಈ ಬೆಳೆಗೆ ತುಂಬಾ ಶ್ರೇಷ್ಠವಾದುದು.

ವರ್ಣನೆ : ಬಹು ಸಾಂವತ್ಸರಿಕ. ಅನೇಕ ಕೊಂಬೆಗಳನ್ನು ಹೊಂದಿದ, ಕರ್ಪೂರದ ವಾಸನೆಯಿರುವ ಸುಮಾರು 1–1.5 ಮೀಟರ್ ಎತ್ತರವಿರುವ ಪೊದರು. ನಾಲ್ಕು ಏಣುಗಳುಳ್ಳ ಮೃದು ಕಾಂಡ. ವೃಂತ ಪರ್ಣವಿಲ್ಲದ, ಸರಳವಾದ, ಅಭಿಮುಖ ಅಥವಾ ಮೇಲ್ಭಾಗದಲ್ಲಿ ಸುತ್ತು ಜೋಡಣೆಯ, ರೋಮಗಳಿಂದ ಆಚ್ಛಾದಿತವಾದ, ಹಲ್ಲಿನ ರೀತಿಯ ಅಂಚುಳ್ಳ, ಸುಮಾರು 6ಸೆಂಟಿಮೀಟರ್ ಉದ್ದ ತೊಟ್ಟುಳ್ಳ ಎಲೆಗಳು. ಕಾಂಡ ಅಥವಾ ರೆಂಬೆಗಳ ತುದಿಯಲ್ಲಿರುವ ಅಂತ್ಯಾರಂಭಿ ರೀತಿಯ ಪುಷ್ಪಮಂಜರಿ. ಉದ್ದವಾಗಿ, ತಿಳಿನೇರಿಳೆ ಅಥವಾ ನಸುಗೆಂಪುಮಿಶ್ರಿತ ಬಿಳಿವರ್ಣದ ಚಿಕ್ಕ ಪುಷ್ಪ ಪತ್ರಕವಿರುವ, ತೊಟ್ಟಿಲ್ಲದ, ದ್ವಿಲಿಂಗ, ಸಮದ್ವಿಪಾರ್ಶ್ವ ರೂಪತೆಯ, ಅಧೋಶಲಾಕೆ ಸ್ಥಿತಿಯ ಹೂವುಗಳು. 5 ಸಂಯುಕ್ತ ಪುಷ್ಪಪಾತ್ರ ಪತ್ರಕಗಳುಳ್ಳ ಪುಷ್ಪಪಾತ್ರೆ.

5 ಸಂಯುಕ್ತ ತುಟಿಗಳಂತಿರುವ ಹೆಂಚುಹೊದಿಕೆ ರೀತಿ ಜೋಡಿಸಿರುವ ಪುಷ್ಪದಳಗಳು. 4 ದ್ವಿದೀರ್ಘ ಪ್ರವರ್ತನ ರೀತಿಯ ಜೋಡಣೆಯ ಪರಾಗಕೋಶವುಳ್ಳ ಕೇಸರಗಳು. ಎರಡು ಅಂಡಕೋಶಗಳುಳ್ಳ, ಉಚ್ಚಸ್ಥಾನದ ಅಂಡಾಶಯ. ಮೊದಲು ಎರಡು ಕೋಣೆಗಳನ್ನು ಹೊಂದಿದ್ದು ಬಳಿಕ 4 ಕೋಣೆಗಳಾಗಿ ಪ್ರತಿಯೊಂದು ಕೋಣೆಯಲ್ಲೂ ಒಂದೊಂದು ಅಂಡಕವು ಅಕ್ಷಕದ ಅಂಡಕಾಧಾರಕ್ಕೆ ಅಂಟಿಕೊಂಡಿರುತ್ತದೆ. ಜಾಯಾಂಗ ಮೂಲ ಶಲಾಕೆಯುಳ್ಳ, ಎರಡು ಭಾಗಗಳಿರುವ ಶಲಾಕಾಗ್ರವುಳ್ಳ ಜಾಯಾಂಗ. ಕಿರುಕರಟಕಾಯಿ ಫಲ.



ಚಿತ್ರ 4 : ಕರ್ಪೂರ ತುಲಸಿ (ಹೂಗೊಂಚಲು)

ಉಪಯೋಗಗಳು : ಸಸ್ಯದ ಎಲೆಗಳಿಂದ ಸುವಾಸನೆಯುಳ್ಳ ಕರ್ಪೂರವನ್ನು ಬಾಷ್ಪೀಕರಣದ ಮೂಲಕ ತೆಗೆಯುತ್ತಾರೆ. ಸಸ್ಯವು ಬೆಳೆದ ಕೆಲವೇ ತಿಂಗಳಲ್ಲಿ ಕಟಾವಿಗೆ ಆಯ್ದುಕೊಳ್ಳಬಹುದು. ಒಂದು ವರ್ಷದಲ್ಲಿ ಎರಡು ಅಥವಾ ಮೂರು ಬಾರಿ ಕಟಾವು ಮಾಡಬಹುದು. ಭೂಮಿಯಿಂದ 10 ಅಥವಾ 12 ಸೆಂಟಿಮೀಟರ್ ಗಿಡದ ಭಾಗವನ್ನು ಬಿಟ್ಟು ಮಿಕ್ಕ ಮೇಲ್ಭಾಗವನ್ನು ಕಟಾವು ಮಾಡಿ ಅನೇಕ ಕಟ್ಟುಗಳಲ್ಲಿ ಕಟ್ಟಿ, ಒಣಗಿದ ನಂತರ ಒಣ ಎಲೆಗಳನ್ನು ಚಿಕ್ಕ ಬಾಷ್ಪೀಕರಣ ಪಾತ್ರೆಗಳಲ್ಲಿ ಆವಿ ರೀತಿಯ ಬಾಷ್ಪೀಕರಣ ಮಾಡುವುದರಿಂದ ಶೇಕಡಾ 50–70 ರಷ್ಟು ಕರ್ಪೂರವನ್ನು ಪಡೆಯಬಹುದು. ಬಾಷ್ಪೀಕರಣದ ನಂತರ ಕರ್ಪೂರದ ಜೊತೆಗೆ ಒಂದು ವಿಧವಾದ ಕರ್ಪೂರದ ವಾಸನೆ

ಯನ್ನು ಹೊಂದಿದ ಸುಗಂಧತೈಲವನ್ನು ಸಹ ಪಡೆಯಬಹುದು. ಈ ಎಣ್ಣೆಯನ್ನು ಕಡಮೆ ಉಷ್ಣತೆಯಲ್ಲಿ ಘನೀಭವಿಸುವುದರಿಂದಲೂ ಸ್ವಲ್ಪ ಪ್ರಮಾಣದಲ್ಲಿ ಕರ್ಪೂರವನ್ನು ಪಡೆಯಬಹುದು. ಒಂದು ಹೆಕ್ಟೇರ್‌ನಲ್ಲಿ ಸುಮಾರು 90 ಕಿಲೋಗ್ರಾಮ್ ಉತ್ಪನ್ನ ಪಡೆಯಬಹುದು. ಭಾರತದಲ್ಲಿ ಕರ್ಪೂರವನ್ನು ದೈವಾರಾಧನೆ ಕಾರ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವರು. ಬಾಷ್ಪೀಕರಣ ಮೂಲಕ ತಯಾರಿಸಿದ ಸುಗಂಧ ತೈಲವನ್ನು ಕೆಲವು ಸಾಬೂನುಗಳನ್ನು ಸುವಾಸಿತಗೊಳಿಸಲು ಬಳಸುವರು.

ಕರ್ಪೂರವನ್ನು ಸೆಲ್ಯೂಲಾಯಿಡ್ ಪದಾರ್ಥದ ತಯಾರಿಕೆ, ಕೆಲವು ಸ್ಫೋಟಕ ವಸ್ತುಗಳ ತಯಾರಿಕೆ, ಅನೇಕ ಔಷಧಿಗಳು, ಮುಖ್ಯವಾಗಿ ಸೋಂಕು ನಿವಾರಕ ಔಷಧಿ, ದಂತಮಾರ್ಜಕ, ಮುಲಾಮು, ಗಾಜಿನ ಮೇಲೆ ಬಂಗಾರದ ವರ್ಣಚಿತ್ರಗಳನ್ನು ಬರೆಯುವ ವಸ್ತುಗಳ ತಯಾರಿಕೆಯಲ್ಲಿ ಸಹ ಉಪಯೋಗಿಸುವರು. ಕರ್ಪೂರವನ್ನು ಕೊಬ್ಬರಿ ಎಣ್ಣೆಯ ಜೊತೆಯಲ್ಲಿ ಬೆರೆಸಿ ಕೆಲವು ಚರ್ಮರೋಗಗಳ ನಿವಾರಣೆಗೆ ಉಪಯೋಗಿಸುವರು.

6. ಕರಿಬೇವು

(ಮುರ್ರಾಯ ಕೋಯೆನಿಗಿ: Murraya koenigii Spreng.)

ವ್ಯಾಪನೆ : ಈ ಸಸ್ಯದ ತವರು ಭಾರತ ಮತ್ತು ಪಾಕಿಸ್ತಾನ. ಹಿಮಾಲಯದ ತಪ್ಪಲಲ್ಲಿ ಸಹ ಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತದೆ. ಕೊಂಕಣ, ಮಹಾಬಲೇಶ್ವರ ಮೊದಲಾದ ದಕ್ಷಿಣ ಭಾರತದ ಬೆಟ್ಟಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತದೆ. ಅನೇಕ ಪ್ರದೇಶಗಳಲ್ಲಿ ಈ ಸಸ್ಯವನ್ನು ಸುವಾಸಿತ ಎಲೆಗಳಿಗಾಗಿ ತೋಟಗಳಲ್ಲಿ ಬೆಳೆಯುತ್ತಾರೆ.

ವರ್ಣನೆ : ದಟ್ಟ ಬೂದು ತೊಗಟೆಯುಳ್ಳ ಚಿಕ್ಕಮರ. ಪತ್ರವೃಂತವಿರುವ, ಸುಮಾರು 30 ಸೆಂಟಿಮೀಟರ್ ಉದ್ದವಾಗಿರುವ, ಪರ್ಯಾಯ ಜೋಡಣೆಯ, ಅಸಮಗರಿರೂಪದ 15–25 ಕಿರು ಎಲೆಗಳು. ಮಿಶ್ರರೀತಿ ಜೋಡಣೆಯ ಪುಷ್ಪಮಂಜರಿ. ರೋಮಗಳಿರುವ ಪುಷ್ಪವೃಂತ ಹೊಂದಿದ, ದ್ವಿಲಿಂಗ ತ್ರಿಜ್ಯಸಮಪಾರ್ಶ್ವಕ ಉಪರಿ ಶಲಾಕೆ ಸ್ಥಿತಿಯ, ಬಿಳಿಯ ವರ್ಣದ ಹೂವುಗಳು ರೋಮಗಳನ್ನು ಹೊಂದಿದ, ತ್ರಿಕೋನಾಕಾರದ 5 ಬಿಡಿ ಪುಷ್ಪಪಾತ್ರ ಪತ್ರಕಗಳು. 0.5 ಸೆಂಟಿಮೀಟರ್ ಉದ್ದವಾಗಿದ್ದು, ದೀರ್ಘವೃತ್ತಾಕಾರದ, ತುದಿಯಲ್ಲಿ ಗೋಳಾಕಾರವಾಗಿರುವ, ಗ್ರಂಥಿ ಚುಕ್ಕೆಗಳನ್ನು ಹೊಂದಿದ, 5 ಬಿಡಿ ಪುಷ್ಪಗಳು. ಅಡಿಯಲ್ಲಿ ಅಗಲವಾಗಿರುವ ಕೇಸರ ದಂಡಗಳನ್ನು ಹೊಂದಿದ, ಎರಡು ಸುತ್ತಿನಲ್ಲಿ ಜೋಡಿಸಿರುವ 10 ಕೇಸರಗಳು. 4 ಸಂಯುಕ್ತ ಅಂಡಕೋಶಗಳಿದ್ದು, ಎರಡು ಕೋಣೆಗಳಿರುತ್ತವೆ. ಪ್ರತಿಯೊಂದು ಕೋಣೆಯಲ್ಲೂ ಒಂದು ಅಂಡಕವು ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಮೇಲು ಸ್ಥಾನದ ಅಂಡಾಶಯವನ್ನು ಹೊಂದಿದ ಜಾಯಾಂಗವಿರುತ್ತದೆ. ಗುಂಪು ಗುಂಪಾಗಿ ಹೊಂದಿಕೊಂಡಿರುವ, ಕಡುಕಂದು ದುಂಡನೆಯ ತುದಿಯಲ್ಲಿ ಚೂಪಾಗಿರುವ ರಸಫಲ.

ಉಪಯೋಗಗಳು : ಈ ಮರದ ಎಲೆಗಳು ತುಂಬ ವಾಸನೆಯನ್ನು ಹೊಂದಿರುತ್ತವೆ. ಎಲೆಗಳನ್ನು ಅಡಿಗೆಯ ತಯಾರಿಕೆಯಲ್ಲಿ ಹಾಗೂ ಒಗ್ಗರಣೆ ಹಾಕುವುದಕ್ಕೆ, ವಾಸನೆ ಮತ್ತು ರುಚಿಗಾಗಿ ಬಳಸುತ್ತಾರೆ.



ಚಿತ್ರ 5 : ಕರಿಬೇವು

ಈ ಸಸ್ಯದ ಎಲೆ, ತೊಗಟೆ ಮತ್ತು ಬೇರುಗಳನ್ನು ಔಷಧಿ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಹಸಿಯ ಎಲೆಗಳನ್ನು ಭೇದಿ ಮತ್ತು ಆಮಶಂಕೆ ವ್ಯಾಧಿಯುಳ್ಳ ರೋಗಿಗಳಿಗೆ ಹಾಗೆಯೇ ತಿನ್ನಲು ಕೊಡುತ್ತಾರೆ. ಬೆಂಕಿಯ ಮೇಲೆ ಎಲೆಗಳನ್ನು ಸುಟ್ಟು ಅವರಿಂದ ಮಾಡಿದ ಕಷಾಯವನ್ನು ವಾಂತಿಯನ್ನು ತಡೆಗಟ್ಟಲು ಕೊಡುತ್ತಾರೆ. ಎಲೆಗಳನ್ನು ಜಜ್ಜಿ ಅದನ್ನು ಮೂಗು ಪೆಟ್ಟು ಮತ್ತು ಗುಳ್ಳೆಗಳಿರುವ ಭಾಗಕ್ಕೆ ಸವರುತ್ತಾರೆ. ಹಾಲಿನ ಜೊತೆ ಜಜ್ಜಿದ ಎಲೆಗಳನ್ನು ವಿಷಪೂರಿತ ಪ್ರಾಣಿಗಳ ಕಡಿತಗಳಿಗೆ ಹಚ್ಚಲು ಉಪಯೋಗಿಸುತ್ತಾರೆ.


ಈ ಮರದ ತೊಗಟೆ ಮತ್ತು ಬೇರುಗಳನ್ನು ದೇಹದಲ್ಲಿ ಚೈತನ್ಯವನ್ನುಂಟು ಮಾಡಲು ಉಪಯೋಗಿಸುತ್ತಾರೆ. ಬೇರು ಮತ್ತು ತೊಗಟೆಯನ್ನು ಸಹ ಜಜ್ಜಿ ಗುಳ್ಳೆ ಮತ್ತು ಮೂಗು ಪೆಟ್ಟುಗಳಿಗೆ, ವಿಷಪೂರಿತ ಪ್ರಾಣಿಗಳ ಕಡಿತದಿಂದ ಆದ ಗಾಯಗಳಿಗೆ ಲೇಪಿಸುತ್ತಾರೆ. ಬೇರನ್ನು ಭೇದಿ ವಿರೇಚಕವಾಗಿಯೂ ಸಹ ಉಪಯೋಗಿಸುತ್ತಾರೆ.

7. ಕರಿಮೆಣಸು

(ಪೈಪರ್ ನೈಗ್ರಮ್ : **Piper nigrum Linn.**)

ಈ ಪ್ರಭೇದವು ದಾರು ರೀತಿಯ ಕಾಂಡವನ್ನು ಹೊಂದಿದ ಏರು ಬಳ್ಳಿಯಾಗಿದ್ದು ಅಗಲ, ಅಂಡಾಕಾರದ ಎಲೆಗಳನ್ನು ಹೊಂದಿರುತ್ತದೆ. ಉದ್ದವಾದ ಗೊನೆಮಾದರಿ ಪುಷ್ಪಮಂಜರಿಯಲ್ಲಿ ಹೂವುಗಳಿರುತ್ತವೆ. ಹಣ್ಣುಗಳು ಚಿಕ್ಕವು, ಗೋಲಾಕಾರ, 6–7 ಮಿಲಿಮೀಟರ್ ವ್ಯಾಸ, ಎಳೆಯದಾಗಿದ್ದಾಗ ಹಳದಿ, ಪಕ್ವವಾದಾಗ ಕೆಂಪಗಿರುತ್ತವೆ.

ಉಪಯೋಗಗಳು : ಕರಿ ಮೆಣಸಿನ ಹಣ್ಣಿನ ಗೊಂಚಲಿನಲ್ಲಿ ಕೆಲವು ಹಣ್ಣುಗಳು ಕೆಂಪು ಬಣ್ಣಕ್ಕೆ ತಿರುಗಿದಾಗ ಆ ಗೊಂಚಲನ್ನು ಬೇರ್ಪಡಿಸಿ ಬಿಸಿಲಿನಲ್ಲಿ ಅಥವಾ ಹೊಗೆಯಲ್ಲಿ ಒಣಗಿಸಿದ ನಂತರ ಕರಿ ಮೆಣಸು ತಯಾರಾಗುತ್ತದೆ. ಕರಿ ಮೆಣಸಿನ ಉಪಯೋಗಗಳು ಅನೇಕ. ಕರಿ ಮೆಣಸಿನಲ್ಲಿ ಸಹ ಹಿಪ್ಪಲಿಯಲ್ಲಿರುವ ಘಟಕಗಳೇ ಇದ್ದು ಜೊತೆಗೆ ಓಲಿಯೋ ರೆಸಿನ್ ಅಂಶ ಏರುವುದರಿಂದ ಇದಕ್ಕೆ ತೀಕ್ಷ್ಣ ಮತ್ತು ಖಾರದರುಚಿ ಇರುತ್ತದೆ. ಕರಿ ಮೆಣಸನ್ನು ಮಸಾಲೆ ಪದಾರ್ಥಗಳ ತಯಾರಿಕೆಯಲ್ಲಿ ಉಪ್ಪಿನಕಾಯಿ, ಸಾಂಬಾರು, ಪಲ್ಯದಂಥ ಶಾಕಾಹಾರ ಮತ್ತು ಕೆಲವು ಮುಖ್ಯವಾದಮಾಂಸಾಹಾರಪದಾರ್ಥಗಳನ್ನು ರುಚಿ ಮತ್ತು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಭಾರತ ದೇಶದಿಂದ ರಫ್ತು ಮಾಡುವ ಕೆಲವು ಪದಾರ್ಥಗಳಲ್ಲಿ ಕರಿ ಮೆಣಸು ಹೆಚ್ಚಿನ ವಿನಿಮಯವನ್ನು ತರುತ್ತದೆ.



ಚಿತ್ರ 6 : ಕರಿ ಮೆಣಸು

ನೆಗಡಿ ಮತ್ತು ಕೆಮ್ಮು ನಿವಾರಣೆಗೆ, ಹಸಿವನ್ನುಂಟುಮಾಡುವುದಕ್ಕೆ, ಹೊಟ್ಟೆಯುಬ್ಬರ ನಿವಾರಣೆಗೆ ಕರಿಮೆಣಸನ್ನು ಉಪಯೋಗಿಸುತ್ತಾರೆ. ಕೆಲವು ಪ್ರಯೋಗಗಳಿಂದ ಕರಿ ಮೆಣಸು ಬೀಜಗಳು ಬ್ಯಾಕ್ಟೀರಿಯಾ ನಿವಾರಕ ಗುಣವನ್ನು ಹೊಂದಿರುತ್ತವೆ ಎಂದು ತಿಳಿದುಬಂದಿದೆ.

8. ಕಾಡು ವೋಮ

(ಕೀನೋಪೋಡಿಯಮ್ ಅಂಬ್ರೋಸಿಯಾಯ್ಡಿಸ್ ಅಂಥೆಲ್ಮಿಂಟಿಕಮ್;
Chaenopodium ambrosioides L. Var. Anthelminticum gray)



ಚಿತ್ರ 7: ಕಾಡು ವೋಮ

ವ್ಯಾಪನೆ: ಈ ಸಸ್ಯವು ಸ್ವಾಭಾವಿಕವಾಗಿ ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಮತ್ತು ಅಮೆರಿಕ ದೇಶದಲ್ಲಿ ಬೆಳೆಯುತ್ತದೆ. ಭಾರತದಲ್ಲಿ ಈ ಸಸ್ಯವು ಕಳೆಯಾಗಿ ಹೊಲ, ಉದ್ಯಾನವನ ಹಾಗೂ ಬಂಜರು ಭೂಮಿಯಲ್ಲಿ ಬೆಳೆಯುತ್ತದೆ. ಈ ಸಸ್ಯವು ಅನೇಕ ಉಪಯೋಗಗಳನ್ನು ಹೊಂದಿರುವ ಕಾರಣ ಇದನ್ನು ಜಮ್ಮು, ಕಾಶ್ಮೀರ ಮೊದಲಾದ ಪ್ರದೇಶಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ.

ವರ್ಣನೆ: ಅನೇಕ ರೆಂಬೆಗಳಿರುವ, 60–70 ಸೆಂಟಿಮೀಟರ್ ಎತ್ತರವಿರುವ, ಕರ್ಪೂರದ ವಾಸನೆಯನ್ನು ಹೊಂದಿದ ಸಣ್ಣ ಮೂಲಿಕೆ. ಅನೇಕ ಅಥವಾ ಕೆಲವೇ ಗ್ರಂಥಿಗಳಿದ್ದು ರೋಮಗಳನ್ನುಳ್ಳ, ಮೃದು ಅಥವಾ

ದಾರು ರೀತಿಯ, ಅಸಮ ರೂಪದಲ್ಲಿ ಜೋಡಿಸಿರುವ, ವಾಹಕ ಪುಂಡಿಗಳಿಂದೊಡಗೂಡಿದ ಒಳರಚನೆಯಿರುವ ಕಾಂಡ, ವೃಂತಪರ್ಣವಿಲ್ಲದ, ಸರಳವಾದ, ಪರ್ಯಾಯ ಜೋಡಣೆಯ, ಗ್ರಂಥಿಗಳನ್ನು ಹೊಂದಿದ, ಈಟಿಯಾಕಾರದ, ಹಲ್ಲಿನಂತಹ ಅಂಚುಳ್ಳ ಚಿಕ್ಕ ತೊಟ್ಟುಳ್ಳ ಎಲೆಗಳು. ಎಲೆ ಕಂಕುಳಲ್ಲಿ ಅಥವಾ ಕಾಂಡದ ತುದಿಯಲ್ಲಿರುವ ಹಸುರುವರ್ಣದ ದ್ವಿಲಿಂಗ ಅಥವಾ ಬಹುಲಿಂಗಸ್ಥದ ಅನೇಕ ಹೂವುಗಳು ಗುಂಪಾದ ಜೋಡಣೆಯಲ್ಲಿರುವ ಗೊನೆಯಾದರಿ ಪುಷ್ಪಮಂಜರಿ. ಅಧೋಶಲಾಕೆ, ಚಿಕ್ಕ, ದ್ವಿಲಿಂಗ ಅಥವಾ ಅಪರೂಪವಾಗಿ ಏಕಲಿಂಗ, ತ್ರಿಜ್ಯ ಸಮಪಾರ್ಶ್ವ ಭಿನ್ನ ಸುತ್ತುಗಳ ಮತ್ತು ಮೊನೋಕ್ಲಮೈಡಸ್ ರೀತಿಯ ಹೂವುಗಳು. ಪರಿದಳಗಳು ಬಿಡಿಯಾಗಿರುವ ಅಥವಾ ಕೆಳಗೆ ಕೂಡಿಕೊಂಡಿರುವ ಅಂಡಾಕಾರದ ಹೊರಉಬ್ಬು ರೀತಿಯ ಹಣ್ಣನ್ನು ಮುಚ್ಚಿರುವ ಹೆಂಚುಹೊದಿಕೆ ರೀತಿ ಜೋಡಣೆಯಲ್ಲಿರುವ ಶಾಶ್ವತ ಪುಷ್ಪಾವರಣ. ದ್ವಿಭಾಗಿ, ಉದ್ದವಾಗಿ ಒಡೆಯುವ ಪರಾಗ ಕೋಶವನ್ನು ಹೊಂದಿದ, ಪರಿದಳಗಳಿಗೆ ಇದಿರಾಗಿರುವ 5 ಕೇಸರಗಳು. 2 ಸಂಯುಕ್ತ ಅಂಡಕೋಶಗಳುಳ್ಳ ಒಂದೇ ಕೋಣೆಯ, ಉಚ್ಚಸ್ಥಾನದ, ಒಂದೇ ಒಂದು ವಕ್ರರೀತಿಯಲ್ಲಿ ನೇತಾಡುತ್ತಿರುವ ಅಂಡಕವುಳ್ಳ ಅಂಡಾಶಯ. ಚಿಕ್ಕ, ಕಪ್ಪು, ಹೊಳಪುಳ್ಳ ಬೀಜ. ದುಂಡನೆ ಸಣ್ಣ ಕಿರುಕರಟಕಾಯಿ ಫಲ.

ಉಪಯೋಗಗಳು: ಸಸ್ಯದ ಎಲ್ಲ ಮೇಲ್ಭಾಗಗಳು ಒಂದು ರೀತಿಯ ಅತಿ ತೀಕ್ಷ್ಣವಾದ ಘಾಟುವಾಸನೆಯನ್ನು ಹೊಂದಿರುತ್ತವೆ. ಕಾಡು ಪ್ರೋಮ ತೈಲವನ್ನು ಎಲೆ ಮತ್ತು ಹಣ್ಣಿನ ಗೊಂಚಲಿರುವ ಭಾಗಗಳಿಂದ ಆವಿರೂಪದಲ್ಲಿ ಬಾಷ್ಪೀಕರಣದ ಮೂಲಕ ತೆಗೆಯುತ್ತಾರೆ. 8000 ಕಿಲೋಗ್ರಾಮ್ ಸಸ್ಯದ ಭಾಗಗಳನ್ನು ಬಾಷ್ಪೀಕರಿಸಿದರೆ 33 ಕಿಲೋಗ್ರಾಮ್ ಎಣ್ಣೆ ಬರುತ್ತದೆ. ಈ ತೈಲವು ಬಣ್ಣರಹಿತ ಅಥವಾ ಹಳದಿ; ತೀಕ್ಷ್ಣವಾದ ಕರ್ಪೂರ ರೀತಿಯ ವಾಸನೆ ಹೊಂದಿರುತ್ತದೆ. ಈ ತೈಲದಲ್ಲಿ ಎಸ್ಕರಿಡಾಲ್ ಘಟಕವು ಶೇಕಡಾ 90ರ ಪ್ರಮಾಣದಲ್ಲಿರುವುದರಿಂದ ಈ ತೈಲಕ್ಕೆ ಅಂತ್ರ ಕ್ರಿಮಿನಾಶಕ ಗುಣವಿರುತ್ತದೆ. ಈ ಕಾರಣದಿಂದ ತೈಲವನ್ನು ಕೊಕ್ಕೆಹುಳು, ಜಂತುಹುಳು ಮತ್ತು ಲಾಡಿ ಹುಳುಗಳ ನಿವಾರಣೆಗೆ ಹೆಚ್ಚಾಗಿ ಉಪಯೋಗಿಸುತ್ತಾರೆ.

9. ಕೇದಿಗೆ

(ಪೆಂಡಾನಸ್ ಟೆಕ್ಟೋರಿಯಸ್: **Pendanus tectorius Soland**)

ವ್ಯಾಪನೆ: ಸಾಮಾನ್ಯವಾಗಿ ಇದು ಉಷ್ಣವಲಯಗಳಲ್ಲಿ ಬೆಳೆಯುತ್ತದೆ. ಭಾರತದ ಎರಡೂ ಬದಿಯ ಸಮುದ್ರ ತೀರಗಳಲ್ಲಿ ಸುಂದರಬನ್, ಬರ್ಮಾ, ಅಂಡಮಾನ್ ಮೊದಲಾದ ಪ್ರದೇಶಗಳಲ್ಲಿ ಈ ಸಸ್ಯವು ಬೆಳೆಯುತ್ತದೆ. ಕೊಂಕಣದ ತೀರದ ಉಸುಕು ಪ್ರದೇಶದಲ್ಲಿ ಈ ಸಸ್ಯವನ್ನು ಹೆಚ್ಚಾಗಿ ಕಾಣಬಹುದು.

ವರ್ಣನೆ: ನೆಟ್ಟಗೆ ಕವಲೊಡೆದು ಬೆಳೆಯುವ ಸುಮಾರು 60 ಸೆಂಟಿಮೀಟರ್ ಎತ್ತರವಾಗಿ ಪೊದರಿನಂತಿರುವ ಮರ. ಉದ್ದವಾಗಿ ಖಡ್ಗದಂತಿರುವ, ಒರಟಾಗಿದ್ದು, ಪತ್ರದ ಮಧ್ಯನರ ಮತ್ತು ಪತ್ರದ ದಂಡೆಗುಂಟ ಚಿಕ್ಕ ಮುಳ್ಳುಗಳನ್ನು ಹೊಂದಿದ್ದ, ಸುತ್ತುಜೋಡಣೆಯ ಉದ್ದದ ಎಲೆಗಳು. ಹೆಣ್ಣು ಮತ್ತು ಗಂಡು ಹೂವುಗಳು ಎರಡೂ



ಚಿತ್ರ 8: ಕೇದಿಗೆ

ಬೇರೆ ಬೇರೆ ಸಸ್ಯಗಳಲ್ಲಿರುವ ಏಕಲಿಂಗ ಹೂವುಗಳು. ಅನೇಕ ಕೊಳವೆಯಾಕಾರದ ಹೂಗೊನೆಗಳು. ಉದ್ದ; ಬಿಳಿಮಿಶ್ರಿತಹಳದಿ ಬಣ್ಣದ, ತುಂಬಾ ಸುವಾಸನೆಯನ್ನು ಹೊಂದಿ ಪುಷ್ಪಪತ್ರಕದಿಂದ ಮುಚ್ಚಲ್ಪಟ್ಟ ಆವರಿತತಾಳಗುಚ್ಛ ಪುಷ್ಪಮಂಜರಿಯಲ್ಲಿರುವ ಗಂಡು ಹೂವುಗಳು. ಕೇಸರ ದಂಡಗಳು ಕೂಡಿಕೊಂಡು ಚಿಕ್ಕದಾದ ಕೇಸರ

ಕೊಳವೆ ಇರುವ, ಬಿಳಿಮಿಶ್ರಿತಹಳದಿ ವರ್ಣದ, ಉದ್ದವಾದ ಪರಾಗಕೋಶಗಳನ್ನು ಹೊಂದಿದ ಕೇಸರಗಳು. ಒಂಟಿ ಆವರಿತಗುಚ್ಛ ರೀತಿಯ ಪುಷ್ಪಮಂಜರಿ ಇರುವ ಹೆಣ್ಣು ಹೂವುಗಳು. ಒಂದರಲ್ಲಿ ಇನ್ನೊಂದು ಸೇರಿಕೊಂಡು 6 ರಿಂದ 10 ಅಥವಾ ಇನ್ನೂ ಕಡಮೆಯ ಗುಂಪುಗಳಲ್ಲಿ ಗೋಪುರಾಕಾರದ ರೀತಿಯಲ್ಲಿ ಜೋಡಿಸಿರುವ ಅಂಡ ಕೋಶಗಳು. ಹಳದಿಬಣ್ಣದ ಚಿಕ್ಕ ಶಲಾಕಾಗ್ರ. ಉದ್ದ, ಗೋಳಾಕಾರದ ಹಳದಿ ಅಥವಾ ಕೆಂಪು ಸೊರೊಸಿಸ್ ಫಲ.

ಉಪಯೋಗಗಳು : ಈ ಸಸ್ಯದ ಪುಷ್ಪಪತ್ರಗಳು ತುಂಬಾ ಸುವಾಸನೆಯನ್ನು ಹೊಂದಿದ್ದು, ಇವುಗಳನ್ನು ಬಾಷ್ಪೀಕರಿಸಿ ಕಿವಡಾ ಸುಗಂಧ ತೈಲವನ್ನು ತೆಗೆಯುತ್ತಾರೆ. ಈ ತೈಲವನ್ನು ಅತ್ತರ ತಯಾರಿಕೆ ಹಾಗೂ ಸುಗಂಧ ಚೀಲಗಳು, ಸಾಬೂನುಗಳು ಮತ್ತು ಕೆಲವು ಮುಖಾಲಂಕಾರ ವಸ್ತುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ.

ಈ ಸಸ್ಯದ ಪುಷ್ಪಪತ್ರಕಗಳನ್ನು ದೇವರ ಪೂಜೆಗೆ, ಮಹಿಳೆಯರ ಕೇಶಾಲಂಕಾರಕ್ಕೆ ಉಪಯೋಗಿಸುತ್ತಾರೆ. ಎಲೆಗಳನ್ನು ಚಾಪೆ, ಸಕ್ಕರೆಚೀಲ ಮತ್ತು ಹ್ಯಾಟ್ ಮೊದಲಾದವುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಈ ಸಸ್ಯವು ಅನೇಕ ಔಷಧೀಯ ಉಪಯೋಗಗಳನ್ನು ಹೊಂದಿರುತ್ತದೆ.

ಈ ಸಸ್ಯದ ಎಲೆಗಳು ಖಾರ ಮತ್ತು ಕಹಿ ರುಚಿಯನ್ನು ಹೊಂದಿರುತ್ತವೆ. ಇದನ್ನು ಕುಷ್ಠರೋಗ, ಮೈಲಿಯಂತಹ ಕೆಲವು ಅಂಟುರೋಗಗಳ ನಿವಾರಣೆಗಾಗಿ, ನಿದ್ರಾಜನಕವಸ್ತು ಮತ್ತು ಉರಿಮೂತ್ರ ರೋಗ ನಿವಾರಕವಾಗಿ ಉಪಯೋಗಿಸುತ್ತಾರೆ. ಹಣ್ಣುಗಳನ್ನು ವಾತ, ಕಫ ಇತ್ಯಾದಿಗಳನ್ನು ಕಡಮೆಮಾಡಲು ಉಪಯೋಗಿಸುತ್ತಾರೆ. ಪಾಂಡುರೋಗ, ಹೃದಯರೋಗ ಮತ್ತು ಮೊಡವೆ ರೋಗ ನಿವಾರಣೆಗೆ ಈ ಎಲೆಯ ತೈಲವು ತಂಪು ನೀಡಿ ಮೊಡವೆಯನ್ನು ಶಾಂತಗೊಳಿಸುತ್ತದೆ. ಪುಷ್ಪಪತ್ರಕದಿಂದ ತೆಗೆಯಲಾದ ತೈಲವನ್ನು ಸ್ನಾಯುಗಳ ಸೆಳೆತವನ್ನು ಕಡಮೆ ಮಾಡಲು, ತಲೆನೋವು ಮತ್ತು ನರಗಳ ದುರ್ಬಲತೆಯನ್ನು ಹೋಗಲಾಡಿಸಲು ಉಪಯೋಗಿಸುತ್ತಾರೆ.

ಇದರ ಬೇರಿನಿಂದ ತೆಗೆದ ತೈಲವನ್ನು ಕೆಲವು ಔಷಧಿಯುಕ್ತ ಎಣ್ಣೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

10. ಕೇಸರಿ

(ಕ್ರಾಕಸ್ ಸಟೈವಸ್: Crocus sativus Linn.)

ವ್ಯಾಪನೆ : ಈ ಸಸ್ಯದ ತವರು ದಕ್ಷಿಣ ಯೂರೋಪ್. ಸ್ಪೇನ್, ಗ್ರೀಸ್, ಇರಾನ್ ಮತ್ತು ಭಾರತದ ಕಾಶ್ಮೀರ ಪ್ರದೇಶಗಳಲ್ಲಿ ಇದನ್ನು ಸಾಗುವಳಿ ಮಾಡುತ್ತಾರೆ.

ವರ್ಣನೆ : ಬಹುಸಾಂವತ್ಸರಿಕ ಶಾಕ. ಬಲೆಯಂತೆ ಹೆಣೆದಿರುವ ಕವಚಗಳುಳ್ಳ ಕಂದಿಕೆಯನ್ನು ಹೊಂದಿದ ಕಾಂಡ. ಕಂದಿಕೆಯಿಂದ ನೇರವಾಗಿ ಹೊರಡುವ ಸಣ್ಣ, ಉದ್ದ, ಹಿಂದಕ್ಕೆ ಬಾಗಿರುವ ಹಲ್ಲುಗಳಂತೆ ಅಂಚುಳ್ಳ ಎಲೆಗಳು. ಗೊಂಚಲು ಗೊಂಚಲಾಗಿರುವ ಮಿಶ್ರ ಪುಷ್ಪ ಮಂಜರಿ. ಹೂವಿನ ದಿಂಡನ್ನು ಅಪ್ಪಿಕೊಂಡು ಕೆಳಭಾಗದಲ್ಲಿರುವ ಉಪಪತ್ರಗಳು. ಎರಡು ಪುಷ್ಪಪತ್ರಕಗಳಿರುವ ದ್ವಿಲಿಂಗ, ಸಮದ್ವಿಪಾರ್ಶ್ವ ರೂಪತೆಯ, ನೀಲ ಅಥವಾ ನೇರಳೆ ವರ್ಣದ ಹೂವುಗಳು. ಲಾಳಿಕೆಯಾಕಾರದ, ಹೂವಿನ ದಳದಂತಿರುವ, ಸಣ್ಣ ಹೂವು ಕೊಳವೆಯಿರುವ, ಅಸಮವಾಗಿ 6 ದಳಗಳಾಗಿ ವಿಭಜಿಸಿ, ಎರಡು ಸುತ್ತಿನಲ್ಲಿ ಹೆಂಚು ಹೊದಿಕೆ ರೀತಿಯಲ್ಲಿ ಜೋಡಿಸಿರುವ ಪರಿದಳಪುಂಜ. ಪರಿದಳಪುಂಜದ ಮೇಲೆ ಹೊಂದಿಕೊಂಡಿರುವ 3 ಕೇಸರಗಳು. ಮೋಟಾಗಿರುವ ಕೇಸರ ದಂಡಗಳು. ಅನೇಕ ಪ್ರಕಾಶೋನ್ಮುಖ ಅಂಡಕಗಳನ್ನು ಹೊಂದಿದ ಮೂರು ಕೋಣೆಯಿರುವ ಅಂಡಾಶಯ. ದಾರದ ರೀತಿ ಇರುವ, ಹೊರಗಡೆಗೆ ಚಾಚಿರುವ ಕೆಂಪುಮಿಶ್ರಿತ ಕಿತ್ತಳೆ ವರ್ಣದ, ಜೋಲಾಡುವ, ಕೆಂಪು ವರ್ಣದ ಶಲಾಕಾಗ್ರಹೊಂದಿದ ಶಲಾಕೆ. ದೀರ್ಘವೃತ್ತಾಕಾರದ ಪೊರೆಯಂತಿರುವ ಸಂಪುಟಿಕ ಮಾದರಿ ಫಲ.



ಚಿತ್ರ 9 : ಕೇಸರಿ

ಕೇಸರಿ ಬೆಳೆ ತಂಪಾದ ಹವೆಯುಳ್ಳ ಫಲವತ್ತಾದ ಒಳ್ಳೆಯ ಮರಳು ಮಣ್ಣು ಅಥವಾ ಜೇಡಿ ಮಣ್ಣು ಇರುವ ಭೂಮಿಯಲ್ಲಿ ಸೊಂಪಾಗಿ ಬೆಳೆಯುತ್ತದೆ. ಭಾರತದಲ್ಲಿ ಶ್ರೀನಗರದ ಹತ್ತಿರವಿರುವ ಪಾಂಪುರದಲ್ಲಿ 1600 ಹೆಕ್ಟೇರು ಭೂಮಿಯಲ್ಲಿ ಈ ಸಸ್ಯವನ್ನು ಸಾಗುವಳಿ ಮಾಡುತ್ತಾರೆ. ಗೆಡ್ಡೆಗಳನ್ನು ನಾಟಿ ಮಾಡಿ ಇದನ್ನು ಬೆಳೆಸುತ್ತಾರೆ. ಒಮ್ಮೆ ನೆಟ್ಟರೆ 10-15 ವರ್ಷ ಮತ್ತೆ ನೆಡಬೇಕಾಗಿಲ್ಲ. ಹಳೆಯ ಗೆಡ್ಡೆಗಳು ನಶಿಸಿ ಹೋದಂತೆಲ್ಲ ಹೊಸ ಕಂದುಗಳು ತಾಯಿ ಕಂದುಗಳಿಂದ ಹುಟ್ಟಿಕೊಳ್ಳುತ್ತವೆ. ಕೆಲವು ದೇಶಗಳಲ್ಲಿ 3-4 ವರ್ಷಗಳಿಗೊಮ್ಮೆ ಹೊಸ ಗೆಡ್ಡೆಗಳನ್ನು ನೆಡುವುದೂ ಉಂಟು.

ಅಕ್ಟೋಬರ್ ಮಧ್ಯಭಾಗದಿಂದ ಡಿಸೆಂಬರ್‌ವರೆಗೆ ಕೇಸರಿ ಗಿಡಗಳು ಹೂ ಬಿಡುತ್ತವೆ. ಪ್ರತಿದಿನ ಮುಂಜಾನೆಯಲ್ಲಿ ಹಿಮ ಬೀಳುವುದು ನಿಂತ ಕೂಡಲೇ ಹೂ ಕೊಯ್ದು ಸಂಗ್ರಹಿಸುತ್ತಾರೆ. ಪುಷ್ಪದ ಶಲಾಕಾಗ್ರವನ್ನು ಚಿವುಟಿ ತೆಗೆದು ಬಿಸಿಲಿನಲ್ಲಿ ಅಥವಾ ಕೃತಕ ಶಾಖದಿಂದ ಒಣಗಿಸಲಾಗುತ್ತದೆ. ಅತ್ಯುತ್ತಮ ದರ್ಜೆಯ ಶಲಾಕಾಗ್ರಗಳು ಮಾತ್ರ ಇರುವ ಕೇಸರಿಯನ್ನು ಷಾಹಿ ಕೇಸರಿ ಎಂದು ಕರೆಯುತ್ತಾರೆ. ಕುಸುಮ, ಕಾಂಡ, ಪರಾಗ, ದಳ ಮುಂತಾದ ಭಾಗಗಳು ಬೆರೆತಿರುವ ಕಡಮೆ ದರ್ಜೆಯ ಪದಾರ್ಥವನ್ನು ಮೋಗ್ರ ಮತ್ತು ಅಚ್ಛಾ ಕೇಸರಿಯೆಂದು ಕರೆಯುತ್ತಾರೆ. ಉತ್ತಮ ದರ್ಜೆ ಕೇಸರಿ 1 ಕಿಲೋಗ್ರಾಮ್‌ಗೆ ಸುಮಾರು 12000 ರೂಪಾಯಿ ಬೆಲೆಯಾಗುತ್ತದೆ. 1 ಕಿಲೋಗ್ರಾಮ್ ಕೇಸರಿಗೆ ಹತ್ತು ಲಕ್ಷದಷ್ಟು ಶಲಾಕಾಗ್ರಗಳಿದ್ದು ಇದನ್ನು ಒಂದೂವರೆ ಲಕ್ಷದಷ್ಟು ಹೂಗಳಿಂದ ಬೇರ್ಪಡಿಸಬೇಕಾಗುತ್ತದೆ. ಒಂದು ಎಕರೆ ಭೂಮಿಗೆ 2-3 ಕಿಲೋಗ್ರಾಮ್ ಒಣಗಿದ ಪದಾರ್ಥ ಸಿಗಬಹುದು. ಪ್ರಪಂಚದ ಒಟ್ಟು ಕೇಸರಿ ಉತ್ಪತ್ತಿ ಕೇವಲ 30-40 ಟನ್ನುಗಳಷ್ಟು ಮಾತ್ರ.

ಕೇಸರಿ ಎಳೆಗಳು ದಾರದಂತಿದ್ದು ಕಿತ್ತಳೆಹಳದಿ ಬಣ್ಣ, ವಿಶಿಷ್ಟ ಸುವಾಸನೆ ಮತ್ತು ಅಯೋಡಿನ್ ತರಹದ ಕಹಿ ರುಚಿಯನ್ನು ಹೊಂದಿರುತ್ತದೆ.

ಉಪಯೋಗಗಳು : ಕೇಸರಿಯನ್ನು ಅದರ ಆಕರ್ಷಕ ಬಣ್ಣ, ವಿಶಿಷ್ಟ ಸುವಾಸನೆಗಳಿಗಾಗಿ ಬಹುಕಾಲದಿಂದ ಅಡಿಗೆಗಳಲ್ಲಿ ಉಪಯೋಗಿಸುತ್ತಿದ್ದಾರೆ.

ಕೇಸರಿಯಲ್ಲಿ ಮುಖ್ಯವಾಗಿ ಇರುವ ಕ್ರೋಸಿನ್ ಒಂದು ನೈಸರ್ಗಿಕ ಕಿತ್ತಳೆಮಿಶ್ರಿತ ಹಳದಿ ಬಣ್ಣದ ಮತ್ತು ಸ್ವಲ್ಪ ಪ್ರಮಾಣದ ಸುವಾಸನೆಯ ತೈಲ. ಕ್ರೋಸಿನ್ ನೀರಿನಲ್ಲಿ ಕರಗುವ ತೀವ್ರವಾದ ಬಣ್ಣ. ಸ್ವಲ್ಪ ಉಪಯೋಗಿಸಿದರೂ ಹೆಚ್ಚು ಕಂಡುಬರುತ್ತದೆ. ಕೇಸರಿಯಲ್ಲಿರುವ ಪಿಕ್ರೋಕ್ರೋಸಿನ್ ದಿಂದಾಗಿ ಕಹಿ ರುಚಿ ಉಂಟಾಗುತ್ತದೆ. ಸಾಫ್ರನಾಲ್ ರಾಸಾಯನಿಕವು ಇತರ ಕೆಲವು ರಾಸಾಯನಿಕ ಘಟಕಗಳೊಂದಿಗೆ ಬೆರೆತು ಸುವಾಸನೆಯನ್ನು ಕೊಡುತ್ತದೆ. ಸ್ಪೇನ್, ಹಂಗೇರಿ, ಸ್ಕ್ಯಾಂಡಿನೇವಿಯಾ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಕೇಸರಿಯನ್ನು ಬೇಕರಿ ತಿಂಡಿಗಳು, ಚೀಸ್ (ಗಿಣ್ಣು), ಬೆಣ್ಣೆ,

ಅನ್ನ ಮುಂತಾದವುಗಳಿಗೆ ಬಣ್ಣ ಕೊಡಲು ಮತ್ತು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಭಾರತದಲ್ಲಿ ಮಿಠಾಯಿ, ಪಾಯಸ, ಖೀರು, ಕೇಸರಿಭಾತ್, ಹಾಲು ಮುಂತಾದವುಗಳಲ್ಲಿ ಬಣ್ಣ ಮತ್ತು ಸುವಾಸನೆಕೊಡಲು ಉಪಯೋಗಿಸುತ್ತಾರೆ.

ಕೇಸರಿಯು ಸ್ವಲ್ಪ ಪ್ರಮಾಣದಲ್ಲಿ ರುಚಿ, ವಾಸನೆ, ಬಣ್ಣ ಕೊಟ್ಟು ಅಡುಗೆಗಳನ್ನು ಆಕರ್ಷಕವಾಗುವಂತೆ ಮಾಡುತ್ತದೆ. ಆದರೆ ಅತಿಯಾಗಿ ಹಾಕುವುದು ಮಾದಕ ಗುಣ ಪರಿಣಾಮಕಾರಿಯಾದ್ದರಿಂದ ಮಿತವಾಗಿ ಬಳಸಿದರೆ ಒಳ್ಳೆಯದು. ಕೇಸರಿ ಹೂವಿನ ಶಲಾಕಾಗ್ರಗಳು ಅನೇಕ ಔಷಧಿಯುಕ್ತ ಗುಣಗಳನ್ನೂ ಸಹ ಹೊಂದಿರುತ್ತವೆ. ಕೇಸರಿಯು ಶಕ್ತಿವರ್ಧಕ, ಜೀರ್ಣಕಾರಿ, ನರಗಳ ಉತ್ತೇಜನ ಶಮನಕಾರಿ ಹಾಗೂ ಮೂತ್ರಸ್ರಾವ ವರ್ಧಕವಾಗಿ ಮಹತ್ವದ ಪಾತ್ರಗಳನ್ನು ವಹಿಸುತ್ತದೆ. ಜ್ವರ, ಕೆಮ್ಮು, ಹಿಸ್ಟೀರಿಯಾ, ಜಠರರೋಗ, ಅಸ್ತಮಾ, ಊತಹರ ಮೊದಲಾದ ವ್ಯಾಧಿಗಳ ನಿವಾರಣೆಗೂ ಸಹ ಕೇಸರಿಯನ್ನು ಉಪಯೋಗಿಸುವುದುಂಟು. ಕೇಸರಿಯನ್ನು ಕಷಾಯದ ರೂಪದಲ್ಲಿ ಮತ್ತು ಮುಲಾಮಿನ ರೂಪದಲ್ಲಿ ಉಪಯೋಗಿಸುತ್ತಾರೆ. ದೇಹದ ಮೇಲಿನ ಗಾಯ, ಮೂಗುಪೆಟ್ಟು, ಹುಣ್ಣು ಮೊದಲಾದವುಗಳನ್ನು ವಾಸಿ ಮಾಡಲು ಆ ಭಾಗಕ್ಕೆ ಕೇಸರಿಯ ಮುಲಾಮನ್ನು ಸವರುತ್ತಾರೆ. ಕೇಸರಿಯಿಂದ ತಯಾರಿಸಿದ ಪಾನಕವನ್ನು ಮುಕ್ಕಳಿಸುವುದರಿಂದ ಹಲ್ಲುನೋವು ಕಡಮೆಯಾಗುತ್ತದೆ.

11. ಕೊತ್ತಂಬರಿ (ದನಿಯಾ)

(ಕೋರಿಯಾಂಡ್ರಮ್ ಸಟೈವಮ್ : Coriandrum sativum Linn.)

ವ್ಯಾಪನೆ : ಈ ಸಸ್ಯವು ಮೂಲತಃ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಬೆಳೆಯುತ್ತಿದ್ದು ಇದನ್ನು ಸಾಮಾನ್ಯವಾಗಿ ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿಯೂ ಬೆಳೆಯುವುದುಂಟು. ಯೂರೋಪ್, ಮೊರಕ್ಕೊ, ಭಾರತ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ.


ವರ್ಣನೆ : ಸುಮಾರು 30–50 ಸೆಂಟಿಮೀಟರ್ ಎತ್ತರವಿದ್ದು ಚಿಕ್ಕದಾಗಿರುವ, ಅತಿ ಸುವಾಸನೆಯನ್ನು ಹೊಂದಿದ ಏಕಸಾಂವತ್ಸರಿಕ ಶಾಕ. ಟೊಳ್ಳಾದ, ಅಂತರ ಮತ್ತು ಉಬ್ಬಿದ ಗಿಣ್ಣುಗಳಿರುವ, ಮೃದುವಾದ ಕಾಂಡ. ವೃಂತಪರ್ಣವಿಲ್ಲದೆ ಹೆಚ್ಚಾಗಿ ಹರಿದಿರುವ ಗರಿರೂಪದ, ಪರ್ಯಾಯ ಜೋಡಣೆಯ ಪೊರೆಯಿರುವ ತೊಟ್ಟನ್ನು ಹೊಂದಿದ ಸಂಯುಕ್ತ ಎಲೆಗಳು. ಸಂಯುಕ್ತ ಛತ್ರಿಗೊಂಚಲು ರೀತಿಯ ಪುಷ್ಪ ಮಂಜರಿ. ಪುಷ್ಪಪತ್ರಕ ಮತ್ತು ಪುಷ್ಪವೃಂತ ಪತ್ರಕವಿರುವ 5 ಸುತ್ತುಗಳಿರುವ, ಉಪರಿಶಲಾಕೆಯ ದ್ವಿಲಿಂಗ ಹೊರಭಾಗದಲ್ಲಿ ಸಮದ್ವಿಪಾರ್ಶ್ವ ಬಿಳಿಯ ಹೂವುಗಳು. ಬಹು ಚಿಕ್ಕ ಹಲ್ಲಿನಂತಹ, ಹೆಂಚುಹೊದಿಕೆ ರೀತಿ ಜೋಡಣೆಯುಳ್ಳ 5 ಬಿಡಿ ಅಸಮ

ಪುಷ್ಪಪಾತ್ರ ಪತ್ರಕಗಳು. ದೀರ್ಘ ಅಂಡಾಕಾರದ, ಬಿಡಿಯಾದ ಕೂಡು ಅಂಚು ರೀತಿಯ, ಬಿಳಿವರ್ಣದ ಪುಷ್ಪದಳಗಳು. ಮೊಗ್ಗಿನಲ್ಲಿ ಒಳಗಡೆಗೆ ಬಗ್ಗಿರುವ ಬಿಡಿಯಾಗಿರುವ 5 ಕೇಸರಗಳು. ಕೆಳಸ್ಥಾನದ ಎರಡು ಸಂಯುಕ್ತ ಅಂಡಕೋಶಗಳಿದ್ದು ಅವು ಎರಡುಕೋಣೆಗಳನ್ನು ಹೊಂದಿರುತ್ತವೆ. ಪ್ರತಿಯೊಂದು ಕೋಣೆಯಲ್ಲೂ ಒಂದೊಂದು ಅಂಡಕವಿದ್ದು, ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಅಂಡಾಶಯದ ಮೇಲ್ಗಡೆಗೆ ಸ್ಟೈಲೋಪೋಡಿಯಮ್ ಇರುವ, ಟೋಪಿಯಾಕಾರದ ಎರಡು ಶಲಾಕಾಗ್ರವಿದ್ದು ಎರಡು ಶಲಾಕೆಗಳಿರುವ ಜಾಯಾಂಗ. ಗೋಳಾಕಾರದ ಕ್ರಿಮೊಕಾರ್ಪ್ ಹಣ್ಣು.

ಉಪಯೋಗಗಳು : ಕಂದುಮಿಶ್ರಿತ ಹಳದಿಬಣ್ಣದ ದುಂಡಗೆ ಇರುವ ಕೊತ್ತಂಬರಿ ಕಾಳುಗಳು ಹಸಿಯದ್ದಾಗ ಮಧುರವಾಸನೆಯನ್ನು ಹೊಂದಿರದಿದ್ದರೂ ಒಣಗಿದ ನಂತರ ಸುವಾಸನೆಯನ್ನು ಬೀರುತ್ತವೆ ಈ ಕಾಳುಗಳನ್ನು ಯೂರೋಪ್ ಮತ್ತು ಭಾರತ ದೇಶಗಳಲ್ಲಿ ಖಾರ ಆಹಾರ ತಯಾರಿಕೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಬಳಸುತ್ತಾರೆ. ಕೊತ್ತಂಬರಿ ಕಾಳುಗಳಿಂದ ಸುವಾಸನೆಯುತ ತೈಲವನ್ನು ತೆಗೆಯುತ್ತಾರೆ. ಭಾರತದಲ್ಲಿ ಬೆಳೆಯುವ ಕೊತ್ತಂಬರಿ ಸುವಾಸನೆ ತೈಲದ ಪ್ರಮಾಣವು ಶೇಕಡಾ 0.4 ರಿಂದ 0.8 ರವರೆಗೆ ಇರುತ್ತದೆ. ಈ ಸುಗಂಧ ತೈಲವು ತಿಳಿಹಳದಿ ಬಣ್ಣವಾಗಿರುತ್ತದೆ. ಅಕಸ್ಮಾತ್ ಚರ್ಮಕ್ಕೆ ಈ ತೈಲವು ಹೆಚ್ಚು ಹೊತ್ತು ಸೋಕಿದರೆ ಒಂದು ರೀತಿಯ ನವೆಯುಂಟಾಗುತ್ತದೆ.

ಅತ್ತರು, ಸುಗಂಧದ್ರವ್ಯ ತಯಾರಿಕೆಯಲ್ಲಿ ಕೊತ್ತಂಬರಿ ತೈಲವು ಅತಿ ಮುಖ್ಯವಾದ ಒಂದು ಘಟಕವಾಗಿರುತ್ತದೆ. ಸೆಂಟ್ ಜೊತೆ ಈ ತೈಲವು ಅತಿ ಸುಲಭವಾಗಿ ಮಿಶ್ರಿತವಾಗುವ ಗುಣವನ್ನು ಹೊಂದಿದೆ. ಸಾಮಾನ್ಯವಾಗಿ ಮಲ್ಲಿಗೆ ಸುಗಂಧತೈಲದ ಜೊತೆ ಇದನ್ನು ಮಿಶ್ರಣ ಮಾಡುತ್ತಾರೆ. ಕೊತ್ತಂಬರಿ ತೈಲವನ್ನು ಅನೇಕ ಉದ್ಯಮಗಳಲ್ಲಿ ಉಪಯೋಗಿಸುವರಲ್ಲದೆ ಮದ್ಯಪಾನ, ಸರಾಯಿ, ಪಾನಕ ಮೊದಲಾದ ಪೇಯಗಳನ್ನು ಸುವಾಸಿತಗೊಳಿಸಲು ಮತ್ತು ರುಚಿ ನೀಡಲು ಬಳಸುತ್ತಾರೆ. ಕೊಕೋ, ಚಾಕಲೇಟ್, ಪಿಷ್ಟಭಕ್ಷಗಳು, ಕೃತಕ ಪೇಯ ತಯಾರಿಕೆ ಮತ್ತು ತಂಬಾಕನ್ನು ರುಚಿಗೊಳಿಸುವಲ್ಲಿ ಹೀಗೆ ಅನೇಕ ವಿಧವಾಗಿ ಕೊತ್ತಂಬರಿ ತೈಲವನ್ನು ಉಪಯೋಗಿಸುವರು. ದನಿಯ ಕಾಳುಗಳು ಸುವಾಸನೆಯನ್ನು ಹೊಂದಿರುವುದರಿಂದ ಬಾಯಿಂದ ಹೊರ ಹೊಮ್ಮುವ ಉಸುರಿನ ದುರ್ವಾಸನೆಯನ್ನು ಹೋಗಲಾಡಿಸಲು ಈ ಕಾಳುಗಳನ್ನು ಅಗಿಯುವುದುಂಟು. ಈ ಸಸ್ಯದ ಎಲೆಗಳು ಕೂಡ ಸುವಾಸನೆಯನ್ನು ಹೊಂದಿರುವುದರಿಂದ ತಾಜಾ ಎಲೆಗಳನ್ನು ಹಸಿಯಾಗಿಯೇ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಸುವಾಸನೆ ಮತ್ತು ರುಚಿ ಹೆಚ್ಚಿಸಲು ಉಪಯೋಗಿಸುವರು.

ಕೊತ್ತಂಬರಿ ಎಲೆಗಳು ಮತ್ತು ಕಾಳುಗಳು ಅನೇಕ ಚಿಕ್ಕಪುಟ್ಟ ವೈದ್ಯಕೀಯ ಚಿಕಿತ್ಸೆಗಳಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಸ್ಯವನ್ನು ಕುದಿಸಿ ಹಾಲು ಮತ್ತು ಸಕ್ಕರೆಯ ಜೊತೆ ಬೆರಸಿ ಮೂಲವ್ಯಾಧಿಯಿಂದುಂಟಾಗುವ ರಕ್ತಸ್ರಾವವನ್ನು ತಡೆಗಟ್ಟಲು ಉಪಯೋಗಿಸುವರು. ಸಸ್ಯವನ್ನು ಅರೆದು ನೀರಿನೊಂದಿಗೆ ಕಲೆಸಿ ತಲೆನೋವಿನಿಂದ ಬಳಲುವ ರೋಗಿಯ ಹಣೆಗೆ ತಂಪುನೀಡಲು ಸವರುವುದುಂಟು. ಇದಲ್ಲದೆ ಇದನ್ನು ಬಾರ್ಲಿ ಪುಡಿಯೊಂದಿಗೆ ಬೆರಸಿ ಬಾತುಕೊಂಡಿರುವ ಭಾಗಕ್ಕೆ ಲೇಪಿಸಿದರೆ ಬಾವು ಇಳಿಮುಖವಾಗುವುದು. ಕಾಳುಗಳನ್ನು ಹೊಟ್ಟೆ ಉಬ್ಬರದ ತಾತ್ಕಾಲಿಕ ಉಪಶಮನಕ್ಕೆ



ಚಿತ್ರ 10: ಕೊತ್ತಂಬರಿ

ಸ್ನಾಯುವಿನ ಸೆಳೆತವನ್ನು ಕಡಮೆ ಮಾಡಲು ಮತ್ತು ಮೂತ್ರಸ್ರಾವವನ್ನು ವೃದ್ಧಿಸಲು ಬಳಸುತ್ತಾರೆ. ಈ ಸಸ್ಯವನ್ನು ಕೆಲವು ಬೇರೆ ಔಷಧಿಗಳ ಜೊತೆಗೆ ಬೆರೆಸಿ ಹಾವು ಕಡಿದ ರೋಗಿಗಳಿಗೆ ಕೊಡುತ್ತಾರೆ. ಕಾಳುಗಳಿಂದ ತಯಾರಿಸಿದ ಕಷಾಯವನ್ನು ಹೊಟ್ಟೆ ಶೂಲೆಯಿಂದ ಬಳಲುವ ಚಿಕ್ಕ ಮಕ್ಕಳಿಗೆ ಕುಡಿಯಲು ಕೊಡುತ್ತಾರೆ. ಕೊತ್ತಂಬರಿ ಮತ್ತು ನಿಂಬೆ ರಸವನ್ನು ಬೆರೆಸಿ ತಯಾರಿಸಿದ ಮುಲಾಮನ್ನು ಕ್ರಮಬದ್ಧವಾಗಿ

ಉಪಯೋಗಿಸಿದರೆ ಮುಖದ ಮೇಲೆ ಬರುವ ಮೊಡವೆ ಮತ್ತು ಕೆಲವು ಚರ್ಮರೋಗ ಗಳನ್ನು ನಿವಾರಿಸಬಹುದು.

ಕಾಫಿ ಮತ್ತು ಚಹ ಮೊದಲಾದ ಪೇಯಗಳನ್ನು ಇಷ್ಟಪಡದ ಕೆಲವು ಹಿರಿಯರು ದನಿಯಾದಿಂದ ತಯಾರಿಸಿದ ಪಾನೀಯವನ್ನು ಇಷ್ಟಪಡುತ್ತಾರೆ. ಕೊತ್ತಂಬರಿ ಕಾಳು ಗಳನ್ನು ಚೆನ್ನಾಗಿ ಹುರಿದು ಪುಡಿಮಾಡಿ ತಯಾರಿಸಿದ ಕಷಾಯವು ತುಂಬ ಪುಷ್ಟಿಕರ ವಾಗಿರುತ್ತದೆಂದು ತಿಳಿದುಬಂದಿದೆ.

ಮಾದಕ ಪೇಯಗಳ ಅಮಲೇರಿಸುವ ಗುಣವನ್ನು ದನಿಯ ಕಡಮೆ ಮಾಡುವುದ ರಿಂದ ಇದನ್ನು ಪೇಯಗಳ ಜೊತೆ ಬೆರೆಸುವರು. ಸುಗಂಧ ತೈಲವನ್ನು ಬಾಷ್ಪೀಕರಿಸುವ ನಂತರ ಉಳಿಯುವ ಚರಟವು ಸಾಕಷ್ಟು ಪ್ರಮಾಣದ ಸಸಾರಜನಕವನ್ನು ಹೊಂದಿರು ವುದರಿಂದ ಇದನ್ನು ದನಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ.

12. ಗಂಡು ಮೆಣಸು

[ಪಿಮೆಂಟಾ ಡೈಯಾಯಿಕ: Pimenta dioica (Linn) Merr.]

ವ್ಯಾಪನೆ: ಈ ಸಸ್ಯವು ಮೂಲತಃ ವೆಸ್ಟ್ ಇಂಡೀಸ್ ಮತ್ತು ಅಮೆರಿಕದ ಕೆಲವು ಉಷ್ಣ ಪ್ರದೇಶಗಳಿಗೆ ಸೇರುತ್ತದೆ. ಇದನ್ನು ಮೆಕ್ಸಿಕೋದಲ್ಲಿ ಸಹ ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಿದ್ದು ಹಣ್ಣುಗಳನ್ನು ಪರದೇಶಗಳಿಗೆ ಕಳಿಸುತ್ತಾರೆ. ಆದರೆ ಜಮೈಕಾದಲ್ಲಿನ ಕಾಡು ಮರಗಳಿಂದ ಪಡೆದ ವಸ್ತುಗಳಿಗೆ ಹೆಚ್ಚಿನ ಬೆಲೆಯುಂಟು. ಭಾರತದಲ್ಲಿ ಪಶ್ಚಿಮ ಬಂಗಾಳ ಮತ್ತು ಒಡಿಸಾ ರಾಜ್ಯಗಳಲ್ಲಿ ಬೆಳೆಯುವುದು ಕಂಡು ಬಂದಿದೆ.

ವರ್ಣನೆ: ಸುಮಾರು 6–9 ಮೀಟರ್ ಎತ್ತರ ಬೆಳೆಯುವ, ಮೃದು, ಬೂದು ಬಣ್ಣದ ತೊಗಟೆಯನ್ನು ಹೊಂದಿದ, ಸದಾ ಹಸಿರಾಗಿರುವ ಪೊದರು ಅಥವಾ ಮರ. ದೊಡ್ಡದಾದ ಒರಟಾಗಿರುವ ಕೆಳಭಾಗದಲ್ಲಿ ಕಪ್ಪು ಚುಕ್ಕೆಗಳಿರುವ, ಹೊಳೆ ಯುವ ಮೇಲ್ಮೈ ಹೊಂದಿದ ಅಭಿಮುಖ ಜೋಡಣೆಯ, ಉದ್ದ ಈಟಿಯಾಕಾರದ, ತುಂಬಾ ಸುವಾಸನೆಯ ಎಲೆಗಳು. ತುದಿಯಲ್ಲಿ ಅಥವಾ ಎಲೆಯ ಕಂಕುಳಲ್ಲಿರುವ ಮಧ್ಯಾರಂಭಿ ಪುಷ್ಪಮಂಜರಿ. ಸುವಾಸನೆಯುಳ್ಳ ಬಿಳಿ ಅಥವಾ ಹಸುರುಮಿಶ್ರಿತ ಬಿಳಿಯ, ದ್ವಿಲಿಂಗ, ತ್ರಿಜ್ಯ ಸಮಪಾರ್ಶ್ವ, ಅಧೋಶಲಾಕೆ ಸ್ಥಿತಿಯ ಹೂವುಗಳು. ಸಮನಾಗಿ ವಿಭಜಿಸಲ್ಪಟ್ಟಿರುವ 5 ಪುಷ್ಪದಳಗಳು, ಪುಷ್ಪಾಕ್ಷದ ಅಂಚಿನಲ್ಲಿ ಅನೇಕ ಸುತ್ತುಗಳಲ್ಲಿ ಜೋಡಿಸಿರುವ ಹಲವು ಕೇಸರಗಳು. 2 ಸಂಯುಕ್ತ ಅಂಡಕೋಶಗಳುಳ್ಳ ಕೆಳಸ್ಥಾನದ, 2 ಕೋಣೆಗಳಲ್ಲಿ ಅನೇಕ ಅಂಡಕಗಳು. ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಸ್ತ್ರೀಕೇಸರ. ಒಂದು ಅಥವಾ ಎರಡು ಬೀಜವುಳ್ಳ ಓಟೆ ಫಲ.

ಉಪಯೋಗಗಳು : ಈ ಸಸ್ಯದ ಅಪಕ್ವವಾದ ಒಣಗಿದ ಹಣ್ಣುಗಳಲ್ಲಿ ಪಿಮೆಂಟೊ ಅಥವಾ ಅಲಸ್ಪೈಸ್ ಸುಗಂಧ ಪದಾರ್ಥವಿರುತ್ತದೆ. ಈ ಹಣ್ಣುಗಳಿಂದ ಬಾಷ್ಪೀಕರಿಸಿ ತೆಗೆದ ಸುಗಂಧ ತೈಲವನ್ನು ಅನೇಕ ಪದಾರ್ಥಗಳನ್ನು ಸುವಾಸಿತ ಗೊಳಿಸಲು ಉಪಯೋಗಿಸುತ್ತಾರೆ. ಈ ಸಸ್ಯದ ಎಲೆಗಳಿಂದಲೂ ಬಾಷ್ಪೀಕರಣದ ಮೂಲಕ ಸ್ವಲ್ಪಮಟ್ಟಿಗೆ (ಶೇಕಡಾ 0.5 ರಿಂದ 1.25) ಸುಗಂಧ ತೈಲವನ್ನು ಪಡೆಯ ಬಹುದು. ಎಲೆಗಳಿಂದ ತಯಾರಿಸಿದ ತೈಲವು ಹಣ್ಣುಗಳಿಂದ ತಯಾರಿಸಿದ ತೈಲದ ವಾಸನೆಯಷ್ಟು ಶ್ರೇಷ್ಠವಾಗಿರುವುದಿಲ್ಲ. ಆದ್ದರಿಂದ ಹಣ್ಣಿನಿಂದ ಪಡೆದ ತೈಲವು



ಚಿತ್ರ 11 : ಗಂಡು ಮೆಣಸು

ಕಡಮೆ ಬೆಲೆಗೆ ದೊರೆಯುವುದು. ಈ ತೈಲದಲ್ಲಿನ ಯುಜಿನಾಲ್ ಮುಖ್ಯ ಘಟಕ ಶೇಕಡಾ 75-90 ಪ್ರಮಾಣದಲ್ಲಿ ಇರುತ್ತದೆ. ಸುವಾಸನೆಯುಳ್ಳ ಒಣಗಿರುವ ಪಿಮೆಂಟೊ ಹಣ್ಣುಗಳನ್ನು ಮಾಂಸದ ಪದಾರ್ಥಗಳು, ಸೂಪ್, ಸಾಸ್, ಕೆಚಪ್, ಚಟ್ನಿ, ಉಪ್ಪಿನಕಾಯಿ ಮತ್ತಿತರ ಕಾಯ್ದಿಡುವ ಪದಾರ್ಥಗಳನ್ನು ಸುವಾಸಿತ ಮತ್ತು ರುಚಿಗೊಳಿಸಲು ಉಪಯೋಗಿಸುವರು. ಹಣ್ಣುಗಳಿಂದ ತಯಾರಿಸಿದ ಸುಗಂಧ ತೈಲ ವನ್ನು ಸಹ ಕೆಲವು ಖಾದ್ಯ ಪದಾರ್ಥಗಳನ್ನು ಸುವಾಸಿತಗೊಳಿಸಲು ಉಪಯೋಗಿಸು ವರು. ಕೆಲವು ಸೆಂಟುಗಳ ಸುವಾಸನೆಯನ್ನು ಹೆಚ್ಚಿಸಲು ಮತ್ತು ಕೆಲವು ಬಗೆಯ ಸಾಬೂನುಗಳ ತಯಾರಿಕೆಯಲ್ಲಿ ಲವಂಗ ತೈಲಕ್ಕೆ ಬದಲಾಗಿ ಇದನ್ನು ಬಳಸುತ್ತಾರೆ.

ಒಣಗಿದ ಫಲ ಮತ್ತು ತೈಲವನ್ನು ಕೆಲವು ಔಷಧಿಗಳ ತಯಾರಿಕೆಯಲ್ಲಿ ಬಳಸುವರು. ಈ ಔಷಧಿಯನ್ನು ಅಜೀರ್ಣ ರೋಗನಿವಾರಣೆಗಾಗಿ ಉಪಯೋಗಿಸುವರು. ಶುದ್ಧವಾದ ಯಬುಜಿನಾಲ್ ಘಟಕವನ್ನು ಬೇರ್ಪಡಿಸಲು ಈ ತೈಲವನ್ನು ಬಳಸುತ್ತಾರೆ.

13. ಗಜನಿಂಬೆ

[ಸಿಟ್ರಸ್ ಲಿಮನ್ : Citrus limon (Linn.) Burm.f.]


ವ್ಯಾಪನೆ : ಸಾಮಾನ್ಯವಾಗಿ ಗಜನಿಂಬೆ ಗಿಡಗಳನ್ನು ಜಗತ್ತಿನಲ್ಲಿ ಎಲ್ಲ ಭಾಗಗಳಲ್ಲಿಯೂ ಬೆಳೆಯುತ್ತಾರೆ. ಆದರೆ ದಕ್ಷಿಣ ಇಟಲಿಯ ಸಿಸಿಲಿ, ಕ್ಯಾಂಬ್ರಿಯಾ ಮತ್ತು ಅಮೆರಿಕಾದ ಕ್ಯಾಲಿಫೋರ್ನಿಯಾ ದೇಶಗಳು ಈ ಗಿಡಗಳನ್ನು ಬೆಳೆಯುವ ಹಾಗೂ ನಿಂಬೆ ತೈಲವನ್ನು ತಯಾರಿಸುವ ಮುಖ್ಯ ಕೇಂದ್ರಗಳಾಗಿವೆ.

ಭಾರತ ದೇಶದಲ್ಲಿ ಹಿಮಾಲಯ ಪರ್ವತದ ತಪ್ಪಲಲ್ಲಿ ಈ ಗಿಡಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಾಣಬಹುದು. ಇದಲ್ಲದೆ ಪಂಜಾಬ್, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಇತರ ಪ್ರದೇಶಗಳಲ್ಲಿ ಇದನ್ನು ಮನೆಯ ಕೈತೋಟಗಳಲ್ಲಿಯೂ ಹಣ್ಣಿನ ತೋಟಗಳಲ್ಲಿಯೂ ಸ್ವಲ್ಪ ಸ್ವಲ್ಪ ಪ್ರಮಾಣಗಳಲ್ಲಿ ಬೆಳೆಯುತ್ತಾರೆ.

ವರ್ಣನೆ : ಸುಮಾರು 30-50 ಸೆಂಟಿಮೀಟರ್ ಎತ್ತರ ಬೆಳೆಯುವ ಮತ್ತು ಮುಳ್ಳುಗಳಿಂದ ಕೂಡಿದ ರೆಂಬೆಗಳನ್ನು ಹೊಂದಿದ ಚಿಕ್ಕಮರ ಅಥವಾ ಪೊದರು. ಚಿಕ್ಕ ಅಂತ್ಯಾರಂಭಿ ಪುಷ್ಪಮಂಜರಿ. ಗುಲಾಬಿ ಮಿಶ್ರಿತಬಿಳಿಯ, ಸಂವಾಸನೆಯ, ಚಿಕ್ಕದ್ವಿಲಿಂಗ ಹೂವುಗಳು. ಬಟ್ಟಲಾಕಾರದ, ಕೂಡು ಅಂಚು ರೇಖೆಯ, 3-5 ಸಂಯುಕ್ತ ದಳಗಳನ್ನು ಹೊಂದಿದ ಪುಷ್ಪಪಾತ್ರೆ, ಗುಲಾಬಿಮಿಶ್ರಿತಬಿಳಿಯ 5 ಬಿಡಿದಳ. ಬಟ್ಟಲಾಕಾರದ ಡಿಸ್ಕ್ ಮೇಲೆ ಜೋಡಿಸಿರುವ ಅನೇಕ ಕೇಸರಗಳು. ಉಚ್ಚಸ್ಥಾನದ ಅನೇಕ ಕೋಣೆಗಳನ್ನು ಹೊಂದಿದ ಅಂಡಾಶಯ. ದೀರ್ಘವೃತ್ತಾಕಾರದ ಅಥವಾ ದೀರ್ಘಚತುರಸ್ರಾಕಾರದ, ತುದಿಯಲ್ಲಿ ಸಾಕಷ್ಟು ಮೊನಚಾಗಿರುವ, ಒರಟಾಗಿರುವ ತೊಗಟೆ ಮತ್ತು ಆಮ್ಲಜನಕ ತಿರುಳನ್ನು ಹೊಂದಿರುವ, ಪಕ್ವವಾದಾಗ ಹಳದಿಯಾಗುವ ಹೆಸ್ಪಿರಿಡಿಯಂಮ್ ಫಲ.

ಉಪಯೋಗಗಳು ; ಹಣ್ಣಿನ ತೊಗಟೆಯ ಹೊರಭಾಗದಲ್ಲಿ ಫ್ಲೇವಿಡೋದ ಮೇಲೆ ಅಸಮವಾಗಿ ಹರಡಿರುವ ತೈಲಗ್ರಂಥಿಗಳು ಸಂಪೂರ್ಣವಾಗಿ ಛಿದ್ರವಾದಾಗ ಮಾತ್ರ ಸುವಾಸಿತ ತೈಲವನ್ನು ಹೊರಸೂಸುತ್ತವೆ. ಈ ತೈಲವನ್ನು ಆವಿ ಬಾಷ್ಪೀಕರಣದ ಮೂಲಕ ತೆಗೆಯುವುದಿಲ್ಲ; ಏಕೆಂದರೆ, ಈ ರೀತಿಯ ಬಾಷ್ಪೀಕರಣದಲ್ಲಿ

ಸುಗಂಧ ತೈಲದ ಕೆಲವು ಘಟಕಗಳು ನಾಶವಾಗಿ ತೈಲದ ಉತ್ತಮ ಗುಣಮಟ್ಟವು ಕಡಮೆಯಾಗುವ ಸಂಭವವಿರುತ್ತದೆ. ಆದ್ದರಿಂದ ಈ ತೈಲವನ್ನು ಕೈಯಿಂದಲೇ ಹಣ್ಣುಗಳನ್ನು ಹಿಂಡಿ ಅಥವಾ ಕೆಲವು ಯಂತ್ರಗಳ ಮೂಲಕ ಹಿಂಡಿ ತೆಗೆಯುತ್ತಾರೆ. ಕೈಯಿಂದ ಹಿಂಡಿ ತೆಗೆಯುವುದು ತುಂಬ ಹಳೆಯ ಪದ್ಧತಿಯಾಗಿದ್ದು ಈ ಪದ್ಧತಿಯನ್ನು ಇಟಲಿ ದೇಶಗಳಲ್ಲಿ ಈಗಲೂ ಅನುಸರಿಸುತ್ತಾರೆ. ಯಂತ್ರಗಳ ಮೂಲಕ ಹಿಂಡಿ ತೆಗೆಯುವ ಪದ್ಧತಿಯನ್ನು ಅಮೆರಿಕ ಮತ್ತು ಇತರ ಅನೇಕ ದೇಶಗಳು ಅನುಸರಿಸುತ್ತವೆ. ಹಣ್ಣಿನ ತೊಗಟೆಯು ಶೇಕಡಾ 0.45—0.70 ರಷ್ಟು ತೈಲವನ್ನು ಹೊಂದಿರುತ್ತದೆ. ಒಂದು ಸಾವಿರ ಗಜನಿಂಬೆ ಹಣ್ಣುಗಳು ಸುಮಾರು 400-500 ಗ್ರಾಮ್ ಎಣ್ಣೆ ಕೊಡುತ್ತವೆ.



ಚಿತ್ರ 12: ಗಜನಿಂಬೆ

ಈ ಸುಗಂಧ ತೈಲದ ಗುಣಮಟ್ಟವು ಗಿಡಗಳ ಬೆಳೆದ ಪ್ರದೇಶ, ಹವಾಮಾನ ಮತ್ತು ಹಣ್ಣುಗಳಿಂದ ಎಣ್ಣೆಯನ್ನು ತೆಗೆಯುವ ಪದ್ಧತಿ ಮೊದಲಾದುವುಗಳನ್ನು

ಅವಲಂಬಿಸಿರುತ್ತದೆ. ಈ ತೈಲವು ಕಂದು ಅಥವಾ ಹಸುರುಮಿಶ್ರಿತ ಹಳದಿಯಿಂದ ದಟ್ಟಕಂದು ಅಥವಾ ದಟ್ಟಹಸುರು. ಇದರಲ್ಲಿ ಡಿ-ಲಿಮೊನೀಸ್ ಮುಖ್ಯ ಘಟಕವು ಸುಮಾರು ಶೇಕಡಾ 90 ರಷ್ಟು ಇರುತ್ತದೆ. ಈ ಸುಗಂಧ ತೈಲವನ್ನು ಬಹಳ ದಿನಗಳವರೆಗೆ ಕಾಯ್ದಿರಿಸಿದಾಗ ಅದರಲ್ಲಿರುವ ಕೆಲವು ಘಟಕಗಳಲ್ಲಿ ಅನೇಕ ಬದಲಾವಣೆಗಳಾಗಿ ತೈಲದ ಗುಣಮಟ್ಟವು ಹಾಳಾಗುತ್ತದೆ. ಆದ್ದರಿಂದ ಈ ತೈಲವನ್ನು ಚೆನ್ನಾಗಿ ಒಣಗಿಸಿ ಗಟ್ಟಿಮುಟ್ಟಾದ ಮುಚ್ಚಳವಿರುವ ಪಾರದರ್ಶಕ ಶೀಸೆಗಳಲ್ಲಿ ತುಂಬಿ, ಕಡಮೆ ಉಷ್ಣತೆಯಲ್ಲಿ ಕಾಯ್ದಿರಿಸಬೇಕಾಗುತ್ತದೆ.

ನಿಂಬೆ ಸುಗಂಧ ತೈಲವನ್ನು ಅನೇಕ ಪೇಯಗಳು ಮತ್ತು ಆಹಾರ ಪದಾರ್ಥಗಳಾದ ಕೇಕ್, ಐಸ್‌ಕ್ಯಾಂಡಿ, ಕ್ಯಾಂಡಿ, ಮಿಠಾಯಿ, ಪಿಷ್ಟಭಕ್ಷ್ಯ (ಪೇಸ್ಟ್ರಿ), ಜೆಲ್ಲಿ, ಜಾಮ್ ಮೊದಲಾದವುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಇದಲ್ಲದೆ ಇದನ್ನು ಅತ್ತರ್, ಸ್ನಾನದ ನೀರು, ಯು-ಡಿ-ಕೊಲೋನ್ ಮತ್ತು ಸಾಬೂನುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುವರು.

ಗಜನಿಂಬೆ ಹಣ್ಣನ್ನು ಉಪ್ಪಿನಕಾಯಿ ಹಾಕಲು ಉಪಯೋಗಿಸುತ್ತಾರೆ. ಮಾಂಸ ಮತ್ತು ಮೀನಿನಿಂದ ತಯಾರಿಸಿದ ಭಕ್ಷಗಳ ತಯಾರಿಕೆಯಲ್ಲಿ ಸಹ ಇದನ್ನು ಉಪಯೋಗಿಸುತ್ತಾರೆ. ಗಜನಿಂಬೆ ಹಣ್ಣಿನ ರಸವನ್ನು ಅನೇಕ ಪೇಯಗಳನ್ನು ತಂಪು ಮಾಡಲು ಉಪಯೋಗಿಸುತ್ತಾರೆ. ಬಟ್ಟೆಗಳ ಮೇಲೆ ಕಲೆ ಹೋಗಲಾಡಿಸಲು ಮತ್ತು ಬೆಳ್ಳಗೆ ಮಾಡಲು ಈ ಹಣ್ಣಿನ ರಸವು ಅತಿ ಮುಖ್ಯವಾದ ಪಾತ್ರವಹಿಸುತ್ತದೆ. ಸಿಟ್ರಿಕ್ ಆಮ್ಲವನ್ನು ಈ ಹಣ್ಣುಗಳಿಂದಲೇ ತಯಾರಿಸುತ್ತಾರೆ.

14. ಗುಲಾಬಿ


(ರೋಸಾ ಪ್ರಭೇದಗಳು)

ಇದರಲ್ಲಿ ಅನೇಕ ಪ್ರಭೇದಗಳುಂಟು, ಇವೆಲ್ಲ ರೋಸೇಸಿ ಕುಟುಂಬಕ್ಕೆ ಸೇರುತ್ತವೆ.

ವ್ಯಾಪನೆ : ಸಾಮಾನ್ಯವಾಗಿ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಗುಲಾಬಿ ಗಿಡಗಳನ್ನು ಬೆಳೆಯುವರು. ಭಾರತದ ಘಾಜಿಪುರ, ಕಾನಾಜಿ, ಸಿಕಂದರಾಬಾದ್, ಬಾರವಾನ್, ಕಾನ್ಪುರ, ಉತ್ತರ ಪ್ರದೇಶ ಮತ್ತು ಕರ್ನಾಟಕದಲ್ಲಿ ಸಾಕಷ್ಟು ಬೆಳೆಯುವುದನ್ನು ಕಾಣಬಹುದು.

ವರ್ಣನೆ : ನೆಟ್ಟಗೆ ಅಥವಾ ಬಳ್ಳಿಯಂತೆ ಹಬ್ಬುವ ಶಾಕ ಅಥವಾ ಪೊದರು, ದಾರು ರೀತಿಯ, ಹಿಂಬಾಗಿರುವ ಮುಳ್ಳುಗಳನ್ನು ಹೊಂದಿರುವ ಕಾಂಡ, ಪರ್ಯಾಯ ಜೋಡಣೆಯ ಅಸಮಗರಿರೂಪದ ಗರಗಸದ ಹಲ್ಲಿನಂತೆ ಅಂಚುಳ್ಳ, ಗರಿ ಎಲೆಗಳನ್ನು

ಹೊಂದಿರುವ ಸಾಯಂಕ್ತ ಎಲೆಗಳು. ಎಲೆಯ ತೊಟ್ಟಿಗೆ ಅಂಟಿಕೊಂಡಿರುವ ವೃಂತ ಪರ್ಣಗಳು. ಒಂಟಿಯಾಗಿ ಕಾಂಡದ ತುದಿಯಲ್ಲಿ ಇರುವ ಪುಷ್ಪಮಂಜರಿ. ಗುಲಾಬಿ, ಕೆಂಪು, ಶ್ವೇತ, ಹಳದಿ ಮತ್ತಿತರ ಬಣ್ಣದ ಚಿಕ್ಕ ಅಥವಾ ದೊಡ್ಡ ಆಕರ್ಷಕ ತ್ರಿಜ್ಯ ಸಮಪಾರ್ಶ್ವ, ದ್ವಿಲಿಂಗ, ಸಂಪೂರ್ಣ ಪುಷ್ಪಾಕ್ಷವಿರುವ, ಪರಿಶಲಾಕೆಯುಳ್ಳ, ಪುಷ್ಪ ಪತ್ರಕವನ್ನು ಹೊಂದಿರುವ ಹೂವು. ಚಿಕ್ಕ ಹಸುರು ವರ್ಣದ, ಎಲೆಯಂತಹುದರ



ಚಿತ್ರ 13 : ಗುಲಾಬಿ

ಕೆಳಗಡೆಗೆ ಅಂಟಿಕೊಂಡಿರುವ ಹೆಂಚುಹೊದಿಕೆ ರೀತಿ ಜೋಡಣೆಯ 4–5 ಪುಷ್ಪಪಾತ್ರೆ ಪತ್ರಕಗಳಿರುವ ಪುಷ್ಪಪಾತ್ರೆ. ಸಣ್ಣ ಅಥವಾ ದೊಡ್ಡದಾದ, 4–5 ಅಥವಾ ಅನೇಕ ಪುಷ್ಪದಳಗಳಿರುವ ಹೆಂಚುಹೊದಿಕೆ ರೀತಿಯ ದಳವೃತ್ತ. ಪುಷ್ಪದಳಗಳಿಗಿಂತ ಎರಡು, ಮೂರು ಅಥವಾ ನಾಲ್ಕುಪಟ್ಟು ಅಥವಾ ಬಹುಸಂಖ್ಯೆಯಲ್ಲಿರಬಹುದಾದ, ಮೊಗ್ಗಿನಲ್ಲಿ ಒಳಬಗ್ಗಿರುವ ಕೇಸರ ದಂಡಗಳಿರುವ ಕೇಸರಗಳು. ಕೇಸರ ಮತ್ತು ಶಲಾಕಾಕೋಶದ ಮಧ್ಯದಲ್ಲಿರುವ ಮಧುವನ್ನು ಸ್ರವಿಸುವ ಬಟ್ಟಲು. ಪರಿಶಲಾಕೆ ಸ್ಥಿತಿಯ ಅನೇಕ ಬಿಡಿ ಬಿಡಿಯಾದ ಶಲಾಕಾಕೋಶಗಳು. ಅಂಚಿಂ ಅಂಡಕಾಧಾರಕ್ಕೆ ಅಂಟಿರುವ ಅಂಡಕಗಳು. ಅಂಡಕೋಶಗಳಷ್ಟೇ ಸಂಖ್ಯೆಯಲ್ಲಿರುವ ಶಲಾಕ ಮತ್ತು ಶಲಾಕಾಗ್ರಗಳು. ಮೆದುತಿರುಳಿನ ಪುಷ್ಪಪಾತ್ರೆಯಿಂದ ಸುತ್ತುವರಿಯಲ್ಪಟ್ಟ ನಗ್ನಫಲಗಳು. ಭ್ರೂಣಗಳಿರುವ ಭ್ರೂಣಾಹಾರವಿಲ್ಲದ ಬೀಜಗಳು.

ಉಪಯೋಗಗಳು : ಗುಲಾಬಿ ಹೂವಿನ ಪುಷ್ಪದಳಗಳಿಂದ ಲಭಿಸುವ ತೈಲವನ್ನು ಗುಲಾಬಿ ಎಣ್ಣೆ ಅಥವಾ ಅತ್ತರ್ ಎಂದು ಕರೆಯುತ್ತಾರೆ. ಸುಗಂಧ ತೈಲವನ್ನು ಪ್ರತ್ಯೇಕವಾಗಿ ಅಥವಾ ಇತರ ಸುವಾಸನೆ ತೈಲಗಳ ಜೊತೆಯಲ್ಲಿ ಬೆರೆಸಿ ಉಪಯೋಗಿಸುವುದುಂಟು. ಆಗತಾನೆ ಅರಳಿರುವ ಹೂವುಗಳನ್ನು ಪ್ರಾತಃಕಾಲ ಸಮಯದಲ್ಲಿ ಆಯ್ದುಕೊಂಡು ಆದಷ್ಟು ಶೀಘ್ರವಾಗಿ ಬಾಷ್ಪೀಕರಿಸಿ ಗುಲಾಬಿ ಎಣ್ಣೆಯನ್ನು ತೆಗೆಯುತ್ತಾರೆ. ಒಂದು ಪೌಂಡ್ ತೈಲವನ್ನು ತೆಗೆಯಬೇಕಾದರೆ ಸುಮಾರು ಇಪ್ಪತ್ತು ಸಾವಿರ ಪೌಂಡು ಹೂವುಗಳನ್ನು ಬಾಷ್ಪೀಕರಿಸಬೇಕಾಗುತ್ತದೆ. ಆರಂಭದಲ್ಲಿ ಈ ತೈಲವು ವರ್ಣರಹಿತವಾಗಿದ್ದರೂ ಕ್ರಮೇಣ ಹಳದಿ ಅಥವಾ ಹಸುರು ವರ್ಣಕ್ಕೆ ಮಾರ್ಪಾಡಾಗುತ್ತದೆ. ಬಾಷ್ಪೀಕರಣದ ನಂತರ ಉಳಿದಿರುವ ನೀರನ್ನು ಹೆಚ್ಚು ಪ್ರಮಾಣದಲ್ಲಿ ಗುಲಾಬಿ ಪನ್ನೀರನ್ನು ತೆಗೆಯುವುದಕ್ಕೆ ಮುಖ್ಯವಾಗಿ ಪನ್ನೀರು ಗುಲಾಬಿ (ರೋ. ಡಮಾಸಿನ; R. damascena)ಮತ್ತು ರೋಜಾ ಹೂವು (ರೋ. ಸೆಂಟಿಫೋಲಿಯ; R. centifolia) ಗಳನ್ನು ಬಳಸುತ್ತಾರೆ.

ಗುಲಾಬಿ ಜಾತಿಯ ಅನೇಕ ಪ್ರಭೇದಗಳನ್ನು ಅವುಗಳ ಅತಿ ಸುಂದರ ಹೂವುಗಳಿಗಾಗಿ ಹೇರಳವಾಗಿ ತೋಟಗಳಲ್ಲಿ, ಉದ್ಯಾನವನಗಳಲ್ಲಿ ಮತ್ತು ಮನೆಯ ಆವರಣಗಳಲ್ಲಿ ಬೆಳೆಸುತ್ತಾರೆ. ಕತ್ತರಿಸಿದ ಹೂವಿನ ಕಾಂಡಗಳನ್ನು ಹೂದಾನಿಯಲ್ಲಿರಿಸಿ ಗೃಹಾಲಂಕಾರಕ್ಕೆ ಹಾಗೂ ಹೂವುಗಳನ್ನು ಸ್ತ್ರೀಯರ ಕೇಶಾಲಂಕಾರಕ್ಕೆ ಉಪಯೋಗಿಸುವರು.

15. ಗೋರಂಟ

(ಲಾಸೋನಿಯಾ ಇನೆರಮಿಸ್ ; Lawsonia ineremis Linn.)

ವ್ಯಾಪನೆ : ಈ ಸಸ್ಯದ ತವರು ಈಜಿಪ್ಟ್. ಅರೇಬಿಯಾ, ಇರಾನ್ ಮತ್ತು ಭಾರತ ದೇಶದ ಉಷ್ಣ ಮತ್ತು ಸಮಶೀತೋಷ್ಣ ಪ್ರದೇಶಗಳಲ್ಲಿ ಈ ಸಸ್ಯವು ಚೆನ್ನಾಗಿ ಬೆಳೆಯುತ್ತದೆ. ಭಾರತದಲ್ಲಿ ಪಂಜಾಬ್, ಗುಜರಾತ್, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಬೆಳೆಯುತ್ತಾರೆ. ಅನೇಕ ಪ್ರದೇಶಗಳಲ್ಲಿ ಈ ಸಸ್ಯವನ್ನು ಬೇಲಿಯಂತೆ ಬೆಳೆಸುವರು.

ವರ್ಣನೆ : ಅನೇಕ ರೆಂಬೆಗಳನ್ನು ಹೊಂದಿದ, ಮಧ್ಯಮ ಅಥವಾ ದೊಡ್ಡ ಪೊದರು. 4 ಕೋನಗಳಿರುವ ಸಾಮಾನ್ಯವಾಗಿ ಚೂಪಾದ ತುದಿಯಿರುವ ಕೊಂಬೆ. ಅಭಿಮುಖ ಜೋಡಣೆಯ ಸುಮಾರು 2–3 ಸೆಂಟಿಮೀಟರ್ ಉದ್ದ ಸಮ ಅಂಚಿನ ಕಡಿದಾದ ಬುಡವಿರುವ, ದೀರ್ಘವೃತ್ತಾಕಾರದ ಚೂಪಾದ ತುದಿ ಹೊಂದಿದ ಎಲೆಗಳು. ತುದಿಯಲ್ಲಿ ಮಿಶ್ರಜೋಡಣೆಯಿರುವ ಮಧ್ಯಾರಂಭಿ ಪುಷ್ಪಮಂಜರಿ. ಸುವಾಸನೆಯುಳ್ಳ ಬಿಳಿ ಅಥವಾ ಗುಲಾಬಿ ಬಣ್ಣದ ದ್ವಿಲಿಂಗ, ತ್ರಿಜ್ಯ ಸಮಪಾರ್ಶ್ವರೂಪತೆಯ ಪರಿಜಾಯಾಂಗ ಹೂವುಗಳು. 4 ಸಂಯುಕ್ತ ಪುಷ್ಪಪಾತ್ರಪತ್ರಕಗಳುಳ್ಳ ಕೂಡು ಅಂಚು

ರೀತಿಯ, ಗಂಟೆಯಾಕಾರದ ಪುಷ್ಪಪಾತ್ರೆ. 4 ಬಿಡಿ ಪುಷ್ಪದಳಗಳು, ಪುಷ್ಪಪಾತ್ರೆಯ ಕೊಳವೆಯ ಮೇಲಿರುವ ಜೋಡಿಯಾಗಿರುವ 8 ಕೇಸರಗಳು. ಗೋಳಾಕಾರದ 2-4 ಕೋಣೆಗಳಲ್ಲಿ ಅನೇಕ ಅಂಡಕಗಳು. ಅಕ್ಷಅಂಡಕಾಧಾರಕ್ಕೆ ಅಂಟಿಕೊಂಡಿರುವ ಅಂಡಾಶಯ. ಟೋಪಿಯಾಕಾರದ ಶಲಾಕಾಗ್ರವುಳ್ಳ ದಪ್ಪ ಶಲಾಕೆ. ತ್ರಿಕೋನಾಕಾರದ ಅನೇಕ ಬೀಜಗಳಿರುವ ಗೋಳಾಕಾರದ ಸಂಪುಟಕ ಮಾದರಿ ಫಲ.



ಚಿತ್ರ 14: ಗೋರಂಟಿ

ಉಪಯೋಗಗಳು : ಗೋರಂಟಿ ಹೂವುಗಳು ತುಂಬ ಸುವಾಸನೆಯನ್ನು ಹೊಂದಿರುತ್ತವೆ. ಈ ಹೂವುಗಳನ್ನು ಬಾಷ್ಪೀಕರಿಸಿ ಗೋರಂಟಿ ತೈಲವನ್ನು ತೆಗೆಯುತ್ತಾರೆ. ಈ ಸುವಾಸಿತ ತೈಲವನ್ನು ಅತ್ತರುಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಸಾಬೂನು ಮತ್ತು ಮುಖಾಲಂಕಾರ ವಸ್ತುಗಳನ್ನು ಸುವಾಸಿತಗೊಳಿಸಲು ಸಹ ಈ ತೈಲವನ್ನು ಬಳಸುತ್ತಾರೆ.

ಎಲೆ ಮತ್ತು ಕಾಂಡಗಳಿಂದ ಕಿತ್ತಳೆ ಬಣ್ಣವನ್ನು ತಯಾರಿಸಲು ಈ ಸಸ್ಯದ ಎಲೆಗಳನ್ನು ಅರೆದು ಒಣಗಿಸಿ ಅಂಗೈ, ಉಗುರು ಮತ್ತು ಪಾದಗಳಿಗೆ ಬಣ್ಣ ಹಾಕಿಕೊಳ್ಳಲು ಲೇಪಿಸಿಕೊಳ್ಳುವರು.

ಸಸ್ಯವು 3 ವರ್ಷ ಬೆಳೆದ ಮೇಲೆ ಕಟಾವು ಮಾಡುತ್ತಾರೆ. ಎಲೆಗಳನ್ನು ಅರೆದು ಒಣಗಿಸಿ ಚರ್ಮ ಮತ್ತು ಕೆಲವು ಬಟ್ಟೆಗಳಿಗೆ ಬಣ್ಣಕೊಡಲು ಬಳಸುತ್ತಾರೆ. ಕೆಲವು ದೇಶಗಳಲ್ಲಿ ತಲೆಗೂದಲು, ಹುಬ್ಬು ಮೊದಲಾದವುಗಳಿಗೆ ಬಣ್ಣಹಾಕಲು ಸಹ ಉಪಯೋಗಿಸುವರು.

ಔಷಧಿಯುಕ್ತ ಉಪಯೋಗಗಳನ್ನು ಸಹ ಹೊಂದಿದೆ. ಚರ್ಮರೋಗಗಳ ನಿವಾರಣೆಗೆ, ಕುರು, ಸುಟ್ಟಗಾಯ ಮೊದಲಾದವುಗಳನ್ನು ವಾಸಿಮಾಡಲು ಉಪಯೋಗಿಸುವರು. ಗಂಟಲಿನ ಕೆರೆತಕ್ಕೆ ಇದರ ಎಲೆಗಳಿಂದ ತಯಾರಿಸಿದ ಕಷಾಯವನ್ನು ಕೊಡುವರು. ಎಲೆಗಳನ್ನು ಜಜ್ಜಿ ಆ ಚರಟವನ್ನು ತಲೆನೋವು ಮತ್ತು ಪಾದಗಳ ಉರಿಯನ್ನು ಕಡಮೆ ಮಾಡಲು ಸಹ ಅನೇಕ ಜನರು ಉಪಯೋಗಿಸುವುದುಂಟು. ಈ ಸಸ್ಯದ ತೊಗಟೆ ಮತ್ತು ಬೀಜಗಳು ಸಹ ಆಯುರ್ವೇದ ವೈದ್ಯಕೀಯ ಉಪಯೋಗಗಳನ್ನು ಹೊಂದಿರುತ್ತವೆ.

16. ಚೈನಾ ಸೊಂಪು

(ಇಲ್ಲಿಸಿಯಮ್ ಎನಿಸೇಟಮ್ : Illicium anisatum Linn.)

ವ್ಯಾಪನೆ : ಈ ಸಸ್ಯದ ಮೂಲ ಚೀನಾ ದೇಶ. ದಕ್ಷಿಣ ಚೀನ ಮತ್ತು ಇಂಡೋಚೀನಾದಲ್ಲಿ ಈ ಬೆಳೆಯನ್ನು ಬೀಜಗಳಿಂದ ಬೆಳೆಸುತ್ತಾರೆ.

ವರ್ಣನೆ : ಸುವಾಸನಾಯುಕ್ತ ನಿತ್ಯಹಸುರು ಪೊದ. ವೃಂತಪರ್ಣವಿಲ್ಲದಿರುವ ಸಮ ಅಂಚುಳ್ಳ ಸರಳ, ಒರಟು ಈಟಿಯಾಕಾರದ, ಪರ್ಯಾಯ ಜೋಡಣೆಯ ಎಲೆಗಳು. ಎಲೆ ಕಂಕುಳಲ್ಲಿ ಒಂಟಿ ಅಥವಾ ಮಿಶ್ರಜೋಡಣೆ ರೀತಿಯ ಪುಷ್ಪಮಂಜರಿ. ದ್ವಿಲಿಂಗ ತ್ರಿಜ್ಯ ಸಮಪಾರ್ಶ್ವಕ ಹೂವುಗಳು. 3 ಅಥವಾ 6 ದಳದಂತಿರುವ ಬಿಡಿ ಪುಷ್ಪಪಾತ್ರ ಪತ್ರಕಗಳು. ಬಿಡಿಯಾದ, ಅನೇಕ ವೃತ್ತಗಳಲ್ಲಿ ಜೋಡಿಸಿರುವ ಪುಷ್ಪದಳಗಳು. ಅನೇಕ, ಸುತ್ತು ಜೋಡಣೆಯಲ್ಲಿರುವ, ದಪ್ಪ ಕೇಸರದಂಡಗಳಿರುವ, ಒಳಗಡೆಗೆ ತಿರುಗಿರುವ ಸಂಯುಕ್ತ ಪರಾಗಕೋಶಗಳಿರುವ ಕೇಸರಗಳು. 8–20 ಬಿಡಿ ಅಂಡಕೋಶಗಳು. ಚಪ್ಪಟೆಯಾದ ಗಟ್ಟಿಯಾದ ನಕ್ಷತ್ರಾಕಾರದ ಸಾಮೂಹಿಕ ಏಕಸೀಳು ಮಾದರಿ ಫಲ.

ಕಂದುಮಿಶ್ರಿತ ಕೆಂಪು ನಕ್ಷತ್ರಾಕಾರದ ಫಲಗಳು 8 ಅಂಡಕೋಶಗಳನ್ನು ಹೊಂದಿದ್ದು ಪ್ರತಿಯೊಂದು ಅಂಡಕೋಶದಲ್ಲೂ ಗಟ್ಟಿಯಾದ ಹೊಳೆಯುವ ಒಂದೊಂದು ಬೀಜವಿರುತ್ತದೆ. ಫಲ ಮತ್ತು ಬೀಜಗಳು ತುಂಬಾ ಸುವಾಸನೆ ಮತ್ತು ರುಚಿಯನ್ನು ಹೊಂದಿರುತ್ತವೆ. ಈ ಗಿಡ ಬೆಳೆಯಲು ವಿಶಿಷ್ಟ ರೀತಿಯ ಹವಾಮಾನ ಬೇಕಾಗಿರುತ್ತದೆ. ಅಲ್ಲದೆ ಇದು ತುಂಬ ನಿಧಾನವಾಗಿ ಬೆಳೆಯುವಂಥಹ ಬೆಳೆ. ಈ

ಕಾರಣದಿಂದ ಇದನ್ನು ಮೇಲಿಂದ ಮೇಲೆ ಬೆಳೆಯುವುದು ಸಾಧ್ಯವಾಗುವುದಿಲ್ಲ. ಹಣ್ಣುಗಳು ಪಕ್ವವಾಗುವುದಕ್ಕಿಂತ ಮೊದಲೇ ಗಿಡದಿಂದ ಕಿತ್ತು ಅವುಗಳನ್ನು ಒಣಗಿಸುತ್ತಾರೆ ಅಥವಾ ಕಿತ್ತ ತಕ್ಷಣವೇ ತೈಲವನ್ನು ತೆಗೆಯಲು ಬಾಷ್ಪೀಕರಣಕ್ಕೆ ಒಳಪಡಿಸುತ್ತಾರೆ.



ಚಿತ್ರ 15: ಚೈನಾ ಸೋಂಪು

ಉಪಯೋಗಗಳು: ಪಾಶ್ಚಾತ್ಯ ದೇಶಗಳಲ್ಲಿ ಇದನ್ನು ಹೆಚ್ಚಾಗಿ ಮಸಾಲೆಯಂತೆ ಉಪಯೋಗಿಸುವುದುಂಟು. ಬಾಯಿಂದ ಹೊರಹೊಮ್ಮುವ ದುರ್ವಾಸನೆಯನ್ನು ನಿವಾರಿಸಲು ಮತ್ತು ಪಚನಕ್ರಿಯೆಯನ್ನು ಹೆಚ್ಚಿಸಲು ಇದನ್ನು ಮೆಲ್ಲುವುದುಂಟು. ಹಣ್ಣುಗಳಿಂದ ತೆಗೆದ ಸುಗಂಧ ತೈಲವನ್ನು ಅತ್ತರ, ಸೆಂಟ್ ಮೊದಲಾದವುಗಳ

ತಯಾರಿಕೆಯಲ್ಲಿ ಮತ್ತು ಮದ್ಯಪಾನೀಯಗಳನ್ನು ಸಂವಾಸಿತಗೊಳಿಸಲು ಮತ್ತು ಕೆಲವು ಆಹಾರ ಪದಾರ್ಥಗಳಿಗೆ ರುಚಿನೀಡಲು ಉಪಯೋಗಿಸುತ್ತಾರೆ.

ಈ ತೈಲವು ಕೆಲವು ಔಷಧಿಯುಕ್ತ ಉಪಯೋಗಗಳನ್ನು ಹೊಂದಿರುತ್ತದೆ. ಪಚನಕ್ರಿಯೆಯನ್ನು ಹೆಚ್ಚಿಸಿ ಹಸಿವೆಯನ್ನುಂಟುಮಾಡಲು ಮತ್ತು ಕೆಮ್ಮು ನೆಗಡಿಗಳ ಉಪಶಮನಕ್ಕೆ ಹಾಗೂ ಕಫ ಕತ್ತರಿಸುವುದಕ್ಕಾಗಿ ಇದನ್ನು ಉಪಯೋಗಿಸುತ್ತಾರೆ.

17. ಜಾಜಿಕಾಯಿ

(ಮಿರಿಸ್ಟಿಕಾ ಫ್ರಾಗ್ರನ್ಸ್ : **Myristica fragrans Houtt.** ನಟ್‌ಮೆಗ್ ಮತ್ತು ಮೇಸ್‌ಟ್ರೀ)

ವ್ಯಾಪನೆ : ಇಂಡೋನೇಶಿಯಾದ ಕೆಲವು ದ್ವೀಪಗಳು ಜಾಜಿಕಾಯಿ ಮರಗಳನ್ನು ಬೆಳೆಯುವ ಮೂಲ ದೇಶಗಳಾಗಿದ್ದು ಸುಮಾರು ಎರಡು ಶತಮಾನಗಳಿಂದ ಮಾತ್ರ ಈ ವೃಕ್ಷವನ್ನು ಭಾರತದಲ್ಲಿ ಬೆಳೆಯಲು ಪ್ರಾರಂಭಿಸಲಾಗಿದೆ. ಇತ್ತೀಚಿಗೆ ಇದನ್ನು ಹೆಚ್ಚಾಗಿ ಉದ್ಯಾನವನಗಳಲ್ಲಿ ಬೆಳೆಯುತ್ತಾರೆ.

ವರ್ಣನೆ : ಸುಮಾರು 90–180 ಸೆಂಟಿಮೀಟರ್ ಎತ್ತರವುಳ್ಳ, ಸುಂದರ ನಿತ್ಯಹಸುರು ಮರ. ಪರ್ಯಾಯ ಜೋಡಣೆಯ, ಸಮ ಅಂಚುಳ್ಳ, ದೀರ್ಘ ಚತುರಸ್ರ ಅಥವಾ ದೀರ್ಘವೃತ್ತಾಕಾರದ, ಚೂಪಾದ ತುದಿ ಇರುವ, ಹೊಳೆಯುವ ಮೇಲ್ಭಾಗ ಹೊಂದಿದ, 13–17 ಜೊತೆ ನರಗಳಿರುವ 1–3 ಸೆಂಟಿಮೀಟರ್ ಉದ್ದವಾದ ತೊಟ್ಟುಳ್ಳ ಎಲೆಗಳು. ಎಲೆಯ ಕಂಕುಳಲ್ಲಿರುವ ದಪ್ಪವಾದ ಪುಷ್ಪಮಂಜರಿ ವೃತ್ತವಿರುವ ಅಥವಾ ಪುಷ್ಪಛತ್ರಿ ರೀತಿಯ ಪುಷ್ಪಮಂಜರಿ. ಪ್ರತ್ಯೇಕ ವೃಕ್ಷಗಳ ಮೇಲೆ ಕಂಡುಬರುವ ಚಿಕ್ಕ, ಏಕಲಿಂಗ, ಸುವಾಸನೆಯುಳ್ಳ ಹೆಣ್ಣು ಮತ್ತು ಗಂಡು ಹೂವುಗಳು. ಗಂಡು ಹೂವುಗಳು ದಪ್ಪಗಿದ್ದು ಚಿಕ್ಕದಾಗಿರುತ್ತವೆ. ಪುಷ್ಪಮಂಜರಿ ವೃಂತದ ಮೇಲೆ 8–20 ಹೂವುಗಳಿದ್ದು ಎಲೆಯ ಕಂಕುಳಲ್ಲಿರುವ ಮಧ್ಯಾರಂಭಿ ಪುಷ್ಪಮಂಜರಿ. ದೊಡ್ಡ ಉಪವೃತ್ತಾಕಾರದ, ರೋಮಗಳುಳ್ಳ, ಪರಿದಳಪುಂಜದ ಹೆಚ್ಚು ಭಾಗವನ್ನು ಮುಚ್ಚಿರುವ ಪುಷ್ಪವೃಂತ ಕಿರುಪತ್ರ. 5 ಮಿಲಿಮೀಟರ್ ಉದ್ದವಾದ, ಅಂಡವೃತ್ತಾಕಾರದ, ಹೊಳೆಯುವ ಒಳಭಾಗವುಳ್ಳ, ಮೂರು ಭಾಗಗಳಲ್ಲಿ ವಿಭಜಿಸಿರುವ ತ್ರಿಕೋಣಾಕಾರದ 4 ಕೇಸರಗಳಿರುವ ಪರಿದಳಪುಂಜ. ಪರಿದಳಪುಂಜಕ್ಕಿಂತಲೂ ಚಿಕ್ಕದಾಗಿರುವ 2 ಮೀಟರ್ ಉದ್ದದ ಕೇಸರ ಕೊಳವೆಯಿದ್ದು ರೇಖಾಕಾರದ 9–10 ಪರಾಗಕೋಶಗಳನ್ನು ಹೊಂದಿದ ಕೇಸರ ಮಂಡಲ. ಹೆಣ್ಣು ಹೂವುಗಳು ತೊಟ್ಟಿಲ್ಲದ, ಕೆಲವೇ ಹೂವುಗಳನ್ನು ಹೊಂದಿದ, ಎಲೆಯ ಕಂಕುಳಲ್ಲಿರುವ ಮಧ್ಯಾರಂಭಿ ಪುಷ್ಪಮಂಜರಿ. ಕೆಳಭಾಗದಲ್ಲಿ ಅಗಲವಾಗಿರುವ ಗೋಳಾಕಾರದ, ಮೂರು ಭಾಗಗಳಾಗಿರುವ,

ತೊರಭಾಗದಲ್ಲಿ ಚಿಕ್ಕ ರೋಮಗಳನ್ನು ಹೊಂದಿರುವ ಪರಿದಳ ಪುಂಜ. ಕ್ರಮವಾಗಿ ಮೇಲ್ಗಡೆಗೆ ಚೂಪಾಗುವ, ಗೋಳಾಕಾರದ ಕೂಡಿಕೊಂಡ ರೀತಿಯ ಶಲಾಕಾಗ್ರವಿರುವ ಅಂಡಾಶಯ. 5 ಸೆಂಟಿಮೀಟರ್ ವ್ಯಾಸ ಇರುವ ಕರಟಕಾಯಿ ಫಲ.



ಚಿತ್ರ 16 : ಜಾಜಿಕಾಯಿ

ಉಪಯೋಗಗಳು : ಈ ಮರದ ಫಲವು ಗೋಳಾಕಾರ, ಪಕ್ವವಾದಾಗ ಕಿತ್ತಳೆ ಅಥವಾ ಬಂಗಾರಮಿಶ್ರಿತ ಹಳದಿಬಣ್ಣ. ನೋಡಲು ಬಹಳ ಸುಂದರವಾಗಿರುತ್ತದೆ. ಸಂಪೂರ್ಣ ಪಕ್ವವಾದಾಗ ಹೊರಕವಚವು ಒಡೆದು ಒಳಗಿನ ಹೊಳೆಯುವ ಕಂದು ಬೀಜವು ಕೇಸರಿ ವರ್ಣದ ಏರಿಲ್‌ನಿಂದ ಸಂಪೂರ್ಣವಾಗಿ ಮುಚ್ಚಿರುತ್ತದೆ. ಒಳಗಿನ ಬೀಜವು ಜಾಜಿಕಾಯಿಯಾಗಿಯೂ ಹೊರಗಿನ ಏರಿಲ್ ಭಾಗವು ಜಾಜಿಪತ್ರೆಯಾಗಿಯೂ ಬಳಕೆಯಲ್ಲಿವೆ.

ಜಾಜಿಕಾಯಿ ಮತ್ತು ಜಾಜಿಪತ್ರವನ್ನು ಅನೇಕ ಆಹಾರ ಪದಾರ್ಥ ಮತ್ತು ಅಡಿಕೆ ಪುಡಿ ಮೊದಲಾದವುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಜಾಜಿಪತ್ರೆಯನ್ನು ಸಾಂಬಾರು, ಪಲ್ಯ, ಮಾಂಸಾಹಾರ ತಯಾರಿಕೆ, ಕೇಕ್, ಟೊಮ್ಯಾಟೊ ಕೆಚಪ್ ಹಾಗೂ ಉಪ್ಪಿನಕಾಯಿ ತಯಾರಿಕೆಗಳಲ್ಲಿ ಉಪಯೋಗಿಸುತ್ತಾರೆ.

ಕೆಳದರ್ಜೆಯ ಜಾಜಿಕಾಯಿ ಮತ್ತು ಜಾಜಿ ಪತ್ರೆಯಿಂದ ಸುಗಂಧ ತೈಲವನ್ನು ಬಾಷ್ಪೀಕರಣ ಮೂಲಕ ತೆಗೆಯುತ್ತಾರೆ. ಈ ಸುಗಂಧತೈಲಗಳು ವರ್ಣರಹಿತ ಅಥವಾ ತಿಳಿಹಳದಿ ಜಾಜಿಕಾಯಿಯ ಸುವಾಸನೆಯನ್ನು ಹೊಂದಿರುತ್ತವೆ. ಈ ತೈಲವನ್ನು ಆಹಾರ ಪದಾರ್ಥಗಳನ್ನು ಸುವಾಸಿತಗೊಳಿಸಲು ಮತ್ತು ಕೆಲವು ಶೃಂಗಾರ ಸಾಧನೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಜಾಜಿಕಾಯಿ ಕೆಲವು ಔಷಧಿಯುಕ್ತ ಉಪಯೋಗಗಳನ್ನು ಹೊಂದಿರುತ್ತದೆ. ಶೀತ ಮತ್ತು ಕೆಮ್ಮು ನಿವಾರಣೆಗೆ ಒಣಗಿದ ಕಾಯಿಯನ್ನು ತೇಯ್ದು ಅದರ ಗಂಧವನ್ನು ಉಪಯೋಗಿಸುತ್ತಾರೆ. ಈ ತೈಲದಲ್ಲಿ ಮಿರಿಸ್ಟಿಕಸ್ ವಿಷ ಪದಾರ್ಥವಿರುವ ಕಾರಣ ತೈಲವನ್ನು ಸಾಧ್ಯವಾದಷ್ಟು ಕಡಮೆ ಪ್ರಮಾಣದಲ್ಲಿ ಉಪಯೋಗಿಸಬೇಕು. ಈ ಸುಗಂಧತೈಲವನ್ನು ತಂಬಾಕು ಉದ್ದಿಮೆಯಲ್ಲಿ ಹಾಗೂ ದಂತ ಚೂರ್ಣ ತಯಾರಿಕೆಯಲ್ಲಿ ಉಪಯೋಗಿಸುವರು.

18. ಜಾಲಿ (ಕಸ್ತೂರಿ)


(ಅಕೇಸಿಯಾ ಫಾರ್ನೇಸಿಯಾನ; Acacia farnesiana Linn. Willd)

ವ್ಯಾಪನೆ : ಈ ಗಿಡದ ಮೂಲ ಅಮೆರಿಕಾ ದೇಶದ ಉಷ್ಣವಲಯ. ಭಾರತದಲ್ಲಿ ಸಾಮಾನ್ಯವಾಗಿ ಇದು ಎಲ್ಲ ಪ್ರದೇಶಗಳಲ್ಲಿಯೂ ಬೆಳೆಯುವುದು. ಭಾರತದಲ್ಲಿ ಈ ಗಿಡದ ಹೂವು ಬಿಡುವ ಕಾಲ ನವೆಂಬರ್ ತಿಂಗಳಿಂದ ಮಾರ್ಚ್‌ವರೆಗೆ.

ವರ್ಣನೆ : ಸಾಮಾನ್ಯವಾಗಿ ಬಹುಸಾಂವತ್ಸರಿಕ ಪೊದರು ಅಥವಾ ಸಣ್ಣಮರ. ಮುಳ್ಳುಗಳಿಂದ ಕೂಡಿದ, ತಿಳಿಕಂದುವರ್ಣದ ಚುಕ್ಕಿಗಳಿರುವ ಅಡ್ಡಾದಿಡ್ಡಿಯಾಗಿ ಬೆಳೆಯುವರೆಂಬೆಗಳನ್ನು ಹೊಂದಿದ ತೆಳುವಾದ ದಾರು ರೀತಿಯ ಕಾಂಡ. ದ್ವಿಗರಿ ರೂಪದ, ಪರ್ಯಾಯ ಜೋಡಣೆಯ ಗಟ್ಟಿಯಾದ ಮತ್ತು ಚೂಪಾಗಿರುವ, ಮುಳ್ಳಿನಂತೆ ಮಾರ್ಪಾಟಾಗಿರುವ ಅನುಪತ್ರಗಳುಳ್ಳ ಸಂಯುಕ್ತ ಎಲೆಗಳು. ತೊಟ್ಟು ಇಲ್ಲದೆ ಒರಟಾಗಿರುವ, ಉದ್ದವಾಗಿ ಸ್ವಲ್ಪ ಅಗಲವಾಗಿರುವ, ಹಸುರು ವರ್ಣದ ಗರಿ ಎಲೆಗಳು. ಗೋಲಾಕಾರದ ಚೆಂಡು ಪುಷ್ಪಮಂಜರಿ. ಸುವಾಸನೆಯ, ಅಚ್ಚ ಹಳದಿಯ ಪುಷ್ಪಪತ್ರಕ ಮತ್ತು ಪುಷ್ಪವೃಂತಪತ್ರಕವಿರುವ, ದ್ವಿಲಿಂಗ, ಪೂರ್ಣ ಹಾಗೂ ತ್ರಿಜ್ಯ ಸಮರೂಪತೆಯ, ಅಧೋಶಲಾಕೆ ಸ್ಥಿತಿಯ ಹೂವುಗಳು. ಚಿಕ್ಕ, ಉದ್ದ, ಪೊರೆಯಂತೆ ಕಾಣುವ, ತ್ರಿಕೋಣಾಕಾರದ, ಕೂಡು ಅಂಚು ರೀತಿಯಲ್ಲಿ ಜೋಡಿಸಿರುವ 4–5 ಪುಷ್ಪಪಾತ್ರಪತ್ರಕಗಳನ್ನು ಹೊಂದಿದ ಪುಷ್ಪಪಾತ್ರೆ. ಚಿಕ್ಕದಾದ, ಮೊಂಡಾಗಿರುವ ದಳಗಳುಳ್ಳ, ಕೊಳವೆಯಾಕಾರದ ದಳವೃತ್ತ. ಹೊರಗಡೆಗೆ ಎದ್ದು ಕಾಣುವ, ಬಹು ಸಂಖ್ಯೆಯಲ್ಲಿರುವ ಕೇಸರಗಳು. ಉಚ್ಚಸ್ಥಾನದ ಅಂಡಕೋಶದಲ್ಲಿರುವ ಒಂದು ಕೋಣೆಯಲ್ಲಿ ಅನೇಕ ಅಂಡಕಗಳು, ಅನುಕ್ರಮವಾಗಿ ಅಂಚು ಅಂಡಕಾಧಾರಕ್ಕೆ ಅಂಟಿಕೊಂಡಿರುವ ಉದ್ದವಾದ ಶಲಾಕೆಯುಳ್ಳ ಚಿಕ್ಕ ಸರಳ, ಶಲಾಕಾಗ್ರ ಹೊಂದಿದ ಜಾಯಾಂಗ. ಹೆಚ್ಚು ಕಡಮೆ ಉರುಳೆಯಾಕಾರದ, ಉಬ್ಬಿಕೊಂಡಿರುವ, ತುದಿಯಲ್ಲಿ ಸ್ವಲ್ಪ ಬಗ್ಗಿರುವ ಎದ್ದು ಕಾಣುವಂತಹ ನರಗಳನ್ನು ಹೊಂದಿದ, ಹೊಳೆಯುವ ಕಂದು ವರ್ಣದ ಬೀಜಕೋಶಕಾಯಿ ಮಾದರಿ ಫಲ.

ಉಪಯೋಗಗಳು : ಮನೋಲ್ಲಾಸಕರ, ಮೃದುವಾದ ವಯೋಲೆಟ್ ತೈಲದಂತೆ ಸುವಾಸನೆ ಬೀರುವ ತೈಲವನ್ನು ಈ ಸಸ್ಯದ ಹೂವುಗಳಿಂದ ತೆಗೆಯುತ್ತಾರೆ.

ಹೂವುಗಳನ್ನು ಪೆಟ್ರೋಲಿಯಂವ್, ಈಥರ್, ಕೊಬ್ಬು ಪದಾರ್ಥ ಮುಂತಾದ ಲೀನಕಾರಿಗಳಿಂದ ಸಂಸ್ಕರಿಸಿ ಸುಗಂಧತೈಲವನ್ನು ತೆಗೆಯಬಹುದು. ಬಾಷ್ಪೀಕರಣ ಪದ್ಧತಿಯಿಂದ ಎಣ್ಣೆಯನ್ನು ತೆಗೆದರೆ ತೈಲವು ಸುವಾಸನೆಯನ್ನು ಕಳೆದುಕೊಳ್ಳುವ ಕಾರಣ ಈ ಪದ್ಧತಿಯು ಬಳಕೆಯಲ್ಲಿಲ್ಲ. ಮೊದಲು ಶೇಖರಿಸಿದ ಆಯ್ದ ಹೂವುಗಳು ಶ್ರೇಷ್ಠವಾಗಿದ್ದು ಹೆಚ್ಚು ತೈಲ ಇಳುವರಿಯನ್ನು ಕೊಡುತ್ತವೆ. ತೈಲದ ಸುವಾಸನೆಯ ವಿಶೇಷ



ಚಿತ್ರ 17: ಜಾಲಿ


ಗುಣವು ಕ್ರಿಸೋಲ್, ಈಥೈಲ್, ಫಿನಾಲ್ ಮತ್ತು ಕಾಮೆಲಿನ್ ಪದಾರ್ಥಗಳಿಂದ ಬಂದಿರುತ್ತವೆ. ವಯೊಲೆಟ್ ತೈಲದಂತೆ ಸುವಾಸನೆ ಇರುವುದರಿಂದ ಈ ಸುಗಂಧ ತೈಲವನ್ನು ಸುಗಂಧ ಕೇಶಾಂಜನಗಳಲ್ಲಿ, ಉಡುಪುಗಳ ಮಧ್ಯದಲ್ಲಿ ಇಡಲು ಬಳಸುವ ಸಣ್ಣ ಸುಗಂಧ ಚೀಲಗಳ ತಯಾರಿಕೆಯಲ್ಲಿ, ಅಲಂಕಾರಕ್ಕೆ ಬಳಸುವ ಪೌಡರುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಈ ಮರವನ್ನು ಉದ್ಯಾನವನಗಳಲ್ಲಿ ಬೇಲಿ ಗಿಡವಾಗಿ ಬೆಳೆಸುತ್ತಾರೆ. ಪೂಜೆ ಇತ್ಯಾದಿ ಧರ್ಮಕಾರ್ಯಗಳಲ್ಲಿ ಭಾರತೀಯರು ಈ ಹೂವುಗಳನ್ನು ಬಳಸುತ್ತಾರೆ.

19. ಜೆರೇನಿಯಮ್

(ಪೆಲರ್‌ಗೋನಿಯಮ್; Pelargonium ಪ್ರಭೇದಗಳು)

ವ್ಯಾಪನೆ : ಪೆಲರ್‌ಗೋನಿಯಮ್ ಜಾತಿಯ ಅನೇಕ ಪ್ರಭೇದಗಳು ಮೂಲತಃ ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಕಂಡುಬರುತ್ತವೆ. ದಕ್ಷಿಣ ಭಾರತದ ನೀಲಗಿರಿ, ಅಣ್ಣಾಮಲೈ, ಸಹ್ಯಾದ್ರಿ ಬೆಟ್ಟಗಳಲ್ಲಿ ತಕ್ಕಮಟ್ಟಿಗೆ ಕಾಣಬಹುದು.



ಚಿತ್ರ 18 : ಜೆರೇನಿಯಮ್

ವರ್ಣನೆ : ಶಾಕ ಅಥವಾ ಪುಟ್ಟ ಪೊದರು ಪಾಮೇಟ್ ರೀತಿಯ ನರವಿನ್ಯಾಸವುಳ್ಳ, ಸರಳ, ಅಭಿಮುಖ ಜೋಡಣೆ ಅಥವಾ ಪರ್ಯಾಯ ಜೋಡಣೆಯ, ವೃಂತ ಪರ್ಣವಿರುವ ಎಲೆಗಳು. ಸಾಮಾನ್ಯವಾಗಿ ಎಲೆಯ ಕಂಕುಳಲ್ಲಿ ಅಂಬೆಲ್ ಪುಷ್ಪಮಂಜರಿ. ಅಸಮರೀತಿಯ, ದ್ವಿಲಿಂಗ ಅಧೋಶಲಾಕೆ ಸ್ಥಿತಿಯ ಹೂವುಗಳು. ಹೂವಿನ ಹಿಂಭಾಗದಲ್ಲಿ ಜೋಡಣೆಯಾಗಿರುವ ಹೆಂಚು ಹೊದಿಕೆ ರೀತಿ ಜೋಡಣೆಯುಳ್ಳ 5 ಪುಷ್ಪಪಾತ್ರೆ ಪತ್ರಕಗಳು. ಒಂದು ಪುಷ್ಪಪಾತ್ರೆ ಪತ್ರಕವು ಮಕರಂದ ಕೊಳವೆಯನ್ನು

ಹೊಂದಿದ್ದು, ಇದು ಪುಷ್ಪವೃಂತಕ್ಕೆ ಅಂಟಿಕೊಂಡಿರುತ್ತದೆ. ಹಂಚು ಹೊದಿಕೆ ರೀತಿಯ ಜೋಡಣೆಯ 5 ಅಥವಾ ಕಡವೆ ಪುಷ್ಪದಳಗಳು. ಪುಷ್ಪಪೀಠದ ಸುತ್ತಲೂ ಪ್ರತಿಯೊಂದು ಪುಷ್ಪದಳದ ಪರ್ಯಾಯ ಸ್ಥಾನದಲ್ಲಿ ಗ್ರಂಥಿಯಿದ್ದು ಮಧ್ಯಭಾಗದಲ್ಲಿ ಎದ್ದುಕಾಣುವ ಪುಷ್ಪಪೀಠ. ಪ್ರವರ್ತನ ಮಾದರಿ ಪರಾಗಕೋಶಗಳನ್ನು ಹೊಂದಿದ, ದಾರದ ರೀತಿಯ ಕೇಸರದಂಡವುಳ್ಳ 5 ಅಥವಾ 10 ಕೇಸರಗಳು. ಉಚ್ಚಸ್ಥಾನದ, 3–5 ಅಂಡಕೋಶಗಳು, 3–5 ಕೋಣೆಗಳಿದ್ದು ಪ್ರತಿಯೊಂದು ಕೋಣೆಯಲ್ಲಿ 1–2 ಅಂಡಕಗಳು. ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಅಂಡಾಶಯ. ಉದ್ದವಾಗಿರುವ, ಕೊಕ್ಕಿಯಂತಹ, ಟೋಪಿಯಾಕಾರದ ಶಲಾಕಾಗ್ರವಿರುವ ಶಲಾಕೆ. ಸಂಪುಟಕ ಮಾದರಿ ಫಲ.


ಉಪಯೋಗಗಳು : ಜಿರೇನಿಯಂ ಸುಗಂಧ ತೈಲವನ್ನು ಮುಖ್ಯವಾಗಿ ಪೆಲರ್‌ಗೋನಿಯಮ್ ಗ್ರ್ಯಾವಿಯೋಲೆನ್ಸ್, ಪೆ. ಒಡೊರ್‍ಯಾಟಿಸಿಮಮ್, ಪೆ. ಕ್ಯಾಪಿಟೇಟಮ್ ಮತ್ತು ಪೆ. ರ್‍ಯಾಡುಲಾ ಪ್ರಭೇದಗಳಿಂದ ತೆಗೆಯುವರು. ಈ ಪ್ರಭೇದಗಳನ್ನು ಸಾಮಾನ್ಯವಾಗಿ ಕಟಿಂಗ್(ಕಾಂಡದ ತುಂಡು) ಗಳ ಮೂಲಕ ಸಂತಾನವೃದ್ಧಿ ಮಾಡುತ್ತಾರೆ. ಜುಲೈನಿಂದ ಆಗಸ್ಟ್ ತಿಂಗಳುಗಳ ಮಧ್ಯಕಾಲದಲ್ಲಿ ಇವುಗಳನ್ನು ನೆಟ್ಟು ಮುಂದಿನ ಫೆಬ್ರವರಿ-ಮಾರ್ಚ್ ತಿಂಗಳುಗಳಲ್ಲಿ ಎಲೆಗಳು ಹಳದಿ ವರ್ಣಕ್ಕೆ ತಿರುಗಿ ಗುಲಾಬಿ ರೀತಿಯ ಪರಿಮಳವನ್ನು ಬೀರುವಾಗ ಮೊದಲನೆಯ ಕಟಾವು ಮಾಡುತ್ತಾರೆ. ಕಟಾವು ಮಾಡಿದ ಎಲೆಗಳಿರುವ ರೆಂಬೆಗಳನ್ನು ಶೀಘ್ರವಾಗಿ ಬಾಷ್ಪೀಕರಿಸಿ ಜಿರೇನಿಯಮ್ ಸುಗಂಧ ತೈಲವನ್ನು ತೆಗೆಯುತ್ತಾರೆ. ಜೂನ್–ಜುಲೈ ಮತ್ತು ಅಕ್ಟೋಬರ್, ನವೆಂಬರ್ ತಿಂಗಳಲ್ಲಿಯೂ ಸಹ ಮತ್ತೆರಡು ಕಟಾವುಗಳನ್ನೂ ಮಾಡಿ ತೈಲವನ್ನು ತೆಗೆಯಬಹುದು. ಒಂದು ಬಾರಿ ನೆಟ್ಟರೆ 3–5 ವರ್ಷ ಇರುತ್ತವೆ. ಸರಿಯಾಗಿ ಸಾಗುವಳಿ ಮಾಡಿದ ಗಿಡಗಳಿಂದ 1 ಹೆಕ್ಟೇರಿಗೆ 17–22 ಕಿಲೋಗ್ರ್ಯಾಮ್ ಜಿರೇನಿಯಮ್ ಸುಗಂಧ ತೈಲವನ್ನು ತೆಗೆಯಬಹುದು. ಈ ಸುಗಂಧತೈಲವು ವರ್ಣರಹಿತ ಅಥವಾ ಹಳದಿಮಿಶ್ರಿತ ಹಸುರು ಬಣ್ಣ, ತೀಕ್ಷ್ಣವಾದ ಗುಲಾಬಿರೀತಿಯ ಪರಿಮಳವನ್ನು ಹೊಂದಿರುತ್ತದೆ. ಈ ತೈಲವನ್ನು ಶ್ರೇಷ್ಠ ದರ್ಜೆಯ ಸುಗಂಧ ತೈಲಗಳ ತಯಾರಿಕೆಯಲ್ಲಿ ಮತ್ತು ಸುವಾಸನೆಯ ಸಾಬೂನು ಮತ್ತು ಅಲಂಕಾರ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದನ್ನು ಹೂದೋಟ, ಉದ್ಯಾನವನಗಳಲ್ಲಿ ಬೆಳೆಸುತ್ತಾರೆ.

20. ಜೀರಿಗೆ

(ಕುಮಿನಮ್ ಸೈಮಿನಮ್; Cuminum cyminum Linn.)

ವ್ಯಾಪನೆ : ಈ ಸಸ್ಯದ ತವರು ಅರೇಬಿಯಾ. ಈಜಿಪ್ಟ್, ಸಿರಿಯಾ, ಸ್ಪೇನ್, ಭಾರತದ ಪಂಜಾಬ್, ರಾಜಾಸ್ಥಾನ, ದಕ್ಷಿಣ ಹಾಗೂ ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಈ ಸಸ್ಯವನ್ನು ಬೆಳೆಯುವರು.

ವರ್ಣನೆ : 30-90 ಸೆಂಟಿಮೀಟರ್ ಎತ್ತರದ ಹೊಳಪುಳ್ಳ ಏಕಸಾಂವತ್ಸರಿಕ ಶಾಕಗಳು. ಕವಲೊಡೆಯದ ರೆಂಬೆಗಳುಳ್ಳ ಕಾಂಡ. ಚಿಕ್ಕ ತೊಟ್ಟುಗಳಿದ್ದು ಕೆಳಭಾಗದಲ್ಲಿ ಬೇಗನೆ ಉದುರುವ, ಕಡಮೆ ಅಗಲದ, ಅನೇಕ ತೆಳು ವಿಭಜಿತ ಗರಿರೂಪದ, ತೊಟ್ಟಿನ ಕೆಳಗಡೆಗೆ ಪೊರೆ ಹೊಂದಿರುವ ಎಲೆಗಳು. ಸಂಯುಕ್ತ ಛತ್ರಿ ಗೊಂಚಲು ಮಾದರಿ ಪುಷ್ಪಮಂಜರಿ. ಪುಷ್ಪಪತ್ರಕವಿರುವ ಪುಷ್ಪವೃಂತಪತ್ರಕಗಳಿಲ್ಲದ 5 ಸುತ್ತುಗಳಿರುವ ಉಪರಿಶಲಾಕೆಯ, ದ್ವಿಲಿಂಗ, ಅಪರೂಪವಾಗಿ ಏಕಲಿಂಗ, ಹೊರಭಾಗದಲ್ಲಿ ಸಮದ್ವಿಪಾರ್ಶ್ವರೂಪತೆ ಹಾಗೂ ಮಧ್ಯಭಾಗದಲ್ಲಿ ತ್ರಿಜ್ಯಸಮಪಾರ್ಶ್ವರೂಪಿ, ತಿಳಿಗುಲಾಬಿ ವರ್ಣದ ಹೂವುಗಳು. ಚಿಕ್ಕ 5 ದಳಗಳಿರುವ, ಅಸಮಹೀತಿಯ,



ಚಿತ್ರ 19 : ಜೀರಿಗೆ

ದಬ್ಬಳಾಕಾರವಿರುವ ಪುಷ್ಪಪಾತ್ರೆ. ದೀರ್ಘವೃತ್ತಾಕಾರ ಅಥವಾ ದೀರ್ಘಅಂಡಾಕಾರದ, ಸಾಮಾನ್ಯವಾಗಿ ಅಸಮವಾಗಿರುವ 5 ಬಿಡಿ ಪುಷ್ಪದಳಗಳು. ಬಿಡಿಯಾಗಿರುವ 5 ಕೇಸರಗಳು. ಕೆಳಸ್ಥಾನದ, ಎರಡು ಸಂಯುಕ್ತ ಅಂಡಕೋಶಗಳುಳ್ಳ, ಎರಡು ಕೋಣೆಯ ಪ್ರತಿ ಕೋಣೆಯಲ್ಲೂ ಒಂದೊಂದು ಅಂಡಕವಿದ್ದು ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಎರಡು ಶಲಾಕೆಗಳಿರುವ, ಟೋಪಿಯಾಕಾರದ ಶಲಾಕಾಗ್ರವುಳ್ಳ ಜಾಯಾಂಗ, ಕೊಳವೆಯಾಕಾರದ ಕಿರಿದಾದ ತುದಿಯುಳ್ಳ, ಎರಡು ಭಾಗಗಳಾಗಿರುವ ಕ್ರಿಮೋಕಾರ್ಪ್ ಫಲ.

ಉಪಯೋಗಗಳು : ಈ ಸಸ್ಯದ ಒಣ ಫಲಗಳು ತುಂಬ ಸುವಾಸನೆ ಮತ್ತು ಘಾಟುಳ್ಳವಾಗಿರುತ್ತವೆ. ಸಾಂಬಾರು, ಪಲ್ಯ, ಕೇಕ್, ಬ್ರೆಡ್, ಉಪ್ಪಿನಕಾಯಿ, ಚೀಸ್ ಮೊದಲಾದವುಗಳನ್ನು ತಯಾರಿಸಲು ಈ ಕಾಳುಗಳನ್ನು ಉಪಯೋಗಿಸುವರು. ಇದರ ಒಣ ಕಾಳುಗಳಿಂದ ತಯಾರಿಸಿದ ಸುವಾಸಿತ ಎಣ್ಣೆಯನ್ನು ಅತ್ತರ್ ಮತ್ತು ಕೆಲವು ಪೇಯಗಳನ್ನು ಸುವಾಸಿತಗೊಳಿಸಲು ಉಪಯೋಗಿಸುವರು. ಒಣಗಿದ ಕಾಳುಗಳು ಅನೇಕ ಔಷಧಿಯುಕ್ತ ಉಪಯೋಗಗಳನ್ನು ಹೊಂದಿರುತ್ತವೆ. 10 ರಿಂದ 30 ಕಾಳುಗಳನ್ನು ನಿಂಬೆ ಹಣ್ಣಿನ ರಸದೊಂದಿಗೆ ಬೆರೆಸಿ ಗರ್ಭಿಣಿ ಸ್ತ್ರೀಯರಿಗೆ ಮತ್ತು ಇತರರಿಗೆ ತಲೆ ಸುತ್ತುವಿಕೆ ಹಾಗೂ ವಾಂತಿಯನ್ನು ಕಡಮೆ ಮಾಡಲು ಕೊಡುತ್ತಾರೆ. ಇದರಿಂದ ತಯಾರಿಸಿದ ಕಷಾಯವನ್ನು ಹೊಟ್ಟೆ ಉಬ್ಬರ ಕಡಮೆ ಮಾಡಲು, ಹಸಿವೆಯನ್ನುಂಟು ಮಾಡಲು, ಸ್ನಾಯುವಿನ ಸೆಳೆತ ಕಡಮೆ ಮಾಡಲು, ಅಜೀರ್ಣ ಹೋಗಲಾಡಿಸಲು, ಭೇದಿ ಕಡಮೆ ಮಾಡಲು ಕೊಡುತ್ತಾರೆ. ಜೀರಿಗೆಯನ್ನು ಪುಡಿ ಮಾಡಿ ಉಪ್ಪು ಮತ್ತು ಜೇನು ತುಪ್ಪದಲ್ಲಿ ಬೆರೆಸಿ ತಯಾರಿಸಿದ ಮುಲಾಮನ್ನು ಚೇಳು ಕಡಿದ ಭಾಗಕ್ಕೆ ಲೇಪಿಸುತ್ತಾರೆ.

21. ತುಂಗೆ ಹುಲ್ಲು

[ಸೈಪೆರಸ್ ರೋಟುಂಡಸ್; Cyperus rotundus Linn. (ನಟ್‌ಗ್ರಾಸ್)]

ವ್ಯಾಪನೆ : ಉಷ್ಣವಲಯದ ಅನೇಕ ದೇಶಗಳಲ್ಲಿ ಈ ಸಸ್ಯವು ಭಯಂಕರ ಕಳೆಯಾಗಿ ಬೆಳೆಯುತ್ತದೆ. ಭಾರತದ ಎಲ್ಲ ಪ್ರದೇಶಗಳಲ್ಲಿ ಹಾಗೂ ಶ್ರೀಲಂಕಾದಲ್ಲಿ ಕೂಡ ಬೆಳೆಯುತ್ತದೆ.

ವರ್ಣನೆ: ಬಹುಸಾಂವತ್ಸರಿಕ. ಅಂಡಾಕಾರ, ಗಡುಸು, ಕಪ್ಪು, ಸುವಾಸಿತ, 1-3 ಸೆಂಟಿಮೀಟರ್ ವ್ಯಾಸವುಳ್ಳ ಗಡ್ಡೆಯು 10-30 ಸೆಂಟಿಮೀಟರ್ ಉದ್ದವಿದ್ದು, ತೆಳ್ಳಗೆ ಇರುವ ಅಂತರಕಾಂಡ. ತೊಟ್ಟಿಲ್ಲದ ಬುಡದಲ್ಲಿ ಕವಚವಿರುವ, ಕಿರಿದಾದ, ಪರ್ಯಾಯ ಜೋಡಣೆಯ, ಹುಲ್ಲಿನ ಗರಿಯಂತಿರುವ, ಚೂಪಾದ ತುದಿಯ, ಕಿರುಎಲೆರಹಿತ, 3 ರಂತೆ ಜೋಡಣೆಯಾದ ಎಲೆಗಳು. ಸರಳ ಅಥವಾ ಸಂಯುಕ್ತ ಪ್ರತಿ ಗೊಂಚಲಿನಲ್ಲಿ 3–10 ಕೆಂಪುಮಿಶ್ರಿತ ಕಂದು ಕಿರುಪುಷ್ಪಮಂಜರಿಗಳನ್ನು ಹೊಂದಿರುವ ಪುಷ್ಪಮಂಜರಿ. ಒಣ, ತೆಳು, ಪೊರೆಯಂತಿರುವ, 3 ಪುಷ್ಪಪಾತ್ರಪತ್ರಕಗಳು. ಹೆಚ್ಚು ಕಡಮೆ ಉದ್ದವಾಗಿರುವ ಕಂದುಮಿಶ್ರಿತಕೆಂಪುವರ್ಣದ 10-50 ಹೂವುಗಳನ್ನು ಹೊಂದಿರುವ, ಪೊರೆಯಂತಹ ರೆಕ್ಕೆಗಳಿರುವ ತೊಟ್ಟುಳ್ಳ ಕಿರುಪುಷ್ಪಮಂಜರಿ. ದೀರ್ಘವೃತ್ತಾಕಾರದ, ಚೂಪಾದ ತುದಿಯಿರುವ, ಪಾರ್ಶ್ವಬದಿಯಲ್ಲಿ 3–7 ನರಗಳನ್ನುಳ್ಳ ಅಂಚು ಮತ್ತು ತುದಿ ತೆಳುವಾಗಿದ್ದು ಪೊರೆಯಂತಿರುವ ಸುಂಕಗಳು. ಪುಷ್ಪಪಾತ್ರೆ ಮತ್ತು ದಳವೃತ್ತವಿಲ್ಲದ, ದ್ವಿಲಿಂಗ ಅಧೋಶಲಾಕೆ ಹೂವುಗಳು. 3 ಕೇಸರಗಳು, ಉಚ್ಚಸ್ಥಾನದ ಮೂರು ಸಂಯುಕ್ತ ಅಂಡಕೋಶಗಳುಳ್ಳ ಒಂದು ಕೋಣೆಯ, ಒಂದು ನೇರವಾದ ಪ್ರಕಾಶೋನ್ಮುಖ ಅಂಡಕವು ಕೆಳ ಅಂಡಕಾಧಾರಕ್ಕೆ ಅಂಟಿಕೊಂಡಿದ್ದು, ಗರಿರೂಪದ 3 ಶಲಾಕಾಗ್ರವಿರುವ ಜಾಯಾಂಗ. ಕರಟಕಾಯಿ ಮಾದರಿ ಫಲ.

ಉಪಯೋಗಗಳು : ಈ ಸಸ್ಯದ ಗಡ್ಡೆಯು (ನಟ್) ತುಂಬಾ ಸುವಾಸನೆ ಮತ್ತು ಖಾರವಾದ ರುಚಿ ಹೊಂದಿರುತ್ತದೆ. ಗಡ್ಡೆಗಳನ್ನು ಬೆಂಕಿಯಲ್ಲಿ ಚೆನ್ನಾಗಿ ಸುಟ್ಟು ಜಜ್ಜಿ ಕೆಲವು ಔಷಧಿಗಳನ್ನು ತಯಾರಿಸಲು ಹಾಗೂ ಬಟ್ಟೆಗಳು, ಕೇಶ ತೈಲಗಳು ಮತ್ತು ನೂಲನ್ನು ಸುವಾಸಿತಗೊಳಿಸಲು ಉಪಯೋಗಿಸುವರು. ಈ ಗಡ್ಡೆಯಿಂದ ತಯಾರಿಸಿದ ಪುಡಿಯನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸಿ ಊದುಕಡ್ಡಿ ತಯಾರಿಸುವುದೂ ಉಂಟು.



ಚಿತ್ರ 20: ತುಂಗೆ ಹುಲ್ಲು

ಈ ಸಸ್ಯದ ಗಡ್ಡೆಗಳು ಅನೇಕ ಔಷಧಿಯುಕ್ತ ಉಪಯೋಗಗಳನ್ನೂ ಸಹ ಹೊಂದಿವೆ. ಈ ಗಡ್ಡೆಗಳು ಸ್ವೇದಕಾರಿ (ಬೆವರನ್ನುಂಟು ಮಾಡುವುದು), ಮೂತ್ರವರ್ಧಕ, ಗಾಯದಿಂದ ಸ್ರವಿಸುವ ಮತ್ತು ರಕ್ತವನ್ನು ತಡೆಯುವ ಹಾಗೂ ಕರುಳಿನಲ್ಲಿರುವ ಜಂತುಗಳ ನಾಶಕಾರಿ, ಗಾಯಗಳನ್ನು ವಾಸಿ ಮಾಡುವ ಮತ್ತು ಜಠರರೋಗ ನಿವಾರಕ ಇವೇ ಮೊದಲಾದ ಗುಣಗಳನ್ನು ಹೊಂದಿವೆ. ಗಡ್ಡೆಯನ್ನು ಕೆತ್ತಿ ಸುಮಾರು 20 ಅಣುವಿನಷ್ಟು ಕಷಾಯವನ್ನು ಆಮಶಂಕೆ, ಭೇದಿ, ವಾಂತಿ, ಕಾಲರಾ ಮತ್ತು ಜ್ವರ ಮೊದಲಾದ ರೋಗಗಳ ಉಪಶಮನಕ್ಕೆ ಕೊಡುತ್ತಾರೆ. ಬೇರುಗಳನ್ನು ಮೂತ್ರಾಶಯದ ರೋಗಿಗಳಿಗೆ, ಕುಷ್ಟರೋಗ, ನೀರಡಿಸುವಿಕೆ ಮತ್ತು ರಕ್ತದೋಷಗಳಿಗೆ ಸಹ ಉಪಯೋಗಿಸುವರು ಈ ಗಡ್ಡೆಯಿಂದ ತಯಾರಿಸಿದ ಮುಲಾಮನ್ನು ಗಾಯ ಮತ್ತು ಹುಣ್ಣುಗಳನ್ನು ವಾಸಿಮಾಡಲು ಲೇಪಿಸುತ್ತಾರೆ. ಜಜ್ಜಿದ ಬೇರನ್ನು

ಹಲ್ಲು ನೋವನ್ನು ಕಡಮೆಮಾಡಲು ಲೇಪಿಸುತ್ತಾರೆ. ಹಾವು ಕಡಿದಾಗ ಸಹ ಈ ಬೇರುಗಳನ್ನು ಉಪಯೋಗಿಸುವರು.

22. ಥೈಮುಸ್ ಸರಫಿಲ್ಲಮ್ (Thymus serphyllum Linn.)

ವ್ಯಾಪನೆ : ಈ ಸಸ್ಯದ ತವರು ಮೆಡಿಟರೇನಿಯನ್ ಪ್ರದೇಶಗಳು. ಇದನ್ನು ಜಗತ್ತಿನ ಅನೇಕ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದು ಕೆಲವೆಡೆ ಯಥೇಚ್ಛವಾಗಿ, ತಾನೇ ತಾನಾಗಿ ಬೆಳೆಯುತ್ತದೆ.



ಚಿತ್ರ 21 : ಥೈಮುಸ್ ಸರಫಿಲ್ಲಮ್

ವರ್ಣನೆ : ಸುವಾಸನೆಯ, ರೋಮಗಳನ್ನುಳ್ಳ ಶಾಕ. ತೊಟ್ಟುಗಳಿಲ್ಲದ ದೀರ್ಘ ವೃತ್ತಾಕಾರ ಅಥವಾ ಅಂಡಾಕಾರದ, ಮೊಂಡಾದ ತುದಿಯಿರುವ, ಗ್ರಂಥಿ ಚುಕ್ಕೆಗಳಿರುವ, ಅಭಿಮುಖಿ ಜೋಡಣೆ ಎಲೆಗಳು. ಮಧ್ಯಾರಂಭಿ ಪುಷ್ಪಮಂಜರಿ. ಚಿಕ್ಕ ಪುಷ್ಪಪತ್ರಕಗಳಿರುವ, ಪೂರ್ಣ ದ್ವಿಲಿಂಗ, ಸಮದ್ವಿಪಾರ್ಶ್ವ, ಅಧೋಶಲಾಕೆ ಸ್ಥಿತಿಯ, ನೇರಳೆ ಮಿಶ್ರಿತ ಗುಲಾಬಿ ಹೂವುಗಳು. 5 ಪುಷ್ಪಪಾತ್ರೆಪತ್ರಕಗಳುಳ್ಳ ಸಂಯುಕ್ತ, ಎರಡು

ತುಟಿಗಳುಳ್ಳ, 10-13 ನರಗಳಿರುವ ಪುಷ್ಪಪಾತ್ರೆ. ಕಂಡೂ ಕಾಣದಂತಹ ಎರಡು ತುಟಿಗಳು. ಮೇಲಿನ ತುಟಿ ನೇರ, ಚಪ್ಪಟೆ, ಕೆಳಗಿನ ತುಟಿ ದಳವೃತ್ತ 3 ಭಾಗವಾಗಿದೆ. 4 ದ್ವಿದೀರ್ಘ ಕೇಸರಗಳು. ಎರಡು ಸಂಯುಕ್ತ ಅಂಡಕೋಶಗಳು. ಉಚ್ಚಸ್ಥಾನದ ಅಂಡಾಶಯದಲ್ಲಿ ಮೊದಲು ಎರಡು ಕೋಣೆಗಳಿದ್ದು ಆ ಬಳಿಕ 4 ಕೋಣೆಗಳಾಗಿ ವಿಭಜಿಸಿ ಪ್ರತಿ ಕೋಣೆಯಲ್ಲೂ ಒಂದೊಂದು ಅಂಡವು ಅಕ್ಷಕ ಅಂಡಕಾಧಾರಕ್ಕೆ ಅಂಟಿ ಕೊಂಡಿರುತ್ತದೆ. ಕೆಳಭಾಗದ ಶಲಾಕೆಯುಳ್ಳ ಜಾಯಾಂಗ ಕರಟಕಾಯಿ ಮಾದರಿಯ ಫಲ.

ಉಪಯೋಗಗಳು : ಈ ಸಸ್ಯದಿಂದ ಥೈಮಾಲ್ ಸುಗಂಧ ತೈಲವನ್ನು ತೆಗೆಯು ತ್ತಾರೆ. ಈ ತೈಲವನ್ನು ಅತ್ತರ, ಕೇಶತೈಲ ತಯಾರಿಕೆಗಳಲ್ಲಿ ಉಪಯೋಗಿಸುತ್ತಾರೆ. ಈ ಸಸ್ಯಕ್ಕೆ ಒಂದು ವಿಶಿಷ್ಟ ರೀತಿಯ ತೀಕ್ಷ್ಣ ಮತ್ತು ಒಳ್ಳೆಯ ರುಚಿ ಇರುತ್ತದೆ. ಆದ್ದರಿಂದ ಸಸ್ಯದ ತಾಜಾ ಅಥವಾ ಒಣಗಿದ ಹಸುರು ಭಾಗಗಳನ್ನು ಸಾಂಬಾರ್, ಮಾಂಸದ ಸಾರು, ಪಲ್ಯ, ಸಾಸ್ ಮೊದಲಾದವುಗಳನ್ನು ರುಚಿಗೊಳಿಸಲು ಉಪ ಯೋಗಿಸುತ್ತಾರೆ.

ಥೈಮೊಲ್ ಎಣ್ಣೆಯನ್ನು ಅನೇಕ ವೈದ್ಯಕೀಯ ಚಿಕಿತ್ಸೆಗಾಗಿ ಉಪಯೋಗಿ ಸುವರು. ಈ ತೈಲವು ಪೂತಿನಾಶಕ ಗುಣವುಳ್ಳದ್ದಾಗಿರುವುದರಿಂದ ಬಾಯಿ ಮುಕ್ಕಳಿಸಲು ಉಪಯೋಗಿಸುವರು. ಕೆಲವು ಔಷಧಿಗಳಲ್ಲಿ, ದಂತಮಾರ್ಜಕಗಳ ತಯಾರಿಕೆಯಲ್ಲಿ ಬಳಸುವರು. ಅಣಬೆನಾಶಕವಾಗಿ ಹಾಗೂ ಕೊಕ್ಕೆ ಹುಳುಗಳ ನಿವಾರಣೆ ಗಾಗಿ ಇದನ್ನು ಉಪಯೋಗಿಸುವರು.

23. ದವನ

(ಆರ್ಟಿಮಿಸಿಯ : Artemisia ಪ್ರಭೇದಗಳು)

ವ್ಯಾಪನೆ : ದಕ್ಷಿಣ ಭಾರತದಲ್ಲಿ ದವನವನ್ನು ತೋಟಗಳಲ್ಲಿ ಬೆಳೆಯುತ್ತಾರೆ. ಕರ್ನಾಟಕ ಹಾಗೂ ಪೂನಾ ಸಮೀಪದಲ್ಲಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರ ಪ್ರದೇಶಗಳಲ್ಲಿಯೂ ಇದನ್ನು ಬೆಳೆಯುವ ಪ್ರಯತ್ನ ಮಾಡಲಾಗುತ್ತಿದೆ.


ವರ್ಣನೆ : ಈ ಸಸ್ಯವು ನೆಟ್ಟಗಿರುವ 15-30 ಸೆಂಟಿಮೀಟರ್ ಎತ್ತರ ಬೆಳೆಯುವ ಬಹಳ ಸುವಾಸನೆಯುಳ್ಳ ಶಾಕ. ಕೆಳಭಾಗ ಮತ್ತು ಮಧ್ಯಭಾಗದಲ್ಲಿ ದಪ್ಪಗಿರುವ, ವರ್ತುಲಾಕಾರ ಅಥವಾ ಎರಡು ವಿಭಜನೆಯುಳ್ಳ, ಗರಿ ರೀತಿಯಲ್ಲಿ ಉದ್ದವಾಗಿ ಅಗಲವಾಗಿರುವ ಎಲೆಗಳನ್ನು ಹೊಂದಿರುವ ಕಾಂಡ. ಮೇಲ್ಭಾಗದಲ್ಲಿ ಕ್ರಮವಾಗಿ ಉದ್ದವಾಗಿದ್ದು ಹೆಚ್ಚು ವಿಭಜನೆಯಿಲ್ಲದೆ ಚಿಕ್ಕದಾಗಿರುವ ಎಲೆಗಳು.

ತಿಳಿಹಳದಿ ವರ್ಣದ ಹೂವುಗಳನ್ನು ಹೊಂದಿದ ಗೋಳಾಕಾರದ ಚೆಂಡುರೀತಿಯ ಪುಷ್ಪಮಂಜರಿ. ಪುಷ್ಪಮಂಜರಿಯ ಹೊರಭಾಗದಲ್ಲಿ ಗೋಳಾಕಾರದ ಸಮದ್ವಿ ಪಾರ್ಶ್ವರೂಪಿ ಹೆಣ್ಣು ಹೂವುಗಳು, ಮಧ್ಯಭಾಗದಲ್ಲಿ ತ್ರಿಜ್ಯ ಸಮಪಾರ್ಶ್ವ ಉಚ್ಚಶಲಾಕೆ ರೀತಿಯ ದ್ವಿಲಿಂಗ ಹೂವುಗಳು. ತೆಳುವಾದ, ಕೊಳವೆಯಾಕಾರದ, 2–3 ಪುಷ್ಪದಳಗಳಿರುವ ದಳವೃತ್ತವನ್ನು ಹೊಂದಿದ ಹೆಣ್ಣು ಹೂವುಗಳು. ಮಧ್ಯ ಭಾಗದಲ್ಲಿ ಹೆಣ್ಣು ಹೂವುಗಳಿಗಿಂತ ಚಿಕ್ಕದಾಗಿರುವ 5 ಪುಷ್ಪದಳಗಳಿದ್ದು ಕೊಳವೆ ಯಾಕಾರದ ದಳವೃತ್ತವನ್ನು ಹೊಂದಿದ ದ್ವಿಲಿಂಗ ಹೂವುಗಳು. ತಂಡು ಕೇಸರ ದಂಡಗಳಿಂದ ಕೂಡಿದ ಸಂಯುಕ್ತ ಪರಾಗ ಕೋಶವಿರುವ ಕೇಸರ ಮಂಡಲ. ಎರಡು ಸಂಯುಕ್ತ ಅಂಡಕೋಶಗಳಿರುವ ಒಂದು ಕೋಣೆಯ, ಕೆಳ ಅಂಡಕಾಧಾರಕ್ಕೆ ಅಂಟಿ ಕೊಂಡಿರುವ ಒಂದೇ ಒಂದು ಅಂಡಕೋಶಗಳಿರುವ ಒಂದು ಕೋಣೆಯ, ಕೆಳ ಅಂಡಕಾ ಧಾರಕ್ಕೆ ಅಂಟಿಕೊಂಡಿರುವ ಒಂದೇ ಒಂದು ಅಂಡಕವಿರುವ, ಕೆಳಸ್ಥಾನದ, ಎರಡು ಶಲಾಕಾಗ್ರಗಳಿಂದ ಕೂಡಿದ ದ್ವಿಲಿಂಗ ಹೂವುಗಳ ಶಲಾಕಾಗ್ರಗಳು ಚಿಕ್ಕದಾಗಿದ್ದು ತಲೆಯಾಕಾರದ ತುದಿಯನ್ನು ಹೊಂದಿರುವ ಚಾಯಾಂಗ. ತುಂಬಾ ಚಿಕ್ಕದಾದ ಪ್ಯಾಪಸ್ ಇಲ್ಲದಿರುವ ನಗ್ನಫಲ. ಈ ಜಾತಿಯಲ್ಲಿ ಸುಗಂಧಯುಕ್ತ ಮತ್ತು ಔಷಧಿ ಗುಣಗಳನ್ನು ಹೊಂದಿರುವ ಅನೇಕ ಪ್ರಭೇದಗಳಿವೆ.

ಉಪಯೋಗಗಳು : ದವನದ ತೈಲವನ್ನು ಮುಖ್ಯವಾಗಿ ಮಂಜಿಪತ್ರೆ (ಆರ್ಟಿಮೀಸಿಯ ಪ್ಯಾಲೆನ್ಸ್) ಸಸ್ಯದಿಂದ ತೆಗೆಯುತ್ತಾರೆ. ಒಂದು ಹೆಕ್ಟೇರಿನಲ್ಲಿ 1 ರಿಂದ 1.7 ಕಿಲೋಗ್ರಾಮ್ ತೈಲವನ್ನು ತೆಗೆಯಬಹುದು. ಕಂದುಬಣ್ಣದ ಜಿಗುಟಾದ ದವನದ ತೈಲವು ದೀರ್ಘಕಾಲ ಸುವಾಸನೆಯನ್ನು ಬೀರುತ್ತದೆ. ಈ ಸುಗಂಧತೈಲವು ತುಂಬಾ ಬೆಲೆಯುಳ್ಳದ್ದಾಗಿರುವುದರಿಂದ ಉತ್ತಮ ದರ್ಜೆಯ ಸೆಂಟುಗಳನ್ನು ಮಾಡಲು ಇದನ್ನು ಬಳಸುತ್ತಾರೆ.

ಕಾಡು ಮಂಜಿಪತ್ರೆ (ಆ. ವಲ್ಗಾರಿಸ್) ಸಸ್ಯದ ಸುವಾಸನೆಯುಕ್ತ ಎಲೆ ಮತ್ತು ಎಳೆಯ ಮೊಗ್ಗುಗಳನ್ನು ಮಸಾಲೆ ಪದಾರ್ಥವಾಗಿ ಉಪಯೋಗಿಸುವರು. ಕೆಲವು ಬೇಯಿಸಿದ ಮಾಂಸಾಹಾರಗಳನ್ನು ಸುವಾಸಿತಗೊಳಿಸಲು ಇದನ್ನು ಬಳಸುತ್ತಾರೆ.

ಕಾಡು ಮಂಜಿಪತ್ರೆಯ ಎಲೆ ಮತ್ತು ಹೂಗಳಿಂದ ತಯಾರಿಸಿದ ತೀಕ್ಷ್ಣವಾದ ಕಷಾಯವನ್ನು ಅಂತ್ರ ಕ್ರಿಮಿನಾಶಕವಾಗಿಯೂ ತಿಳಿಯಾದ ಕಷಾಯವನ್ನು ದಡಾರ ದಿಂದ ನರಳುವ ಮಕ್ಕಳಿಗೂ ಕುಡಿಸುತ್ತಾರೆ. ಎಲೆಯ ರಸವು ನಾಯಿಕೆಮ್ಮು ನಿವಾರಣೆಗೆ ತೀವ್ರ ಫಲಕಾರಿಯಾಗುತ್ತದೆ. ಎಲೆಗಳನ್ನು ಕಜ್ಜಿ, ತುರಿ, ಇಸುಬು, ಮುಂತಾದ ಚರ್ಮ ರೋಗಗಳ ನಿವಾರಣೆಗಾಗಿ ಲೇಪಿಸುವರು.



ಚಿತ್ರ 22 : ಮಂಜಿಪತ್ರೆ (ಆರ್ಟಿಮೀಸಿಯ ಪ್ಯಾಲೆನ್ಸ್)


24. ದಾಲ್‌ಚಿನ್ನಿ

(ಸಿನ್ನಮೊಮಮ್ ಜೆಯ್‌ಲಾನಿಕಮ್; Cinnamomum zylanicum Breyn.)

ವ್ಯಾಪನೆ : ಈ ಜಾತಿಯು ಅನೇಕ ಪ್ರಭೇದಗಳನ್ನು ಮೂಲತಃ ಸಿಲೋನ್ ಮತ್ತು ದಕ್ಷಿಣ ಭಾರತದ ನಿತ್ಯಹಸುರು ಅರಣ್ಯಗಳಲ್ಲಿ ಕಾಣಬಹುದು. ದಕ್ಷಿಣ ಭಾರತದ ಸಹ್ಯಾದ್ರಿ ಬೆಟ್ಟ, ಕೊಂಕಣ, ತಿರುನೆಲ್‌ವೇಲಿ ಅರಣ್ಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿರುವುದನ್ನು ಕಾಣಬಹುದು.

ವರ್ಣನೆ : ನಿತ್ಯಹಸುರು ಮರ ಅಥವಾ ಪೊದರುಗಳು. ಸುವಾಸನೆಯ ತೊಗಟೆಯುಳ್ಳ ಕಾಂಡ. ಅಭಿಮುಖ ಅಥವಾ ಪರ್ಯಾಯ ಜೋಡಣೆ ಎಲೆಗಳಲ್ಲಿ ಬುಡದ ಭಾಗದಿಂದ ಎದ್ದುಕಾಣುವ ಮೂರು ಮುಖ್ಯ ನರಗಳು; ಪಾರ್ಶ್ವ ಅಥವಾ ಉಪತುದಿಯಲ್ಲಿರುವ ಮಧ್ಯಾರಂಭಿ ಅಥವಾ ಮಿಶ್ರರೀತಿ ಪುಷ್ಪಮಂಜರಿ. ದ್ವಿಲಿಂಗ

ಅಥವಾ ವಿರಳವಾಗಿ ಸಂಕೀರ್ಣಲಿಂಗಿ ಮಾದರಿಯ ಚಿಕ್ಕ ಹೂವುಗಳು. ಹೆಣ್ಣು ಹೂವುಗಳು ದೊಡ್ಡ ಕೆಲವೇ ಭಾಗಗಳನ್ನು ಹೊಂದಿರುತ್ತವೆ. ಆಲಿಕೆಯಾಕಾರದ, ಚಿಕ್ಕ ಕೊಳವೆಯನ್ನುಳ್ಳ, ಶಾಶ್ವತ 6 ದಳಗಳ ಪುಷ್ಪಾವರಣ. ನಾಲ್ಕು ಸುತ್ತುಗಳಲ್ಲಿ ಜೋಡಿಸಿದ 9 ಕೇಸರಗಳು. ಒಂದು ಮತ್ತು ಎರಡನೇ ಸುತ್ತಿನ ಕೇಸರಗಳು ಗ್ರಂಥಿ ರಹಿತ. ಒಳಗಡೆ ಬಣ್ಣದಳಗಳಿಗೆ ಅಭಿಮುಖವಾಗಿ ಮೂರನೇ ಸುತ್ತಿನಲ್ಲಿರುವ ಕೇಸರಗಳು ಗ್ರಂಥಿಗಳಿರುವ ಕೇಸರ ದಂಡಗಳನ್ನು ಹೊಂದಿ ಹೊರಭಾಗಕ್ಕೆ ಬಗ್ಗಿರುತ್ತವೆ.



ಚಿತ್ರ 23 : ದಾಲ್‌ಚಿನ್ನಿ

ನಾಲ್ಕನೆಯ ಸುತ್ತಿನಲ್ಲಿರುವ ಕೇಸರಗಳು ಬಂಜೆಯಾಗಿರುತ್ತವೆ. ದಪ್ಪ ಶಲಾಕನಳಿಕೆಗೆ ಅಸ್ಪಷ್ಟವಾಗಿ ಮೂರು ಭಾಗಗಳನ್ನು ಹೊಂದಿರುವ ಶಲಾಕಾಗ್ರ, ಪುಷ್ಪಾವರಣದ ಕೊಳವೆಯ ತಳಭಾಗದಲ್ಲಿರುವ ಅಂಡಾಶಯ ಸಾಮಾನ್ಯವಾಗಿ ದೊಡ್ಡದು. ಬಟ್ಟಲಾಕಾರದ ಪುಷ್ಪಾವರಣದಲ್ಲಿರುವ ರಸಫಲ.


ಉಪಯೋಗಗಳು : ದಾಲ್‌ಚಿನ್ನಿ ತೊಗಟೆಯು ಹೆಚ್ಚು ಬಳಕೆಯಲ್ಲಿರುವ ಪ್ರಮುಖ ಮಸಾಲೆ ಪದಾರ್ಥವಾಗಿದ್ದು ಆಹಾರವನ್ನು ರುಚಿ ಮತ್ತು ಸುವಾಸಿತಗೊಳಿಸಲು ಉಪಯೋಗವಾಗುತ್ತದೆ. ಈ ಮರದ ತೊಗಟೆಯಿಂದಲೂ ಮತ್ತು ಎಲೆಗಳಿಂದಲೂ ಸುವಾಸನೆ ತೈಲವನ್ನು ಬಾಷ್ಪೀಕರಣದ ಮೂಲಕ ತೆಗೆಯುತ್ತಾರೆ. ದಾಲ್‌ಚಿನ್ನಿ ತೊಗಟೆಯಿಂದ ತೆಗೆದ ತೈಲ ತಿಳಿಹಳದಿಯಿಂದ ಕಡುಹಳದಿ. ಅತಿ ಸೂಕ್ಷ್ಮ, ತಂಪಾದ, ಸುವಾಸಿತ, ರುಚಿಯುಳ್ಳದ್ದು. ಈ ತೈಲವನ್ನು ವಿವಿಧ ರೀತಿಯ

ಆಹಾರ ಪದಾರ್ಥಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಪೂರ್ವ ದೇಶಗಳಲ್ಲಿ ತಯಾರಿಸುವ ಸುಗಂಧಯುಕ್ತ ವಸ್ತುಗಳ ತಯಾರಿಕೆಯಲ್ಲಿ ಈ ತೈಲವನ್ನು ಬಳಸುತ್ತಾರೆ. ದಾಲ್‌ಚಿನ್ನಿ ಎಲೆಗಳಿಂದ ತೆಗೆದ ಎಣ್ಣೆಯು ಘಾಟುಳ್ಳದ್ದು ಮತ್ತು ಸುವಾಸನೆಯಲ್ಲಿ ಲವಂಗದ ಎಣ್ಣೆಯನ್ನು ಹೋಲುತ್ತದೆ. ಎಲೆಗಳಿಂದ ತೆಗೆದ ಎಣ್ಣೆಯು ಗುಣದಲ್ಲಿ ತೊಗಟೆಯಿಂದ ತೆಗೆದ ಎಣ್ಣೆಗಿಂತ ವಿಭಿನ್ನ. ಎಲೆಯಿಂದ ತೆಗೆದ ತೈಲದಲ್ಲಿ ಶೇಕಡಾ 95ರಷ್ಟು ಯುಜಿನಾಲ್ ಘಟಕವಿರುತ್ತದೆ. ಇದರಲ್ಲಿ ಸುಗಂಧ ಯುಕ್ತ ಗುಣವಿರುವುದರಿಂದ ಎಲೆ ತೈಲದಿಂದ ಈ ಘಟಕವನ್ನು ಬೇರ್ಪಡಿಸಿ ಸುಗಂಧ ಯುಕ್ತ ಪದಾರ್ಥ, ಔಷಧಿ ಮತ್ತು ಕೃತಕ ವೆನಿಲಾ ಸುಗಂಧಕಾರಕವಸ್ತು (ಎಸೆನ್ಸ್) ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಭಾರತದಲ್ಲಿ ವರ್ಷಕ್ಕೆ ಸುಮಾರು 40,000 ಕ್ವಿಂಟಾಲ್ ದಾಲ್‌ಚಿನ್ನಿಯನ್ನು ಮೇಲೆ ಹೇಳಿದ ಉಪಯೋಗಗಳಿಗಾಗಿ ಬಳಸುತ್ತಾರೆ.

ಒಳಭಾಗದ ತೊಗಟೆಯನ್ನು ಒಣಗಿಸಿ ತಯಾರಿಸಿದ ಸಿನಮೊಮ ಔಷಧಿಯನ್ನು ವಾಂತಿ, ಭೇದಿ ಮತ್ತು ಇತರ ಜಠರ ವ್ಯಾಧಿ, ಹಲ್ಲುನೋವು ಮುಂತಾದ ರೋಗಗಳ ನಿವಾರಣೆಗೆ ಉಪಯೋಗಿಸುತ್ತಾರೆ.

ಇತರ ಪ್ರಭೇದಗಳು

(1) ಸಿನ್ನಮೊಮಮ್ ಕ್ಯಾಸಿಯಾ [Cinnamomum cassia (Ness)Nees ex Blume]



ಚಿತ್ರ 24 : ಸಿನ್ನಮೊಮಮ್ ಕ್ಯಾಸಿಯಾ

ಈ ಮರದ ತೊಗಟೆಯಿಂದ ತೆಗೆದ ಎಣ್ಣೆಯು ದಾಲಚಿನ್ನಿ ತೊಗಟೆಯಿಂದ ತೆಗೆದ ಎಣ್ಣೆಯಷ್ಟು ಶ್ರೇಷ್ಠವಾಗಿರುವುದಿಲ್ಲ. ಆದರೂ ಎಣ್ಣೆಯನ್ನು ವಿವಿಧ ಆಹಾರ ಪದಾರ್ಥ ಮತ್ತು ಪೇಯಗಳನ್ನು ಸುವಾಸಿತಗೊಳಿಸಲು, ಸುಗಂಧವಸ್ತು ಮತ್ತು ಶೃಂಗಾರ ಸಾಧನಗಳ ತಯಾರಿಕೆಯಲ್ಲಿ ಹಾಗೂ ಸಾಬೂನುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ.

(2) ಕರ್ಪೂರ

(ಸಿನ್ನಾಮೋಮುಮ್ ಕ್ಯಾಂಫೊರ: *Cinnamomum camphora* (Linn) Sieb.)

ಈ ಪ್ರಭೇದದಿಂದ ಕರ್ಪೂರವನ್ನು ತೆಗೆಯುವರು. ಈ ವೃಕ್ಷದ ತೊಗಟೆ ಮತ್ತು ಎಲೆಗಳನ್ನು ಬಾಷ್ಪೀಕರಿಸಿ ಕರ್ಪೂರವನ್ನು ಪಡೆಯಬಹುದು ಕರ್ಪೂರವು ಒಂದು ರೀತಿಯ ತೀಕ್ಷ್ಣವಾದ ವಾಸನೆಯನ್ನು ಹೊಂದಿದ್ದು ಮುಖ್ಯವಾಗಿ ಪೂಜಾ ಸಮಯದಲ್ಲಿ ಆರತಿ ಮಾಡಲು ಉಪಯೋಗವಾಗುತ್ತದೆ. ಉಳುಕು, ಊತ ಮತ್ತು ಕೀಲು ನೋವು ಹಾಗೂ ಚರ್ಮರೋಗಗಳ ನಿವಾರಣೆಗೆ ಕರ್ಪೂರವನ್ನು ಲೇಪನಗಳಲ್ಲಿ ಬಳಸಿ ಉಪಯೋಗಿಸುತ್ತಾರೆ.

25. ದುಂಪರಾಷ್ಟ್ರ

(ಆಲ್ಪಿನಿಯಾ ಗಲಂಗಾ: *Alpinia galanga* Swartz.)

ವ್ಯಾಪನೆ: ಜಾವಾ ಮತ್ತು ಮಲಯಾ ದ್ವೀಪಗಳು ಇದರ ತವರು. ಹಿಮಾಲಯ ಪರ್ವತಗಳ ಪೂರ್ವ ಭಾಗದಲ್ಲಿ ಕೂಡ ಕಂಡುಬರುವುದು. ದಕ್ಷಿಣದಲ್ಲಿ ಪಶ್ಚಿಮ ಘಟ್ಟ ಮತ್ತು ಅನೇಕ ಇತರ ಪ್ರದೇಶಗಳಲ್ಲಿ ಬೆಳೆಯುವುದನ್ನು ಕಾಣಬಹುದು. ಸಿಲೋನ್‌ನಲ್ಲಿ ಕೂಡ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಾರೆ.

ವರ್ಣನೆ: ಬಹುಸಾಂವತ್ಸರಿಕ. ಸುವಾಸನೆಯುಕ್ತ ಬೇರು ಕಾಂಡದ ಗಡ್ಡೆಯುಳ್ಳ ಶಾಕ. 25–30 ಸೆಂಟಿಮೀಟರ್ ಉದ್ದ ಹಾಗೂ 3–10ಸೆಂಟಿಮೀಟರ್ ಅಗಲವಾದ ದೀರ್ಘವೃತ್ತಾಕಾರದ ಅಥವಾ ಈಟಿಯಾಕಾರದ, ಚೂಪು ತುದಿ, ಹೊಳಪಿನ, ಗಿಡ್ಡ, ದುಂಡಗೆ ಇರುವ, ಕಿರುಎಲೆ ಹೊಂದಿರುವ ಮೇಲ್ಭಾಗದಲ್ಲಿ ಹಸುರು, ಕೆಳಭಾಗದಲ್ಲಿ ತಿಳಿ ಮತ್ತು ಬಿಳಿಯ ಅಂಚುಳ್ಳ, ಎದ್ದುಕಾಣುವ ಮಧ್ಯನರಉಳ್ಳ, ಸರಳ ಎಲೆಗಳು. ಮಿಶ್ರ ಜೋಡಣೆಮಾದರಿ ಪುಷ್ಪಮಂಜರಿ. 2 ಸೆಂಟಿಮೀಟರ್ ಉದ್ದವಾದ ಅಂಡಾಕಾರ, ಈಟಿಯಾಕಾರದ ಪುಷ್ಪಪತ್ರಕ. 3–4 ಸೆಂಟಿಮೀಟರ್ ಉದ್ದದ ತೊಟ್ಟಿರುವ, ದ್ವಿಲಿಂಗ ಮೇಲು ಅಂಡಾಶಯ, ಸಮಪಾರ್ಶ್ವತೆಯ ಬಿಳಿಮಿಶ್ರಿತ ಹಸುರು ಹೂವುಗಳು. ಅಸಮವಾಗಿ ಮೂರು ಭಾಗಗಳನ್ನು ಹೊಂದಿರುವ 3 ಸೆಂಟಿಮೀಟರ್ ಉದ್ದವಾಗಿರುವ ಕೊಳವೆಯಾಕಾರದ ಮೂರು ಸಂಯುಕ್ತ ಪುಷ್ಪಪಾತ್ರ ಪತ್ರಕಗಳು. 0.3 ಸೆಂಟಿ

ಮೀಟರ್ ಉದ್ದ, ಕೊಳವೆಯಾಕಾರದ ದೀರ್ಘವೃತ್ತಾಕಾರದ ದಳಗಳು. ಮೊಂಡು ತುದಿ. 3 ಪುಷ್ಪದಳಗಳಿರುವ ದಳ ವೃತ್ತ, ಪ್ರತಿಯೊಂದು ವೃತ್ತದಲ್ಲೂ ಅಗಲ, ದೀರ್ಘವೃತ್ತಾಕಾರದ, ತುದಿಯಲ್ಲಿ ಎರಡು ಭಾಗವಾಗಿರುವ ಕೆಳಗಡೆ ಹಸುರುಬಣ್ಣ ಉಳಿದ ಭಾಗ ಕೆಂಪಾದ ಲೆಬೆಲವಮ್. ಒಂದೇ ಒಂದು ಪಕ್ವಕೇಸರ. ಚಪ್ಪಟೆಯಾದ ಕೇಸರ ದಂಡ. ಮೂರು ಸಂಯುಕ್ತ ಅಂಡಕೋಶಗಳ ಕೆಳ ಅಂಡಾಶಯ. ಒಂದು ಅಥವಾ ಮೂರು ಕೋಣೆಯಲ್ಲಿ ಅನೇಕ ಅಂಡಕಗಳಿರುವ ಜಾಯಾಂಗ. ಕಿತ್ತಳೆ ಕೆಂಪು ಸಂಪುಟಕ ಮಾದರಿ ಫಲ.



ಚಿತ್ರ 25 : ದುಂಪರಾಸ್ನೆ

ಉಪಯೋಗಗಳು : ಈ ಸಸ್ಯದ ಬೇರು ಕಾಂಡವು ಕೆಂಪು ಮಿಶ್ರಿತ ಕಂದು. ಒಳ್ಳೆಯ ವಾಸನೆಯನ್ನು ಪಡೆದಿರುತ್ತದೆ. ಒಂದು ವಿಶಿಷ್ಟ ಮಸಾಲೆಯ ವಾಸನೆ ಹಾಗೂ ಖಾರವಾದ ರುಚಿಯನ್ನು ಹೊಂದಿರುತ್ತದೆ. ಅನೇಕ ಅಡಿಗೆ ಪದಾರ್ಥಗಳ ತಯಾರಿಕೆಯಲ್ಲಿ ಮದ್ಯಪಾನೀಯಗಳನ್ನು ರುಚಿಗೊಳಿಸಲು ಇದನ್ನು ಉಪಯೋಗಿಸುತ್ತಾರೆ.

ಈ ಸಸ್ಯದ ಶಿಫಾವ್ಯಂತವನ್ನು ವೈದ್ಯಕೀಯ ಚಿಕಿತ್ಸೆಗಾಗಿ ಉಪಯೋಗಿಸುತ್ತಾರೆ. ಮುಖ್ಯವಾಗಿ ಮಕ್ಕಳ ನರಗಳ ಬಲಹೀನತೆಗೆ, ಶ್ವಾಸೋಚ್ಛಾಸದ ಬೇನೆಗಳಿಗೆ ಇದನ್ನು ಉಪಯೋಗಿಸುತ್ತಾರೆ. ಉದರವ್ಯಾಧಿಗಳ ನಿವಾರಣೆಗಾಗಿ ಕೂಡ ಇದನ್ನು ಉಪಯೋಗಿಸುವುದುಂಟು. 1970–71ರಲ್ಲಿ ಭಾರತವು ಸುಮಾರು 5 ಲಕ್ಷ ರೂಪಾಯಿ ಬೆಲೆ ಬಾಳುವ ಶಿಫಾವ್ಯಂತವನ್ನು ಆಮದು ಮಾಡಿಕೊಂಡಿತು.

ಇತರ ಪ್ರಭೇದಗಳು

(ಎ. ಅಫಿಷಿನೇರಮ್; A. officinarum Hance.)

ಈ ಸಸ್ಯದ ಮೂಲ ಚೀನಾ ದೇಶ. ಶಿಖಾವ್ಯಂತಗಳು ಸುವಾಸನೆಯನ್ನು ಹೊಂದಿದ್ದು ಇದನ್ನು ಆಹಾರ ಪದಾರ್ಥಗಳನ್ನು ಸುವಾಸಿತಗೊಳಿಸಲು ಹಾಗೂ ರುಚಿಗೊಳಿಸಲು ಉಪಯೋಗಿಸುತ್ತಾರೆ. ಇದರ ಬೇರುಗಳು ದುಂಪರಾಸ್ಯೆಗಿಂತ ಹೆಚ್ಚು ವಾಸನೆ ಮತ್ತು ರುಚಿಯನ್ನು ಹೊಂದಿರುತ್ತವೆ. ಈ ಸಸ್ಯವನ್ನು ಉತ್ತರ ಭಾರತ ಮತ್ತು ಬಂಗಾಳದಲ್ಲಿ ಸಹ ಬೆಳೆಯುತ್ತಾರೆ.

26. ನೀಲಗಿರಿ ತೈಲದ ಮರ


(ಯೂಕಲಿಪ್ಟಸ್ ಗ್ಲಾಬ್ಯುಲಸ್ ; **Eucalyptus globulus Labill.**)

ವ್ಯಾಪನೆ : ನೀಲಗಿರಿ ಮರಗಳ ತವರು ಆಸ್ಟ್ರೇಲಿಯಾ ದೇಶವಾದರೂ ಈಗ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಇದನ್ನು ಬೆಳೆಯಲಾಗುತ್ತಿದೆ. ಸ್ಪೇನ್, ಪೋರ್ಚುಗಲ್, ಬ್ರೆಜಿಲ್ ಮತ್ತು ಕಾಂಗೊ ದೇಶಗಳು ನೀಲಗಿರಿ ಮರಗಳ ಬೆಳೆಗೆ ಪ್ರಸಿದ್ಧವಾಗಿವೆ. ಇವು ಬೇಗನೆ ಉರಿಯುವ ಗುಣವನ್ನು ಹೊಂದಿರುವುದರಿಂದ ಸೌದೆಗಾಗಿ ಈ ಮರಗಳನ್ನು 1843ರಲ್ಲಿ ಭಾರತದ ನೀಲಗಿರಿ ಬೆಟ್ಟಗಳಲ್ಲಿ ಬೆಳೆಸಲಾಯಿತು. ಈಗ ಆ ಬೆಟ್ಟಗಳಲ್ಲಿ ಸಾಕಷ್ಟು ಪ್ರಮಾಣದ ನೀಲಗಿರಿ ಮರಗಳನ್ನು ಕಾಣಬಹುದು. ಅಲ್ಲದೆ ಈ ಮರಗಳನ್ನು ಆಂಧ್ರದ ಅಣ್ಣಾಮಲೈ ಬೆಟ್ಟ, ಪಳನಿ, ಸಿಮ್ಲಾ, ಕುಮಂಜನ್, ಡಾರ್ಜಿಲಿಂಗ್ ಮತ್ತು ಶಿಲ್ಲಾಂಗ್‌ಗಳಲ್ಲಿ 1200 ಮೀಟರ್ ಎತ್ತರದ ಪ್ರದೇಶಗಳಲ್ಲಿ ಕಾಣಬಹುದು.

ವರ್ಣನೆ : 75–100 ಮೀಟರ್ ಎತ್ತರವಾದ ನಿತ್ಯಹಸುರು ಮರ. ಸುಲಭವಾಗಿ ಬೇರ್ಪಟ್ಟು ಉದುರುವ ಬಿಳಿಯ ತೊಗಟೆ. ಗ್ರಂಥಿ ಚುಕ್ಕೆಗಳುಳ್ಳ, ತೊಗಲಿನಂತಹ, ಸಮ ಅಂಚಿನ, ಸರಳ ಅಭಿಮುಖ ಜೋಡಣೆ ಎಲೆಗಳು. ಮಿಶ್ರ ಪುಷ್ಪಮಂಜರಿ ಅಥವಾ ಒಂಟಿ ಹೂವಿರುವ ಪುಷ್ಪಮಂಜರಿ. ಬಿಳಿ ದ್ವಿಲಿಂಗ ಪರಿಶಲಾಕೆ ಸ್ಥಿತಿಯ, ಪುಷ್ಪಪಾತ್ರದ ಸುತ್ತಲೂ ಬಟ್ಟಲಿನಂತೆ ಇರುವ ಹೂವು. ಕೆಳಅಂಡಾಶಯಕ್ಕೆ ಅಂಟಿಕೊಂಡಿರುವ, ಗಂಟೆಯಾಕಾರದ ಸಂಯುಕ್ತ ಪುಷ್ಪಪಾತ್ರೆಯ ಮೇಲ್ಭಾಗದಲ್ಲಿ ಬಟ್ಟಲು ರೀತಿಯಲ್ಲಿ ಜೋಡಿಸಿರುವ ಪುಷ್ಪಪಾತ್ರಪತ್ರಕಗಳು. ಪುಷ್ಪಪಾತ್ರ ಪತ್ರಕಗಳಿಗೆ ಕೂಡಿಕೊಂಡಿದ್ದು ಹೂವು ಅರಳಿದಾಗ ಟೋಪಿಯಂತೆ ಬೇರ್ಪಡುವ ಹೆಂಚು ಹೊದಿಕೆ ರೀತಿ ಜೋಡಣೆಯ ಸಂಯುಕ್ತ ಪುಷ್ಪದಳಗಳು. ಅನೇಕ ಬಿಡಿಯಾದ ಪುಷ್ಪಾಕ್ಷದ ಅಂಚಿನಲ್ಲಿ ಅನೇಕ ವೃತ್ತಗಳಲ್ಲಿ ಜೋಡಿಸಿರುವ ಚಿಕ್ಕ ಪರಾಗ ಕೋಶ ಹೊಂದಿರುವ ಕೇಸರಗಳು. ಸಂಪುಟಕ ಮಾದರಿ ಫಲ. ಭ್ರೂಣಾಹಾರವಿಲ್ಲದಿರುವ ಬೀಜ.

ಉಪಯೋಗಗಳು: ನೀಲಗಿರಿ ಮರದ ಎಲೆಯಿಂದ ತೆಗೆದ ತೈಲವನ್ನು ನೀಲಗಿರಿ ತೈಲವೆಂದು ಕರೆಯುತ್ತಾರೆ. ಎಲೆಗಳನ್ನು ನೆರಳಿನಲ್ಲಿ ಬಾಷ್ಪೀಕರಿಸುವುದಕ್ಕಿಂತ ಮೂರು

ದಿನಗಳ ವರೆಗೆ ಚೆನ್ನಾಗಿ ಒಣಗಿಸುತ್ತಾರೆ. ಬಳಿಕ ಈ ಒಣಗಿದ ಎಲೆಗಳನ್ನು ಬಟ್ಟಿ ಇಳಿಸಿ ತೈಲವನ್ನು ತೆಗೆಯುತ್ತಾರೆ. ಈ ಎಣ್ಣೆ ಒಟ್ಟು ಎಲೆಯ ಸುಮಾರು 0.75–1.25 ಇರುತ್ತದೆ. 1849–50 ರಲ್ಲಿ ಸುಮಾರು 1.65 ಲಕ್ಷ ರೂಪಾಯಿ ಬೆಲೆಯುಳ್ಳ 18,100 ಕಿಲೋಗ್ರಾಂ (40,000 ಪೌಂಡು) ಎಣ್ಣೆಯನ್ನು ದಕ್ಷಿಣ ಭಾರತದಲ್ಲಿ ತೆಗೆಯಲಾಗಿತ್ತು; ಆದರೆ, ಅನಂತರ ಇತ್ತೀಚೆಗೆ ಎಣ್ಣೆಯನ್ನು ತೆಗೆಯುವ ಪ್ರಮಾಣವು ಕಡಿಮೆಯಾಗುತ್ತಾ ಬಂದಿದೆ. ನೀಲಗಿರಿ ತೈಲವು ವರ್ಣರಹಿತ ಅಥವಾ ತಿಳಿಹಳದಿ. ತೀಕ್ಷ್ಣವಾಸನೆಯನ್ನು ಹೊಂದಿರುತ್ತದೆ. ಈ ತೈಲದಲ್ಲಿನ ಸಿನೋಲ್ ಪ್ರಮುಖ ಘಟಕವು ಭಾರತದ ನೀಲಗಿರಿ ತೈಲದಲ್ಲಿ ಸುಮಾರು ಶೇಕಡಾ 54–62ರಷ್ಟು ಪ್ರಮಾಣದವರೆಗೆ ಇರುತ್ತದೆ.



ಚಿತ್ರ 26: ನೀಲಗಿರಿ

ನೀಲಗಿರಿ ತೈಲವು ಅನೇಕ ಔಷಧಿಯುಕ್ತ ಉಪಯೋಗಗಳನ್ನು ಹೊಂದಿದೆ. ಇದನ್ನು ನೆಗಡಿ, ಕೆಮ್ಮು, ಮಲೇರಿಯಾ ಮತ್ತು ಶೀತಜ್ವರಗಳನ್ನು ನಿವಾರಿಸಲು ಉಪಯೋಗಿಸುತ್ತಾರೆ. ಈ ತೈಲವು ಪೂತಿನಿವಾರಕ ಗುಣವನ್ನು ಹೊಂದಿರುವುದರಿಂದ ಸ್ನಾಯು ಸೆಳೆತ ಮತ್ತು ಬಾವುಗಳನ್ನು ಕಡಮೆಮಾಡಲು ಉಪಯೋಗಿಸುತ್ತಾರೆ. ಕಾಂಡವನ್ನು ಟಿಂಬರ್ ಆಗಿಯೂ ಉಪಯೋಗಿಸುವರು. ಅಲಂಕಾರಕ್ಕಾಗಿ ಈ

ಮರವನ್ನು ರಸ್ತೆಯ ಬದಿಗಳಲ್ಲಿ ಬೆಳೆಸುತ್ತಾರೆ. ರೇಯಾನ್ ಮತ್ತು ಪಾಲಿಫೈಬರ್ ಮುಂತಾದ ಕೃತ್ರಿಮನಾರು ತಯಾರಿಕೆ ಹಾಗೂ ಕಾಗದ ತಯಾರಿಕೆಯಲ್ಲಿ ಉಪ ಯೋಗಿಸುತ್ತಾರೆ.

27. ಪೆಪ್ಪರ್‌ಮೆಂಟ್‌ಗಿಡ

[ಮೆಂಥ ಪೈಪರೇಟಾ (ವರ್ ವಲ್ಗಾರಿಸ್ ಸೋಲ್): **Mentha piperata Linn. Var. Vulgaris Sole.**]

ವ್ಯಾಪನೆ : ಯೂರೋಪ್ ಮತ್ತು ಅಮೆರಿಕ ಈ ಸಸ್ಯದ ತವರು. ಭಾರತದ ನೀಲಗಿರಿ ಪ್ರದೇಶಗಳಲ್ಲಿ ಕ್ರಿ.ಶ. 1881 ರಿಂದಲೂ ಇದನ್ನು ಬೆಳೆಯುತ್ತಿರುವುದು ಕಂಡು ಬಂದಿದೆ. ಇತ್ತೀಚೆಗೆ ಡೆಹರಾಡೂನ್ ಮತ್ತು ಕಾಶ್ಮೀರಗಳಲ್ಲಿ ಇದನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರಯೋಗಾತ್ಮಕವಾಗಿ ಬೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ವರ್ಣನೆ : ಅಧಿಕ ಸುವಾಸನೆಯುಕ್ತ, ಬಹುಸಾಂವತ್ಸರಿಕ, ಸುಮಾರು 10 ಸೆಂಟಿಮೀಟರ್ ಎತ್ತರ, ಯಥೇಚ್ಛವಾಗಿ ಬೆಳೆಯುವ ಶಾಕಗಳು. ನಾಲ್ಕು ಏಣು ಗಳಿರುವ ಮೃದು, ಅಚ್ಚಹಸುರು ಅಥವಾ ನೇರಳೆ ಬಣ್ಣದ ರೆಂಬೆಗಳಿರುವ ಕಾಂಡ. ಸರಳ, ತೊಟ್ಟಿರುವ ಅಭಿಮುಖ ಜೋಡಣೆಯ ಅಂಡಾಕಾರ ಅಥವಾ ಅಗಲವಾದ ಈಟಿಯಾಕಾರದ ಹಲ್ಲಿನ ರೀತಿ ಅಂಚುಳ್ಳ ಅಚ್ಚ ಹಸುರು ಬಣ್ಣದ 3–5 ಸೆಂಟಿಮೀಟರ್ ಉದ್ದದ ಎಲೆಗಳು. ಕಾಂಡ ಅಥವಾ ರೆಂಬೆಗಳ ತುದಿಯಲ್ಲಿರುವ ಮಧ್ಯಾರಂಭಿ ಪುಷ್ಪಮಂಜರಿ. ಚಿಕ್ಕ ತೊಟ್ಟಿಲ್ಲದ ಪುಷ್ಪಪತ್ರಕ, ಪೂರ್ಣ, ದ್ವಿಲಿಂಗ, ಸಮದ್ವಿಪಾರ್ಶ್ವ, ಅಧೋಶಲಾಕೆ ಸ್ಥಿತಿಯ ಹೂವುಗಳು 5 ಸಂಯುಕ್ತ ಪುಷ್ಪಪಾತ್ರಕಗಳು, ಹೆಂಚು ಹೊದಿಕೆ ರೀತಿ ಜೋಡಣೆಯ ಪುಷ್ಪಪಾತ್ರೆ. 5 ಸಂಯುಕ್ತ ಇಪ್ಪಾಲಾಗಿ ತುಟಿ ಗಳಂತಿರುವ ಹೆಂಚುಹೊದಿಕೆ ರೀತಿ ಜೋಡಣೆಯ ಪುಷ್ಪದಳಗಳು. ನಾಲ್ಕು ದ್ವಿದೀರ್ಘ, ಒಳಗಡೆಗೆ ತಿರುಗಿರುವ ಪರಾಗಕೋಶಗಳ ಕೇಸರಗಳು. ಎರಡು ಸಂಯುಕ್ತ ಅಂಡ ಕೋಶಗಳಿದ್ದು ಉಚ್ಚ ಸ್ಥಾನದ ಅಂಡಾಶಯದಲ್ಲಿ ನಾಲ್ಕು ಕೋಣೆಗಳು; ಪ್ರತಿಯೊಂದು ಕೋಣೆಯಲ್ಲೂ ಒಂದು ಅಂಡಕವು ಅಕ್ಷಕ ಅಂಡಕಾಧಾರದಲ್ಲಿದ್ದು ಕೆಳಭಾಗದ ಶಲಾಕೆ ಯಿರುವ, ಎರಡು ಅಸಮ ಭಾಗಗಳಾಗಿ ವಿಭಜಿತ ಶಲಾಕಾಗ್ರ ಹೊಂದಿದ ಜಾಯಾಂಗ. ಕಿರುಕರಟ ಕಾಯಿ ಫಲ.

ಈ ಸಸ್ಯದ ಎಲೆ ಮತ್ತು ಕಾಂಡಗಳಿಂದ ತೆಗೆದ ತೈಲವನ್ನು ಪೆಪ್ಪರಮೆಂಟ್ ತೈಲ ಎಂದು ಕರೆಯುವರು. ಸಾಮಾನ್ಯವಾಗಿ ಹೂವುಗಳು ಸಂಪೂರ್ಣ ಅರಳಿದ ನಂತರ ಈ ಗಿಡವನ್ನು ಕಟಾವು ಮಾಡುವರು; ಆದರೆ, ಭಾರತದ ಕೆಲವು ಪ್ರದೇಶಗಳಲ್ಲಿ ಈ ಗಿಡಗಳು ಹೂವುಗಳನ್ನೇ ಬಿಡುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಸಸ್ಯವು ಸಂಪೂರ್ಣವಾಗಿ ಬೆಳೆದ ಬೇಸಿಗೆ ಕಾಲದಲ್ಲಿ ಕಟಾವು ಮಾಡುವರು. ಕೆಲವೆಡೆ

ಎರಡನೆಯಬಾರಿ ಸಹ ಕಟಾವು ಮಾಡುವರು. ಬೆಳಗಿನ ಸಮಯದಲ್ಲಿ ಒಳ್ಳೆಯ ಬಿಸಿಲು ಬಿದ್ದಾಗ ಈ ಗಿಡಗಳನ್ನು ಕುಡುಗೋಲುಗಳಿಂದ ಅಥವಾ ಕುಯ್ಲು ಯಂತ್ರ ಗಳಿಂದ ಕಟಾವು ಮಾಡುತ್ತಾರೆ. ಬಾಷ್ಪೀಕರಣದ ಮೂಲಕ ತೈಲವನ್ನು ತೆಗೆಯುವಾಗ ಈ ಸಸ್ಯದ ತಾಜಾ ಅಥವಾ ಒಣಗಿದ ಶಾಕಗಳನ್ನು ಉಪಯೋಗಿಸುತ್ತಾರೆ. ಆದರೆ ಹೆಚ್ಚಾಗಿ ಒಣಗಿದ ಶಾಕಗಳನ್ನೇ ಬಳಸುವುದುಂಟು ; ಏಕೆಂದರೆ, ಒಣಗಿದ ಶಾಕಗಳನ್ನು



ಚಿತ್ರ 27 : ಪೆಪ್ಪರ್‌ಮೆಂಟ್ ಗಿಡ

ಮಿತವಾಗಿ ಮತ್ತು ಸುಲಭವಾಗಿ ಆಯ್ದುಕೊಳ್ಳಬಹುದು ಹಾಗೂ ಸುಲಭವಾಗಿ ಬಾಷ್ಪೀಕರಣ ಮಾಡಬಹುದು. ಪರದೇಶಗಳಲ್ಲಿ ಆವಿಯನ್ನು ಒದಗಿಸುವ ಪ್ರತ್ಯೇಕ ವಾದ ಭಟ್ಟಿಯಲ್ಲಿ ಬಾಷ್ಪೀಕರಣದಿಂದ ತೈಲವನ್ನು ತಯಾರಿಸುತ್ತಿದ್ದರೂ ಭಾರತದಲ್ಲಿ ಡೆಹರಾಡೂನ್ ಮೊದಲಾದ ಪ್ರದೇಶಗಳಲ್ಲಿ ನೇರವಾಗಿ ನೀರು ಮತ್ತು ಆವಿಯ ಸರಳ ಬಾಷ್ಪೀಕರಣದ ಮೂಲಕ ಶ್ರೇಷ್ಠವಾದ ತೈಲವನ್ನು ತಯಾರಿಸುವಲ್ಲಿ ಯಶಸ್ವಿ ಯಾಗಿದ್ದಾರೆ. ತೈಲದ ಗುಣಮಟ್ಟವು ಬೆಳೆಯನ್ನು ಬೆಳೆದ ರೀತಿ, ಕಟಾವು ಮಾಡಿದ

ಸಮಯ ಮತ್ತು ಸಸ್ಯಗಳ ಸಮೃದ್ಧತೆ ಮತ್ತು ನಿರೋಗತೆಯನ್ನು ಅವಲಂಬಿಸಿರುತ್ತದೆ. ಪೆಪ್ಪರ್‌ಮೆಂಟ್ ತೈಲವು ತಿಳಿಹಳದಿ, ಇದರಲ್ಲಿ ಮೆಂಥೊಲ್ (ಶೇಕಡಾ 45-60) ಪ್ರಮುಖ ಘಟಕವಾಗಿರುತ್ತದೆ. ಭಾರತವು ಸುಮಾರು 4–5 ಲಕ್ಷ ರೂಪಾಯಿ ಬೆಲೆ ಬಾಳುವ ಪೆಪ್ಪರ್‌ಮೆಂಟ್ ತೈಲವನ್ನು ಪರದೇಶದಿಂದ ಆಮದು ಮಾಡಿಕೊಳ್ಳುತ್ತಿರುವುದರಿಂದ ಮುಂದೆ ಈ ಸಸ್ಯವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಪ್ರಯತ್ನಿಸಲಾಗುತ್ತಿದೆ.

ಉಪಯೋಗಗಳು : ಪೆಪ್ಪರ್‌ಮೆಂಟ್ ತೈಲವು ಮುಖ್ಯವಾದ ಮತ್ತು ಹೆಚ್ಚಾಗಿ ಬಳಸುವ ತೈಲವಾಗಿರುತ್ತದೆ. ಈ ತೈಲವು ಪುದಿನಾದಿಂದ ತಯಾರಿಸಿದ ತೈಲಕ್ಕಿಂತ ವಾಸನೆ ಮತ್ತು ರುಚಿಯಲ್ಲಿ ಶ್ರೇಷ್ಠವಾಗಿದ್ದು ಇದನ್ನು ದಂತಮಾರ್ಜಕ, ಬಾಯಿ ಮುಕ್ಕಳಿಸಲು ಉಪಯೋಗಿಸುವ ಕೆಲವು ಔಷಧಿ, ಕೆಮ್ಮಿನ ಔಷಧಿ, ಚ್ಯೂವಿಂಗಮ್ ಮತ್ತು ಪೆಪ್ಪರ್‌ಮಿಂಟ್‌ಗಳು ಹಾಗೂ ಮದ್ಯಪಾನೀಯಗಳನ್ನು ಸುವಾಸಿತಗೊಳಿಸಲು ಉಪಯೋಗಿಸುವರು.

ಈ ತೈಲವು ಕೆಲವು ಔಷಧಿಯುಕ್ತ ಉಪಯೋಗಗಳನ್ನು ಸಹ ಹೊಂದಿದೆ. ಹೊಟ್ಟೆಯುಬ್ಬರದ ನಿವಾರಣೆ, ವಾಂತಿ, ಭೇದಿ, ತಲೆತಿರುಗುವಿಕೆ ಮೊದಲಾದ ರೋಗಗಳನ್ನು ಉಪಶಮನಗೊಳಿಸಲು ಈ ತೈಲವನ್ನು ಬಳಸುತ್ತಾರೆ. ತಲೆನೋವು ಮತ್ತು ಇತರ ನೋವುಗಳಿಗೆ ಈ ಎಲೆಗಳನ್ನು ಸಣ್ಣಗೆ ಅರೆದು ಲೇಪಿಸುವುದುಂಟು.

28. ಪುದಿನಾ

(ಮೆಂಥಾ ಅರ್ವೆನ್ಸಿಸ್ ತಳಿ: ಪೈಪರಾಸೆನ್ಸ್ ಇಟಾಲ್ಮ್ಸ್ ; Mentha arvensis Dc. Var. *Piperasens itolmes*)

ಮೆಂಥ ಜಾತಿಯಲ್ಲಿ ಪುದಿನಾ (ಮಿಂಟ್) ಮುಖ್ಯವಾದ ಪ್ರಭೇದವಾಗಿದ್ದು ಕೆಲವು ಸುಗಂಧಯುಕ್ತ ಉಪಯೋಗಗಳನ್ನು ಹೊಂದಿದೆ.

ವ್ಯಾಪನೆ : ಸಸ್ಯವನ್ನು ಜಪಾನ್, ಚೀನ ಮತ್ತು ಬ್ರೆಜಿಲ್ ದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಭಾರತದಲ್ಲಿ ಕಾಶ್ಮೀರ, ಡೆಹರಾಡೂನ್ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಲು ಪ್ರಯತ್ನಗಳು ನಡೆಯುತ್ತಿವೆ.

ವರ್ಣನೆ : ಕಾಂಡಗಳ ಮೂಲಕ ವೃದ್ಧಿಯಾಗುವ, ಬಹು ಸಾಂವತ್ಸರಿಕ ಸುಮಾರು 30–90 ಸೆಂಟಿಮೀಟರ್ ಎತ್ತರದ, ನೇರವಾಗಿ ಬೆಳೆಯುವ, ರೆಂಬೆಗಳಿರುವ, ರೋಮಗಳನ್ನುಳ್ಳ ಕಾಂಡ. ಅಭಿಮುಖ ಜೋಡಣೆಯ ಈಟಿಯಾಕಾರದ, ತ್ರಿಕೋನ, ಮೊಂಡಾಗಿರುವ ಹಲ್ಲುಗಳಂತಹ ಅಂಚುಳ್ಳ ಎಲೆಗಳು. ಅಭಿಮುಖ ಜೋಡಣೆ.

ಕಂಕಂಳಲ್ಲಿ ಗುಂಪು ಗುಂಪಾಗಿ ಎದ್ದು ಕಾಣುವ ಇಪ್ಪಾಲಾಗಿ ತುಟಿಗಳಿರುವ ಹೂವುಗಳನ್ನು ಹೊಂದಿದ ಮಧ್ಯಾರಂಭಿ ಪುಷ್ಪಮಂಜರಿ. ಹೂವಿನ ಭಾಗಗಳು ಮತ್ತು ಫಲಗಳು ಪೆಪ್ಪರ್‌ಮೆಂಟ್ ಸಸ್ಯದಲ್ಲಿರುವಂತೆಯೇ. ಕಿರುಕರಟಕಾಯಿಗಳು.



ಚಿತ್ರ 28 : ಪುದಿನಾ

ಈ ಸಸ್ಯದಲ್ಲಿ ಹೂವುಗಳು ಬಿಡುವುದಕ್ಕಿಂತ ಮುಂಚೆ, ಅಂದರೆ ಬೆಳಗಿನ ವೇಳೆ ಬಿಸಿಲಿದ್ದಾಗ ಕಟಾವು ಮಾಡುತ್ತಾರೆ. ಆ ಬಳಿಕ ಇವುಗಳನ್ನು ಅನೇಕ ಕಟ್ಟುಗಳಲ್ಲಿ ಕಟ್ಟಿ ಶೆಡ್‌ಗಳಲ್ಲಿ ಸ್ವಲ್ಪ ಒಣಗಿಸುವರು ಹೆಚ್ಚು ಒಣಗಿಸಿದರೆ ಇದರಲ್ಲಿರುವತೈಲದ ಅಂಶವು ಆವಿಯಾಗಿ ಹೋಗುವುದು. ಪೆಪ್ಪರ್‌ಮಿಂಟ್ ತೈಲವನ್ನು ತೆಗೆದಂತಹ ಬಾಷ್ಪೀಕರಣ ಪದ್ಧತಿಯನ್ನೇ ಇಲ್ಲಿಯೂ ಉಪಯೋಗಿಸಿ ಮಿಂಟ್ ತೈಲ ತೆಗೆಯುವರು. ಈ ಮಿಂಟ್ ತೈಲವಲ್ಲಿಯೂ ಶೇಕಡಾ 70-83 ರಷ್ಟು ಮೆಂಥಾಲ್ ಘಟಕವಿರುತ್ತದೆ.

ಮಿಂಟ್ ತೈಲವನ್ನು ಘನೀಭವಿಸುವ ಪದ್ಧತಿಯ ಮೂಲಕ ಮೆಂಥಾಲನ್ನು ಬೇರ್ಪಡಿಸಿ ಸ್ಫಟಿಕಾಕೃತಿಗಳನ್ನಾಗಿ ಮಾಡುತ್ತಾರೆ. ಭಾರತವು ಮೆಂಥಾಲನ್ನು ಪರದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿರುವ ಕಾರಣ ಇದನ್ನು ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಪ್ರಯತ್ನಿಸಲಾಗುತ್ತಿದೆ.

ಉಪಯೋಗಗಳು : ಈ ತೈಲವು ಸ್ವಲ್ಪ ರುಚಿಯನ್ನು ಹೊಂದಿದ್ದು ಸಾಮಾನ್ಯವಾಗಿ ಇದನ್ನು ಪೆಪ್ಪರ್‌ಮೆಂಟ್ ತೈಲದ ಬದಲು ಉಪಯೋಗಿಸುವುದುಂಟು. ದಂತಮಾರ್ಜಕಗಳು ಮತ್ತು ಬಾಯಿ ಮುಕ್ಕಳಿಕೆಯ ಸಲುವಾಗಿ ಉಪಯೋಗಿಸುವ ದ್ರವಗಳನ್ನು ಸುವಾಸಿತಗೊಳಿಸಲು ಮತ್ತು ರುಚಿಕೊಡಲು ಬಳಸುವರು. ಭಾರತದಲ್ಲಿ ಶ್ರೇಷ್ಠ ದರ್ಜೆಯ ಅಡಿಕೆ ಪುಡಿಯ ತಯಾರಿಕೆಯಲ್ಲಿ ಉಪಯೋಗಿಸುವರು.

ಮೆಂಥಾಲನ್ನು ಅನೇಕ ಔಷಧಿಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಇದನ್ನು ನೀಲಗಿರಿ ತೈಲದ ಜೊತೆಗೆ ಉಸಿರಾಟದ ತೊಂದರೆಗಳ ನಿವಾರಣೆಗಾಗಿ ಉಪಯೋಗಿಸುತ್ತಾರೆ. ಕೆಲವು ಮುಲಾಮುಗಳಲ್ಲಿ ಬೆರೆಸಿ ತಲೆನೋವು, ಸ್ನಾಯುನೋವು ಮೊದಲಾದವುಗಳನ್ನು ಉಪಶಮನಗೊಳಿಸುವುದಕ್ಕಾಗಿ ಬಳಸುತ್ತಾರೆ. ಕೆಮ್ಮಿನ ಔಷಧಿಗಳಲ್ಲಿ ಮತ್ತು ಇನ್‌ಹೇಲರ್‌ಗಳ ತಯಾರಿಕೆಯಲ್ಲಿ ಸಹ ಇದನ್ನು ಉಪಯೋಗಿಸುವುದುಂಟು.

29. ಪಚ್ಚೆ ತೆನೆ (ಪಚೌಲಿ)

(ಪೋಗೊಸ್ಟೆಮಾನ್ ಕ್ಯಾಬ್ಲಿನ್, ಪೋ. ಪಚೌಲಿಪೆಟ್ ತಳಿ ಸೂಅವಿಸ್ ; Pogosteman cablin(Blanco)Benth. P. pachouli pellet var. Suavis Hook f.)

ವ್ಯಾಪನೆ : ಈ ಸಸ್ಯದ ತವರು ಫಿಲಿಪ್ಪೈನ್ಸ್. ಆ ದೇಶನಲ್ಲಿ ಮಾತ್ರ ಇದು ಹೂವು ಬಿಡುತ್ತದೆ. ಭಾರತದಲ್ಲಿ ಬೆಳೆಯುವ ಪಚ್ಚೇತೆನೆ ಪೊ. ಹೆಯ್ನಿಯಾನಸ್ (ಪೊ. ಪಚೌಲಿ) ಕೂಡ ಇದರಂತೆಯೇ ಕಾಣುತ್ತಿದ್ದು ಹೆಚ್ಚು ರೋಮಗಳುಳ್ಳ ದಪ್ಪ ಎಲೆಗಳನ್ನು ಹೊಂದಿರುತ್ತದೆ. ಪೋಗೊಸ್ಟೆಮಾನ್ ಕ್ಯಾಬ್ಲಿನ್ ಸಸ್ಯವನ್ನು ಇತ್ತೀಚೆಗೆ ಮಲಯಾ, ಇಂಡೋನೇಶಿಯಾ, ನೇಯರ್‌ಚಿಲ್ಲಿಸ್ ದ್ವೀಪ, ಚೀನಾ ಮೊದಲಾದ ದೇಶಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಮಡಗಾಸ್ಕರ್, ಪರಗ್ವೆ, ಬ್ರೆಜಿಲ್ ಮೊದಲಾದ ದೇಶಗಳಲ್ಲಿ ಪ್ರಯೋಗಾತ್ಮಕವಾಗಿ ಬೆಳೆಯುತ್ತಿದ್ದಾರೆ. ಭಾರತದಲ್ಲಿ ಈ ಗಿಡಗಳನ್ನು ಶೆವೋರಿ (ಯರಕಾಡ್), ನೀಲಗಿರಿ, ಅಣ್ಣಾಮಲೈ ಬೆಟ್ಟಗಳಲ್ಲಿ, ಕರ್ನಾಟಕ (ಬೆಂಗಳೂರು), ಉತ್ತರ ಪ್ರದೇಶ (ಡೆಹರಾಡೂನ್) ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿ ಪ್ರಯೋಗಾತ್ಮಕವಾಗಿ ಬೆಳೆಯುವುದರಲ್ಲಿ ಸಾಕಷ್ಟು ಯಶಸ್ವಿಯಾಗಿರುವರು.

ವರ್ಣನೆ : 3–4 ಮೀಟರ್ ಎತ್ತರದ ಬಹುಸಂವತ್ಸರಿಕ ಶಾಕ. ಮೃದು, 4 ಕೋನಗಳ ಕಾಂಡ. ಅಭಿಮುಖ ಜೋಡಣೆಯ, ಸರಳ, 5-10 ಸೆಂಟಿಮೀಟರ್ ಉದ್ದ 3-9 ಸೆಂಟಿಮೀಟರ್ ಅಗಲ ಇದ್ದು ಅಂಡಾಕಾರದ, ಸುವಾಸನೆಯ, ಅಲ್ಪ ಸ್ವಲ್ಪವಾಗಿ ಸೀಳಿ ವಿಭಾಗಿತ ಹಲ್ಲಿನಂತಹ ಅಂಚುಳ್ಳ, ರೋಮಗಳಿರುವ ಎಲೆಗಳು. ಗೋಳಾಕಾರದ ಕೂಟಚಕ್ರಕ ಪುಷ್ಪಮಂಜರಿ. ತೊಟ್ಟಿಲ್ಲದ, ಎಲೆಯಂತಹ ಪುಷ್ಪಪತ್ರಗಳ ಪೂರ್ಣದ್ವಿಲಿಂಗ, ಸಮದ್ವಿಪಾರ್ಶ್ವತೆ, ಅಧೋಶಲಾಕೆ ಹೂವುಗಳು. 5 ಪುಷ್ಪಪಾತ್ರಪತ್ರಕಗಳ ಸಂಯುಕ್ತ ಕೊಳವೆಯಂತಹ ಪುಷ್ಪಪಾತ್ರೆ. 5 ಸಂಯುಕ್ತ, ಇಪ್ಪಾಲಾಗಿ ತುಟಿಗಳಂತಿರುವ, ಹೆಂಚು ಹೊದಿಕೆ ರೀತಿಯಲ್ಲಿ ಜೋಡಿತವಾಗಿರುವ ಪುಷ್ಪದಳಗಳು. ನೇರಳೆ ಬಣ್ಣದ ರೋಮಗಳನ್ನುಳ್ಳ ಕೇಸರದಂಡ, ಒಳಗಡೆಗೆ ತಿರುಗಿರುವ ಪರಾಗಕೋಶಗಳು. 4 ದ್ವಿದೀರ್ಘ ಕೇಸರಗಳು. ಎರಡು ಸಂಯುಕ್ತ ಅಂಡಕೋಶಗಳು. ಉಚ್ಚ ಅಂಡಾಶಯದಲ್ಲಿ 4 ಕೋಣೆಗಳು. ಪ್ರತಿ ಕೋಣೆಯಲ್ಲಿನ ಒಂದೊಂದು

ಅಂಡಕ ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುತ್ತದೆ. ನೇರಿಳೆ ಬಣ್ಣದ ಶಲಾಕ. ಎರಡು ಅಸಮ ವಿಭಾಗಗಳಾಗಿ ವಿಭಜಿಸಿದ ಬಿಳಿಯ ಶಲಾಕಾಗ್ರವಿರುವ ಜಾಯಾಂಗ. ಕಪ್ಪಾದ 4 ಕಿರುಕರಟ ಕಾಯಿಗಳುಳ್ಳ ಫಲ.

ಇದರ ಎಲೆಗಳಿಂದ ತಯಾರಿಸಿದ ಎಣ್ಣೆಗೆ ಪಚೌಲ ತೈಲವೆಂದು ಹೆಸರು. ಇದು ಅನೇಕ ಪ್ರಮುಖವಾದ ಹಾಗೂ ಹೆಚ್ಚು ಬೆಲೆಯುಳ್ಳ ಸುಗಂಧ ತೈಲಗಳಲ್ಲಿ ಒಂದಾಗಿದೆ. ಈ ತೈಲವು ಹೆಚ್ಚು ಕಡಮೆ ಶ್ರೀಗಂಧದ ಎಣ್ಣೆಯ ವಾಸನೆ ಹೊಂದಿರುತ್ತದೆ. ಸಮನಾಗಿ ಮಳೆಬೀಳುವ ಬೆಚ್ಚಗಿನ ಆರ್ದ್ರತೆಗೂಡಿದ ಹವಾಮಾನ ಮತ್ತು ಫಲವತ್ತಾದ ಭೂಮಿಯಲ್ಲಿ ಈ ಸಸ್ಯವು ತುಂಬ ಸಮೃದ್ಧಿಯಾಗಿ ಬೆಳೆಯುತ್ತದೆ. ಸಸಿ ನೆಟ್ಟ 5–6 ತಿಂಗಳುಗಳ ನಂತರ ಕೊಯ್ಲಿಗೆ ಸಿದ್ಧವಾಗುತ್ತದೆ. ಅನಂತರ ಗಿಡಗಳನ್ನು ಎರಡು ಅಥವಾ ಮೂರು ವರ್ಷಗಳವರೆಗೆ ವರ್ಷದಲ್ಲಿ ಎರಡು ಬಾರಿ (ಮಾರ್ಚ್-ಸೆಪ್ಟೆಂಬರ್) ಕೊಯ್ಲು ಮಾಡಬಹುದು. ಇದಾದ ಮೇಲೆ ಬೇರೆ ಬೆಳೆಯನ್ನೇ ಬೆಳೆಯಬೇಕಾಗುತ್ತದೆ. ಈ ಬೆಳೆಯನ್ನು ಪ್ರಾತಃಕಾಲ ಅಥವಾ ಸಾಯಂಕಾಲದಲ್ಲಿ ಮಾಡುತ್ತಾರೆಯೇ ಹೊರತು ತೀಕ್ಷ್ಣ ಬಿಸಿಲಿನಲ್ಲಿ ಮಾಡುವುದಿಲ್ಲ. ಇದರ ಎಲ್ಲ ಭಾಗಗಳೂ ಸುವಾಸನೆಯನ್ನು ಹೊಂದಿರುತ್ತವೆ. ಆದರೆ ಸಾಮಾನ್ಯವಾಗಿ ಮೇಲ್ಭಾಗದ ಎಲೆಗಳನ್ನು ಮಾತ್ರ ಆಯ್ದು ಎಣ್ಣೆ ತೆಗೆಯುತ್ತಾರೆ. ಎಲೆಗಳು ಕಂದು ವರ್ಣಕ್ಕೆ ತಿರುಗುವ ಮೊದಲೇ ಎಲೆಗಳನ್ನು ಮಾತ್ರ ಆಯ್ದು ನೆರಳಿನಲ್ಲಿ ಒಣಗಿಸಿ ಎಲೆಗಳು ತನ್ನದೇ ಆದ ವಿಶಿಷ್ಟ ರೀತಿಯ ಪಚೌಲಿ ಸುವಾಸನೆಯನ್ನು ಬೀರಲು ಪ್ರಾರಂಭ ಮಾಡಿದಾಗ ಬಾಷ್ಪೀಕರಣಕ್ಕೆ ಒಳಪಡಿಸುತ್ತಾರೆ. ಪಚೌಲಿ ಎಣ್ಣೆಯನ್ನು ನೇರವಾಗಿ ಆವಿ ಬಾಷ್ಪೀಕರಣದ ಮೂಲಕ ತಯಾರಿಸುತ್ತಾರೆ. ಬಾಷ್ಪೀಕರಣದ ನಂತರ ತೆಗೆದ ತಾಜಾ ತೈಲವು ಹೆಚ್ಚು ಕಡಮೆ ಹಸುರಾಗಿದ್ದು ಅತಿ ಘಾಟು ವಾಸನೆಯನ್ನು ಹೊಂದಿರುತ್ತದೆ. ಆದರೆ ದಿನಗಳೆದಂತೆ ಆಹ್ಲಾದಕರ ವಾಸನೆ ಪಡೆಯುತ್ತದೆ. ಮಾರುಕಟ್ಟೆಯಲ್ಲಿ ಈ ತೈಲಕ್ಕೆ ಸಾಕಷ್ಟು ಬೇಡಿಕೆ ಇದ್ದರೂ ಈ ತೈಲದಲ್ಲಿರುವ ಮುಖ್ಯ ರಾಸಾಯನಿಕ ಘಟಕಗಳ ಪರಿಚಯ ಇನ್ನೂ ಅಸ್ಪಷ್ಟವಾಗಿದೆ. ತೈಲದ ಸುಮಾರು ಶೇಕಡಾ 97 ರಷ್ಟು ಪ್ರಮಾಣದ ಘಟಕಗಳಲ್ಲಿ ಸುವಾಸನೆಯ ಅಂಶ ಬಹಳ ಕಡಮೆ ಇರಬಹುದು ಎಂದು ತರ್ಕಿಸಲಾಗಿದೆ. ಕೆಲವು ಮೂಲ ಸಂಯುಕ್ತ ಘಟಕಗಳು ಪಚೌಲಿಯ ಪ್ರತ್ಯೇಕ ರೀತಿಯ ಸುವಾಸನೆಗೆ ಕಾರಣ ಎನ್ನಬಹುದು. ಸುಗಂಧ ತೈಲದಲ್ಲಿ ಕಂಡುಹಿಡಿಯಲಾಗದ ಒಂದು ಆಲ್ಡಿಹೈಡ್ ಮತ್ತು ಒಂದು ಕೀಟೋನ್ ಇದ್ದು ಅನುಕ್ರಮವಾಗಿ ಗುಲಾಬಿ ಮತ್ತು ಒರ್ರಿಸ್ ರೀತಿಯ ಸುವಾಸನೆಯನ್ನು ಹೊಂದಿರುತ್ತವೆ. ಇವೆರಡು ರೀತಿಯ ಸುವಾಸನೆಗಳು ಮಿಶ್ರವಾಗಿ ಪಚೌಲಿಯ ಸುವಾಸನೆಯನ್ನು ಬೀರುತ್ತವೆ.

ಉಪಯೋಗಗಳು : ಪಚೌಲಿ ತೈಲವು ಮುಖ್ಯವಾದ ಸುಗಂಧ ತೈಲಗಳಲ್ಲಿ ಒಂದು ಎನ್ನಬಹುದು. ಈ ತೈಲವು ಒಳ್ಳೆಯ ಸ್ಥಿರೀಕರಣ ಗುಣಗಳನ್ನು ಹೊಂದಿರು

ವುದರಿಂದ ಅನೇಕ ಸುಗಂಧ ತೈಲಗಳನ್ನು ಹಾಳಾಗದಂತೆ ಕಾಪಾಡಲು ಉಪಯೋಗಿಸುತ್ತಾರೆ. ಸಂಗಂಧ ತೈಲವಾಗಿಯೂ ಸಹ ಇದನ್ನು ಉಪಯೋಗಿಸುತ್ತಾರೆ. ಕೆಲವು ಪನ್ನೀರುಗಳ ತಯಾರಿಕೆಯಲ್ಲಿ ಸಾಬೂನು ಮತ್ತು ವಯಖಾಲಂಕಾರ ವಸ್ತುಗಳನ್ನು ಸುವಾಸನೆಗೊಳಿಸಲು, ಕಾಶ್ಮೀರ ಶಾಲುಗಳಿಗೆ ಸುಗಂಧ ನೀಡಲು ಪಚೌಲಿ ಸುಗಂಧ ತೈಲವನ್ನು ಬಳಸುವರು. ತಂಬಾಕನ್ನು ಸುವಾಸಿತ ಹಾಗೂ ಸ್ವಾದಿಷ್ಟಗೊಳಿಸಲೂ ಸಹ ಈ ತೈಲವನ್ನು ಉಪಯೋಗಿಸುವರು.

30. ಬಜೆ

(ಅಕೋರಸ್ ಕಲಾಮಸ್; Acorous calamus Linn.)

ವ್ಯಾಪನೆ : ಈ ಸಸ್ಯವು ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲಿಯೂ ಬೆಳೆಯುತ್ತದೆ ; ಆದರೆ ಹೆಚ್ಚಾಗಿ ಈ ಸಸ್ಯಗಳನ್ನು ತಂಪಾದ ಜೌಗು ಮತ್ತು ಕೊಚ್ಚೆ ಭೂಮಿಗಳಲ್ಲಿ ಬೆಳೆಯುವುದನ್ನು ಕಾಣಬಹುದು. ಕರ್ನಾಟಕದ ಅನೇಕ ಭಾಗಗಳಲ್ಲಿ ಇದನ್ನು ಸಾಗುವಳಿ ಮಾಡುತ್ತಾರೆ.



ಚಿತ್ರ 29 : ಬಜೆ

ವರ್ಣನೆ : ಈ ಸಸ್ಯವು ಉದ್ದವಾಗಿ ನೆಲದ ಒಳಗಡೆ ತೆವಳುವಂಥಹ ಸಾಕಷ್ಟು ಕೊಂಬೆಗಳಿರುವ ಸುವಾಸಿತ ಗುಪ್ತ ಕಾಂಡವನ್ನು ಹೊಂದಿದ ಶಾಕ. ಮೇಲುಗಡೆ ಸರಳ,

ಪರ್ಯಾಯ ಜೋಡಣೆಯ, ಎರಡು ಸಾಲಿನಲ್ಲಿ 1–2 ಮೀಟರ್ ಉದ್ದ ಮತ್ತು 2–3 ಸೆಂಟಿಮೀಟರ್ ಅಗಲವಾಗಿರುವ ನೇರವಾದ ಎಲೆಗಳು. ಎಲೆಯನ್ನು ಹೋಲುವ ಉಪಪತ್ರದಿಂದ ಆವರಿಸಲ್ಪಟ್ಟ ಅನೇಕ ಹೂವುಗಳನ್ನು ಹೊಂದಿದ ಪುಷ್ಪ ಮಂಜರಿ ವೃಂತ. ಆವರಿತ ತಾಳಗುಚ್ಛ ರೀತಿಯ ಹೂ ಗೊಂಚಲು. 5-10 ಸೆಂಟಿಮೀಟರ್ ಉದ್ದವಾಗಿರುವ ಕೊಳವೆಯಾಕಾರದ ಪುಷ್ಪ ವೃಂತವಿರುವ ಹಸುರು ವರ್ಣದ ಚಿಕ್ಕ ದ್ವಿಲಿಂಗ ಹೂವುಗಳು. ನಿಮ್ನ ರೀತಿಯ, ಹೆಡೆಯಾಕಾರದ 6 ದಳಗಳಿರುವ ಪರಿದಳ ಪುಂಜ, ಚಪ್ಪಟೆಯಾಗಿರುವ, ಪರಾಗ ಕೋಶವಿರುವ 6 ಕೇಸರಗಳು. ಎರಡು ಕೋಣೆಯಿಂದ್ದು, ಪ್ರತಿಯೊಂದು ಕೋಣೆಯಲ್ಲಿ 2 ಅಂಡಕಗಳಿರುವ ಅಂಡಾಶಯ. ಹಳದಿ ವರ್ಣದ ರಸಫಲ.

ಉಪಯೋಗಗಳು : ಇದರ ರಸಭರಿತ ಶಿಫಾವೃಂತವು ಹೆಚ್ಚಿಗೆ ಸುವಾಸನೆಯನ್ನು ಹೊಂದಿರುತ್ತದೆ. ಶಿಫಾವೃಂತಗಳನ್ನು ಒಣಗಿಸಿ ತಯಾರಿಸಿದ ಪುಡಿಯನ್ನು ಸುವಾಸಿತ ಕಿರುಚೀಲ ಮತ್ತು ಸ್ನಾನದ ಮನೆಯಲ್ಲಿ ಬಳಸುವ ಪೌಡರುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಶಿಫಾವೃಂತಗಳಿಂದ ಬಾಷ್ಪೀಕರಿಸಿ ತೆಗೆದ ತೈಲವನ್ನು ವಿವಿಧ ಪೇಯಗಳು ಹಾಗೂ ಸುವಾಸನೆ ತೈಲಗಳನ್ನು ಸುವಾಸಿತಗೊಳಿಸಲು ಬಳಸುತ್ತಾರೆ. ಕೀಟನಾಶಕ ಎಣ್ಣೆಯಲ್ಲಿಯೂ ಸಹ ಇದನ್ನು ಬೆರೆಸುತ್ತಾರೆ.

ಈ ಸಸ್ಯದ ಒಣಗಿರುವ ಬೇರುಕಾಂಡದಿಂದ ಕಲಾಮಸ್ ಔಷಧಿಯನ್ನು ತಯಾರಿಸಿ ವೈದ್ಯಕೀಯ ಚಿಕಿತ್ಸೆಗಾಗಿ ಬಳಸುತ್ತಾರೆ.

ಕಲಾಮಸ್ ಔಷಧಿಯಲ್ಲಿ ತೀವ್ರ ಬಾಷ್ಪ ಹೊಂದುವ ಗುಣದ ಎಣ್ಣೆಯಿರುವ ಕಾರಣ ಇದನ್ನು ವಾತಹರವಾಗಿ ಬಳಸುತ್ತಾರೆ. ಈ ಔಷಧಿಯು ಜಠರ ಅಥವಾ ಕರುಳಿನಲ್ಲಿ ಸೇರಿರುವ ವಾಯುವನ್ನು ಶೀಘ್ರ ಉಪಶಮನ ಮಾಡಿ ಹೊಟ್ಟೆಯುಬ್ಬರವನ್ನು ಹೋಗಲಾಡಿಸುತ್ತದೆ. ಅಲ್ಲದೆ ಹಸಿವೆಯನ್ನು ಹೆಚ್ಚಿಸುತ್ತದೆ. ಸಾಮಾನ್ಯವಾಗಿ ಬಜೆಯು ಎಲ್ಲ ಮನೆಗಳಲ್ಲಿಯೂ ಬಳಕೆಯಲ್ಲಿದ್ದು ಊಟದ ನಂತರ ಒಣಗಿದ ಬಜೆಯನ್ನು ಹಾಗೆಯೇ ಅಥವಾ ವೀಳ್ಯದೆಲೆಯ ಜೊತೆಗೆ ಮೆಲ್ಲುವುದುಂಟು. ಈ ಸಸ್ಯದ ಶಿಫಾವೃಂತವು ಆವಶ್ಯಕ ಸುಗಂಧ ತೈಲವನ್ನು ಹೊಂದಿರುವುದರಿಂದ ಕಫ ನಿವಾರಕ ಔಷಧಿಯಾಗಿಯೂ ಸಹ ಬಳಕೆಯಲ್ಲಿದೆ. ಶ್ವಾಸನಾಳದಲ್ಲಿ ಸ್ರವಣದ ಚಲನೆಯನ್ನು ಹೆಚ್ಚಿಸುವುದರಿಂದ ಇದು ಅಸ್ತಮಾ ರೋಗದಿಂದ ಬಳಲುವ ರೋಗಿಗಳಿಗೆ ಉಪಯುಕ್ತವಾದುದು. ಟ್ಯಾನಿನ್ ಘಟಕ ಹೊಂದಿರುವುದರಿಂದ ಬಜೆ ಬೇರನ್ನು ಭೇದಿ ಮತ್ತು ಆಮಶಂಕೆ ಉಪಶಮನಕ್ಕೆ ಉಪಯೋಗಿಸುತ್ತಾರೆ. ಈ ಸಸ್ಯದ ಬೇರಿನ ಪುಡಿಯು ಹೊಟ್ಟೆಯಲ್ಲಿರುವ ಜಂತುಗಳನ್ನು ಹೊರಹಾಕಲು ಸಹಾಯ ಮಾಡುತ್ತದೆ. ಈ ಶಿಫಾವೃಂತದಿಂದ ತಯಾರಿಸಿದ ತೈಲವು ನರವರ್ಧಕ, ಉದ್ವೇಗಶಾಮಕ ಹಾಗೂ


ನೋವನ್ನು ಉಪಶಮನಗೊಳಿಸುವ ಗುಣಗಳನ್ನು ಹೊಂದಿರುತ್ತದೆ. ಮೆದುಳು ರೋಗಗಳು ಹಾಗೂ ಬುದ್ಧಿ ವಿಕಾರವಾಗಿರುವ ರೋಗಿಗಳನ್ನು ಗುಣಪಡಿಸುವುದಕ್ಕೂ ಸಹ ಉಪಯೋಗವಾಗುತ್ತದೆ.

ಈ ಶಿಫಾವ್ಯಂತದ ಬ್ಯಾಕ್ಟೀರಿಯಾ ನಿವಾರಕ ಗುಣಗಳನ್ನು ಇತ್ತೀಚೆಗೆ ಕೆಲವು ಪ್ರಯೋಗಗಳಿಂದ ಸಿದ್ಧಮಾಡಿ ತೋರಿಸಿದ್ದಾರೆ.

31. ಬರ್ಗಮೋಟ್ ಕಿತ್ತಳೆ

[ಸಿಟ್ರಸ್ ಅರಾನ್ಷಿಯಮ್ ಉಪಪ್ರಭೇದ ಬರ್ಗಾಮಿಯ: Citrus aurantium Linn. Sub sp. bergamia (Risso & Poit)]

ವ್ಯಾಪನೆ: ಇಟಲಿಯ ಸುತ್ತಮುತ್ತಲಿನ ಪ್ರದೇಶ ಇದರ ತವರು. ಇದರ ಹಣ್ಣುಗಳಿಂದ ಬರ್ಗಮೋಟ್ ಸುಗಂಧ ತೈಲವನ್ನು ತೆಗೆಯುತ್ತಾರೆ. ಈ ತೈಲದ ಸುಗಂಧಯುಕ್ತ ಉಪಯೋಗದ ಕಾರಣ ಪ್ರತಿ ವರ್ಷವೂ ಸುಮಾರು 4-5 ಲಕ್ಷ ರೂ. ಬೆಲೆಬಾಳುವ ತೈಲವನ್ನು ಪರದೇಶಗಳಿಂದ ಭಾರತಕ್ಕೆ ರಫ್ತು ಮಾಡಿಕೊಳ್ಳಲಾಗುತ್ತದೆ.



ಚಿತ್ರ: 30 ಬರ್ಗಮೋಟ್ ಕಿತ್ತಳೆ

ಈ ಕಾರಣದಿಂದ ಇತ್ತೀಚೆಗೆ ಬರ್ಗಮೋಟ್ ಕಿತ್ತಳೆ ಗಿಡಗಳನ್ನು ಭಾರತದ ಪಂಜಾಬ್, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಅಸ್ಸಾಂ ಮತ್ತು ದಕ್ಷಿಣ ಭಾರತದ ಅನೇಕ ಪ್ರದೇಶಗಳಲ್ಲಿ ಬೆಳೆಯಲು ಪ್ರಯತ್ನಗಳು ನಡೆಯುತ್ತಿವೆ.

ವರ್ಣನೆ: ಉದ್ದವಾಗಿ ಬೆಳೆಯುವ ನಿತ್ಯ ಹಸುರು ಮರ. ನೇರವಾಗಿ ಬೆಳೆದು ಅನೇಕ ರೆಂಬೆಗಳನ್ನು ಹೊಂದಿರುವ ದಾರು ರೀತಿಯ ಕಾಂಡ. ವೃಂತಪರ್ಣವಿಲ್ಲದ, ಕಾಂಡದ ತುದಿಯಲ್ಲಿ ಅಭಿಮುಖ ಜೋಡಣೆ ಹಾಗೂ ಕೆಳಭಾಗದಲ್ಲಿ ಪರ್ಯಾಯ

ಜೋಡಣೆಯು, ಸಮ ಅಥವಾ ಅಲೆಯಾಕಾರದ ಅಂಚುಳ್ಳ, ಅಗಲವಾದ ಎಲೆಯಿದ್ದು, ಎರಡು ಹಸುರು ಚಿಕ್ಕ ರೆಕ್ಕೆಗಳಂತಹ ಪತ್ರವೃಂತ ಕಾವುಗಳಿರುವ ಎಲೆಗಳು. ಎಲೆಯ ಕಂಕುಳಲ್ಲಿರುವ ಚಿಕ್ಕ ಮಧ್ಯಾರಂಭಿ ಪುಷ್ಪಮಂಜರಿ. 5 ಸುತ್ತುಗಳಿರುವ ದ್ವಿಲಿಂಗ, ಬಿಳಿ ಸುವಾಸನೆ ಬೀರುವ ಚಿಕ್ಕ ಹೂಗಳು. ಬಟ್ಟಲಾಕಾರದ ಕೂಡುಅಂಚು ರೀತಿಯ 3–5 ಸಂಯುಕ್ತ ದಳಗಳನ್ನು ಹೊಂದಿದ ಪುಷ್ಪಪಾತ್ರೆ. ಬಿಳಿಯ, ಬಿಡಿಯಾಗಿರುವ, ಪುಷ್ಪಪಾತ್ರ ಪತ್ರಕಗಳಿಗಿಂತ ದೊಡ್ಡದಾದ, ಹೆಂಚು ಹೊದಿಕೆ ರೀತಿ ಜೋಡಣೆಯುಳ್ಳ, ಪುಷ್ಪದಳಗಳು. ಬಟ್ಟಲಾಕಾರದ ಪುಷ್ಪಪೀಠದ ಮೇಲೆ ಬಹುಸಲಾಂಗ ಜೋಡಣೆಯಲ್ಲಿ 20-60 ಕೇಸರಗಳನ್ನು ಹೊಂದಿದ ಕೇಸರ ಮಂಡಲ. ಉಚ್ಚಸ್ಥಾನದ 6-20 ಅಥವಾ ಹೆಚ್ಚು ಅಂಡಕೋಶಗಳ ಅಂಡಾಶಯ. ಟೋಪಿಯಂತಹ ಶಲಾಕಾಗ್ರವುಳ್ಳ, ದಪ್ಪವಾದ ಶಲಾಕೆ. ಗೋಳಾಕಾರದ ಅಥವಾ ಪೇರು ಆಕಾರದ 7 ಸೆಂಟಿಮೀಟರ್ ವ್ಯಾಸ. ಅತೀ ಹುಳಿಯಾಗಿದ್ದು ತಿನ್ನಲಾಗದ ಹೆಸ್ಪಿರಿಡಿಯಂ ಫಲ.

ಉಪಯೋಗಗಳು : ಹಣ್ಣಿನ ಮೇಲ್ಭಾಗದ ಸಿಪ್ಪೆಯಲ್ಲಿ ಹೆಚ್ಚಿನ ಪ್ರಮಾಣದ ತೈಲಗ್ರಂಥಿಗಳಿರುವುದರಿಂದ ಈ ಸಿಪ್ಪೆಯಿಂದ ಮನೋಲ್ಲಾಸಕರ ಬರ್ಗ್‌ಮೋಟ್ ತೈಲವನ್ನು ಪಡೆಯಬಹುದು. ಕ್ಯಾಲಿಬ್ರೇಜ್, ಅಮೀನಾ ಅಥವಾ ಗ್ಯಾಂಗ್ರಿ ಮೊದಲಾದ ಯಂತ್ರಗಳ ಸಹಾಯದಿಂದ ತಾಜಾ ಹಣ್ಣುಗಳನ್ನು ಹಿಂಡಿ ಉತ್ತಮ ದರ್ಜೆಯ ಬರ್ಗ್‌ಮೋಟ್ ತೈಲವನ್ನು ಪಡೆಯಬಹುದು. ಇದು ಕಂದು ಮಿಶ್ರಿತ ಬಂಗಾರ ಅಥವಾ ಹಸುರು ಮಿಶ್ರಿತ ಕಂದು ಬಣ್ಣ. ಒಳ್ಳೆಯ ಸುವಾಸನೆಯನ್ನು ಹೊಂದಿರುತ್ತದೆ. ಇದರಲ್ಲಿ ಎಲ್. ಲಿನೋಲಿಲ್–ಅಸಿಟೇಟ್ ಘಟಕ ಸುಮಾರು ಶೇಕಡಾ 50ರಷ್ಟು ಇರುವುದೇ ಈ ತೈಲದ ಗುಣಕ್ಕೆ ಕಾರಣ. ಈ ತೈಲವು ಉತ್ತಮವಾದ ಸುವಾಸನೆಯುಳ್ಳ ಗುಣವನ್ನು ಹೊಂದಿರುವುದರಿಂದ ಇದನ್ನು ಎಲ್ಲ ಸುವಾಸಿತ ಪದಾರ್ಥಗಳಲ್ಲಿ, ಲ್ಯಾವೆಂಡರ್, ಯುಡಿಕೊಲೋನ್ ಮತ್ತು ಸುವಾಸಿತ ಚೀಲಗಳ ತಯಾರಿಕೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ಇದಲ್ಲದೆ ಸಾಬೂನನ್ನು ಸುವಾಸಿತಗೊಳಿಸುವಿಕೆ ಮತ್ತು ಅನೇಕ ಸೌಂದರ್ಯ ಸಾಧನಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬರ್ಗ್‌ಮೋಟ್ ಮರದ ಎಲೆಗಳಿಂದಲೂ ಸುಗಂಧ ತೈಲವನ್ನು ತೆಗೆಯುತ್ತಾರೆ. ಈ ತೈಲವನ್ನು ಪೆಟಿಟ್‌ಗ್ರೇನ್ ಬರ್ಗ್‌ಮೋಟ್ ಎಂದು ಕರೆಯುವರು. ಈ ತೈಲವು ಬರ್ಗ್‌ಮೋಟ್ ತೈಲದಷ್ಟು ಬೆಲೆಯುಳ್ಳದ್ದಲ್ಲ. ಅಲ್ಲದೆ ಕೇವಲ ಕೆಲವು ಬಗೆಯ ಸಾಬೂನು ಮತ್ತು ಯು-ಡಿ-ಕೋಲೋನ್‌ಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ.

ಬರ್ಗ್‌ಮೋಟ್ ತೈಲವನ್ನು ಪ್ರಭಾವಶಾಲಿ ಕ್ರಿಮಿನಾಶಕವಾಗಿ ಉಪಯೋಗಿಸಲಾಗುತ್ತದೆ. ನೊಣ ಮತ್ತು ಇತರ ಕೀಟಗಳನ್ನು ನಾಶಮಾಡಲು ಇದು ಬಹಳ ಉಪಯೋಗಕಾರಿ. ಈ ಕ್ರಿಮಿನಾಶಕ ತೈಲವು ಒಳ್ಳೆಯ ಸುವಾಸನೆಯನ್ನು ಹೊಂದಿರುತ್ತದೆ. ಮಾನವ ಜೀವಕ್ಕೆ ಅಪಾಯಕಾರಿಯಾಗಿರುವುದಿಲ್ಲ.

32. ಲಿಗ್ನೋಲೀ ಲಿನೋಲೀ

(ಬರ್ಸೆರಾ ಡೆಲ್ಪಿಚಿಯಾನ: Bursera delpecihana Poiss.)

ವ್ಯಾಪನೆ : ಮೆಕ್ಸಿಕೋ ಈ ಸಸ್ಯವನ್ನು ಬೆಳೆಯುವ ಮೂಲ ದೇಶವಾಗಿದೆ. 1911ರಲ್ಲಿ ಈ ಸಸ್ಯವನ್ನು ಭಾರತದಲ್ಲಿ ಬೆಳೆಯಲು ಪ್ರಾರಂಭಿಸಲಾಯಿತು. ಬೆಂಗಳೂರಿಗೆ ಹತ್ತಿರದಲ್ಲಿರುವ ತಾತಗುಣಿ ಎಸ್ಟೇಟಿನಲ್ಲಿ ಸುಮಾರು 160 ಹೆಕ್ಟೇರ್ ಭೂಮಿಯಲ್ಲಿ ಬರ್ಸೆರಾ ಮರಗಳನ್ನು ಸಾಗುವಳಿ ಮಾಡುತ್ತಿರುವರು. ಕರ್ನಾಟಕದ ಅರಣ್ಯ ವಿಭಾಗ ಮತ್ತು ಬೆಂಗಳೂರಿನ ಅರಣ್ಯ ಸಂಶೋಧನೆ ಪ್ರಯೋಗಾಲಯಗಳು ಈ ಮರಗಳನ್ನು ಪ್ರಯೋಗಾತ್ಮಕವಾಗಿ ಬೆಳೆಯುತ್ತಿರುವರು.

ವರ್ಣನೆ : ಬೂದು ಮಿಶ್ರಿತ ಕಪ್ಪು ತೊಗಟೆಯನ್ನು ಹೊಂದಿದ, ಮಧ್ಯಮ ಗಾತ್ರದ ಮರ. ಪರ್ಯಾಯ ಜೋಡಣೆಯ, ಅಸಮ ಗರಿರೂಪದ, ಒರಟಾಗಿರುವ, ಹೊಳಪಿನ ಎಲೆಗಳು. ಅನೇಕ ಅಂತ್ಯಾರಂಭಿ ಮಾದರಿ ರೆಂಬೆಗಳಿರುವ ಮಿಶ್ರರೀತಿ ಪುಷ್ಪಮಂಜರಿ. ದ್ವಿಲಿಂಗ ಅಥವಾ ಉಭಯಲಿಂಗ, ಅಧೋಶಲಾಕೆಯ ಅಚ್ಚ ಬಿಳಿಯ ಹೂವುಗಳು. ಹೆಂಚು ಹೊದಿಕೆ ರೀತಿ ಜೋಡಣೆಯ, 4-6 ಪುಷ್ಪಪಾತ್ರೆ ಪತ್ರಕಗಳಿರುವ ಚಿಕ್ಕ ಪುಷ್ಪಪಾತ್ರೆ. ಕೂಡುಅಂಚು ಜೋಡಣೆಯ, ಚಿಕ್ಕ 4-6 ಪುಷ್ಪದಳಗಳು. ಗೋಳಾಕಾರದ, ಹಲ್ಲಿನಂತೆ ಏಣುಳ್ಳ ಬಟ್ಟಲು, ಬಟ್ಟಲಿನ ಕೆಳಗೆ ಜೋಡಿಸಿರುವ, ಸಮನಾದ ಕೇಸರ ದಂಡಗಳಿರುವ 8-12 ಕೇಸರಗಳು. ಬಿಡಿ ಬಿಡಿಯಾಗಿ, ಅಂಡಾಕಾರದ, 3-5 ಕೋಣೆಗಳಿರುವ ಪ್ರತಿಯೊಂದು ಕೋಣೆಯಲ್ಲಿ 2 ಅಂಡಕಗಳಿರುವ, ಉಚ್ಚಸ್ಥಾನದ ಅಂಡಾಶಯ. 3-5 ಭಾಗವಾಗಿರುವ ಶಲಾಕಾಗ್ರ ; ಗೋಳಾಕಾರ ಅಥವಾ ಅಂಡಾಕಾರದ ಓಟೆ ಫಲ.

ಉಪಯೋಗಗಳು : ಈ ಮರದ ಅತಿ ಸುವಾಸನೆಯುಳ್ಳ ದಾರು, ಕಾಂಡ ಮತ್ತು ಹಣ್ಣುಗಳಿಂದ ಲಿನೋಲಿ ಸುವಾಸಿತ ತೈಲವನ್ನು ತೆಗೆಯುತ್ತಾರೆ.

ಈ ಮರವು ಐದು ವರ್ಷ ಬೆಳೆದ ನಂತರ ಪ್ರತಿವರ್ಷಕ್ಕೊಮ್ಮೆ ಹಣ್ಣುಗಳನ್ನು ಬಿಡಲು ಪ್ರಾರಂಭಿಸುತ್ತದೆ. ಈ ಹಣ್ಣಿನ ತೊಗಟೆಯನ್ನು ಬಾಷ್ಪೀಕರಿಸಿ ಸುಗಂಧ ತೈಲವಾದ ಮೈಸೂರು ಮೆಕ್ಸಿಕನ್ ಲಿನೋಲಿ ತೈಲವನ್ನು ತಯಾರಿಸುತ್ತಾರೆ. ಇದಕ್ಕೆ ಇಂಡಿಯನ್ ಲೆವೆಂಡರ್ ತೈಲವೆಂದು ಕರೆಯುವರು. ಪಕ್ವವಾದ ಹಣ್ಣುಗಳು ಒಡೆಯಲು ಪ್ರಾರಂಭಿಸಿದ ಸಮಯದಲ್ಲಿ ತೆಗೆದು ತೊಗಟೆಯನ್ನು ಬೇರ್ಪಡಿಸಿ ಬಾಷ್ಪೀಕರಿಸುವರು. ಈ ತೊಗಟೆ ಶೇಕಡಾ 16ರಷ್ಟು ತೈಲವನ್ನು ಕೊಡುತ್ತದೆ. ಭಾರತದಲ್ಲಿ ದಾರು ಕಾಂಡದಿಂದ ತೈಲವನ್ನು ತೆಗೆಯುವುದಿಲ್ಲ. ಈ ತೈಲವು ತಿಳಿ ಲಿಲಿರೋಸ್ ಛಾಯೆಯನ್ನು ಹೊಂದಿದ್ದು ತೆಳ್ಳಗಿರುವುದು. ಇದರಲ್ಲಿ ಮುಖ್ಯವಾಗಿ ಲಿನಾಲೂಲ್ ಮತ್ತು ಲಿನಲಾಯಿಲ್ ಅಸಿಟೇಟ್ ಘಟಕಗಳಿರುತ್ತವೆ. ಈ ಮರದ ಎಲೆಗಳೂ ಸಹಿತ ಸುವಾಸಿತ

ತೈಲವನ್ನು ಹೊಂದಿರುವುದರಿಂದ ಎಲೆಗಳಿಂದ ತೈಲವನ್ನು ತಯಾರಿಸುವ ರೀತಿಯನ್ನು ಸಂಶೋಧನೆ ಮಾಡುವುದು ಅತ್ಯಗತ್ಯ. ಈ ತೈಲದ ಸುವಾಸನೆ ಮಲ್ಲಿಗೆ, ಲಿಲಿಯಾಕ್, ಸುವಾಸನೆಗಳಜೊತೆ ಸುಲಭವಾಗಿ ಬೆರೆಯುವ ಅತಿ ಮುಖ್ಯ ಗುಣವನ್ನು ಹೊಂದಿರುವುದು. ಆದಕಾರಣ ಇದನ್ನು ಹೆಚ್ಚಾಗಿ ಸುಗಂಧಯುಕ್ತ ಅತ್ತರ್, ಸೆಂಟ್, ಮುಖಾಲಂಕಾರ ವಸ್ತುಗಳು ಮತ್ತು ಸುವಾಸಿತ ಸಾಬೂನುಗಳ ತಯಾರಿಕೆಯಲ್ಲಿ ವಿಶೇಷ ಪ್ರಮಾಣದಲ್ಲಿ ಬಳಸುತ್ತಾರೆ. ಈಗ ಸದ್ಯದಲ್ಲಿ ಭಾರತದಲ್ಲಿ ತಯಾರಿಸಿದ ತೈಲವನ್ನು ಸಂಪೂರ್ಣವಾಗಿ ಭಾರತೀಯರೇ ಉಪಯೋಗಿಸುತ್ತಿದ್ದು ಪರದೇಶಗಳಿಗೆ ರಫ್ತು ಮಾಡಲು ತೈಲದ ಪ್ರಮಾಣವು ಸಾಕಾಗುತ್ತಿಲ್ಲ. ಇದಲ್ಲದೆ ಈ ತೈಲವನ್ನು ಕೆಲವು ಆಹಾರ ಪದಾರ್ಥ ಮತ್ತು ಪೇಯಗಳನ್ನು ಸ್ವಾದಿಷ್ಟಗೊಳಿಸಲು ಉಪಯೋಗಿಸುತ್ತಾರೆ.


33. ಮಲ್ಲಿಗೆ

(ಜಾಸ್ಮಿನಮ್ ಪ್ರಭೇದಗಳು)

ವ್ಯಾಪನೆ : ಮಲ್ಲಿಗೆಯನ್ನು ಫ್ರಾನ್ಸ್, ಇಟಲಿ, ಅಲ್ಜೀರಿಯಾ, ಈಜಿಪ್ಟ್, ಮೊರಕ್ಕೊ ರಾಷ್ಟ್ರಗಳು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಎಲ್ಲೆಡೆ ಪ್ರದೇಶಗಳಲ್ಲಿ ಬೆಳೆಯುತ್ತಾರೆ.

ವರ್ಣನೆ : ಅನೇಕ ಕೊಂಬೆಗಳಿದ್ದು ವಿಸ್ತಾರವಾಗಿ ಹಬ್ಬಿರುವ ಪೊದರುಗಳು. ಸಾಮಾನ್ಯವಾಗಿ ಅಭಿಮುಖ ಜೋಡಣೆಯ, ಸರಳ ಅಥವಾ ಸಂಯುಕ್ತವೃಂತಪರ್ಣವಿರುವ ಎಲೆಗಳು. ಕೆಲವುಗಳಲ್ಲಿ ಎಲೆಯ ಕಂಕುಳಲ್ಲಿರುವ ಸಹಾಯಕ ಮೊಗ್ಗುಗಳು ಅಪರೂಪವಾಗಿ ಒಂಟಿಯಾಗಿರುವ ಅಥವಾ ಸಾಮಾನ್ಯವಾಗಿ ಕೊಂಬೆಗಳ ತುದಿಯಲ್ಲಿರುವ ಮಧ್ಯಾರಂಭಿ ರೀತಿಯ ಪುಷ್ಪಮಂಜರಿ. ಆಕರ್ಷಕವಾದ ಸುವಾಸನೆಯುಳ್ಳ, ಸಾಮಾನ್ಯವಾಗಿ ಶ್ವೇತ ವರ್ಣದ, ದ್ವಿಲಿಂಗ, ತ್ರಿಜ್ಯ ಸಮಪಾರ್ಶ್ವತೆಯ, ಅಧೋಶಲಾಕೆ ಸ್ಥಿತಿಯ ಹೂವುಗಳು. 4–9 ದಳಗಳಿದ್ದು ಕೆಳಭಾಗದಲ್ಲಿ ಕೂಡಿಕೊಂಡಿರುವ, ಕೂಡುಅಂಚು ರೀತಿಯ ಜೋಡಣೆಯುಳ್ಳ ಪುಷ್ಪಪಾತ್ರಪತ್ರಕಗಳು. ಸಾಮಾನ್ಯವಾಗಿ ಬಿಳಿ ವರ್ಣದ ಅಥವಾ ಕೆಲವು ಗುಲಾಬಿ ಅಥವಾ ಹಳದಿ ವರ್ಣದ ಕಿರಿದಾದ ಉದ್ದ ಕೊಳವೆ ಅಥವಾ ಆಲಿಕೆಯಾಕಾರದ, 4–12 ದಳಗಳಿದ್ದು ಮೊಗ್ಗಿನಲ್ಲಿ ಹೆಂಚುಹೊದಿಕೆ ರೀತಿಯಲ್ಲಿ ಜೋಡಿಸಿರುವ ಪುಷ್ಪದಳಗಳು. ದಳವೃತ್ತದ ಕೊಳವೆಯ ಮೇಲ್ಭಾಗ ಅಥವಾ ಅಡಿಯಲ್ಲಿ ಅಂಟಿಕೊಂಡಿರುವ, ಕೊರೆಯಾದ ಕೇಸರ ದಂಡದ ಹಿಂಭಾಗದ ಅಡಿಯಲ್ಲಿ ಅಂಟಿಕೊಂಡ ಪರಾಗಕೋಶವುಳ್ಳ ಎರಡು ಕೇಸರಗಳು. ಎರಡು ಸಂಯುಕ್ತ ಶಲಾಕಾಕೋಶಗಳು. ಎರಡು ಕೋಣೆಯುಳ್ಳ ಅಂಡಾಶಯ. ಸಾಮಾನ್ಯವಾಗಿ ಪ್ರತಿ ಕೋಣೆಯಲ್ಲೂ ಎರಡು ಅಂಡಕಗಳುಳ್ಳ ಚಿಕ್ಕ ಶಲಾಕೆ ನಳಿಕೆಯಿರುವ, ಸಾಮಾನ್ಯವಾಗಿ

ಎರಡು ಭಾಗವಾಗಿರುವ ಶಲಾಕಾಗ್ರ ಹೊಂದಿರುವ ಜಾಯಾಂಗ. ಪ್ರತಿಯೊಂದು ಶಲಾಕಾ ಕೋಶದಲ್ಲಿ ಒಂಟಿಯಾಗಿರುವ, ಭ್ರೂಣಾಹಾರವಿಲ್ಲದಿರುವ ಬೀಜಗಳುಳ್ಳ ರಸಫಲ.



ಚಿತ್ರ 31 : ಮಲ್ಲಿಗೆ

ಉಪಯೋಗಗಳು : ಮಲ್ಲಿಗೆ ಹೂವುಗಳಿಂದ ತೆಗೆಯುವ ಸುಗಂಧಯುಕ್ತ ಪರಿಮಳವುಳ್ಳ ತೈಲವು ಇತರ ಸುಗಂಧ ತೈಲಗಳಿಗಿಂತ ಬಹಳ ಅಚ್ಚುಮೆಚ್ಚಿನ ತೈಲವೆಂದು ಪರಿಗಣಿಸಬಹುದು. ಲಭ್ಯವಾಗುವ ಮಲ್ಲಿಗೆ ಜಾತಿಗಳಲ್ಲಿ ಸಣ್ಣ ಜಾಜಿ ಮಲ್ಲಿಗೆ (ಜಾ ಅಫಿಷಿನೇಲ್, ಜಾ. ಗ್ರಾಂಡಿಫ್ಲೋರಮ್) ಹೂವುಗಳು ಈ ತೈಲವನ್ನು ತೆಗೆಯಲು ಅತಿ ಶ್ರೇಷ್ಠವಾದವು. ಹೂವುಗಳನ್ನು ಅರಳಿದ ತಕ್ಷಣ ತೆಗೆದು ಎನ್‌ಫ್ಲರೇಜ್ ಪದ್ಧತಿಯಿಂದ ಎಣ್ಣೆಯನ್ನು ತೆಗೆಯುತ್ತಾರೆ. ಈ ತೈಲವನ್ನು ಪ್ರತ್ಯೇಕ ವಾಗಿ ಅಥವಾ ಇತರ ಸುಗಂಧತೈಲ ಮತ್ತು ದ್ರವ್ಯಗಳ ಜೊತೆಗೆ ಬೆರೆಸಿ ಉಪ ಯೋಗಿಸಬಹುದು. ಊದುಕಡ್ಡಿ, ಸೆಂಟು, ಅತ್ತರ ಮತ್ತಿತರ ಸುವಾಸನೆಯುಳ್ಳ ಪದಾರ್ಥಗಳ ತಯಾರಿಕೆಯಲ್ಲಿ ಬಳಸುತ್ತಾರೆ.

ಇತರ ಪ್ರಭೇದಗಳು

1. ಸಣ್ಣ ಜಾಜಿಮಲ್ಲಿಗೆ (ಜಾ. ಅಫಿಷಿನೇಲ್ : **J. officinale**)

ಈ ಪ್ರಭೇದದ ಮಲ್ಲಿಗೆ ಎಲೆಗಳನ್ನು ವೈದ್ಯಕೀಯ ಚಿಕಿತ್ಸೆಗಾಗಿ ಉಪಯೋಗಿಸುವರು. ಎಲೆಗಳು ರಕ್ತಸ್ರಾವ ಪ್ರತಿಬಂಧಕವಾಗಿದ್ದು ಹಲ್ಲುನೋವು, ದವಡೆ ನೋವು, ಬಾಯಿಯಲ್ಲಿ ಬರುವ ಹುಣ್ಣು ಮತ್ತು ರಕ್ತಸ್ರಾವವನ್ನು ತಡೆಗಟ್ಟಲು ತಿನ್ನಬಹುದಾಗಿದೆ. ಎಲೆಗಳಿಂದ ತೆಗೆದ ತಾಜಾ ರಸವನ್ನು ಬೆರಳುಗಳ ಮಧ್ಯ ಅಥವಾ ಪಾದಗಳಲ್ಲಿ ಉಂಟಾದ ಮೆದು ಆಣಿಗಳನ್ನು ತೆಗೆಯಲು ಸವರುವುದುಂಟು. ಹೂವಿನಿಂದ ತಯಾರಿಸಿದ ಪೋಲಿಸ್ಟ್ ಅಥವಾ ಹೂವುಗಳನ್ನು ಹಿಂಡಿತೆಗೆದ ರಸವನ್ನು ಚರ್ಮ ರೋಗಗಳ ನಿವಾರಣೆಗಾಗಿ ಮತ್ತು ತಲೆನೋವಿನ ಉಪಶಮನಕ್ಕಾಗಿ ಸವರಬಹುದು. ಇನ್ನುಳಿದ ಎಂಟು ಪ್ರಭೇದಗಳು ಈ ಕೆಳಗಿನಂತಿವೆ :


2. ಗುಂಡು ಮಲ್ಲಿಗೆ (ಏಳು ಸುತ್ತಿನ ಮಲ್ಲಿಗೆ) ..
   (ಜಾ. ಸಾಮ್‌ಬಾಕ್; J. sambac Ait)
3. ಸೂಜಿ ಮಲ್ಲಿಗೆ
   (ಜಾ. ಪ್ಯೂಬೆಸೆನ್ಸ್: J. pubescence Wilth.)
4. ಸೂಜಿ ಮಲ್ಲಿಗೆ
   (ಜಾ. ಆರಿಕ್ಯುಲೇಟಂ; J. auriculatum Vahl.)
5. ಹಳದಿ ಜಾಜಿ ಮಲ್ಲಿಗೆ
   (ಜಾ. ಬಿಗ್ನೋನಿಯೇಸಿಯಂ; J. bignoniaceaum Wall.)
6. ನವಮಲ್ಲಿಗೆ
   (ಜಾ. ಆರ್ಬೋರೆಸೆನ್ಸ್; J. arborescence Roxb.)
7. ಮೂಲ ಕೋಲಿಕೆ
   (ಜಾ. ಕಾಲೊಫಿಲ್ಲಮ್: J. calophyllum Wall.)
8. ವಾರ ಮಲ್ಲಿಗೆ
   (ಜಾ. ರಾಟೆಲರಿಯಾನಮ್: J. rottlerianum Wall.)
9. ಕಾಡುಮಲ್ಲಿಗೆ
   (ಜಾ. ಅಂಗಸ್ಟಿಫೋಲಿಯಮ್: J. angustifolium Wall.)

34. ಮೆಲಲ್ಯೂಕ

(ಮೆಲಲ್ಯೂಕ ಲ್ಯೂಕಡೆಂಡ್ರಾನ್ ; Melaleauca leucadendron Linn.)

ವ್ಯಾಪನೆ : ಈ ಮರದ ತವರು ಬರ್ಮಾ, ಮಲಯಾ ಮತ್ತು ಆಸ್ಟ್ರೇಲಿಯಾ ದೇಶಗಳಾಗಿದ್ದು ಭಾರತದ ಕೆಲವು ಉದ್ಯಾನವನಗಳಲ್ಲಿ ಕೆಲವು ಮರಗಳನ್ನು ಮಾತ್ರ ಕಾಣಬಹುದು.

ವರ್ಣನೆ : ಚಿಕ್ಕ ಮರಗಳಲ್ಲಿ ನೇರವಾದ ಕೊಂಬೆಗಳಿದ್ದು ಸುಮಾರು 14 ಮೀಟರ್ ಎತ್ತರವಾದ ಮರಗಳಲ್ಲಿ ಬಗ್ಗಿರುವ ಕೊಂಬೆಗಳಿರುವ ನಿತ್ಯಹಸುರು ಮರ. ಬಿಳಿಯ ಪದರುಗಳಾಗಿ ಸುಲಭವಾಗಿ ತೊಗಟೆಯಿಂದ ಬೇರ್ಪಡಿಕೆಯಾಗುವ ಕಾಂಡ. ದಪ್ಪ ಗ್ರಂಥಿಗಳು, ಸಮಾಂಚಿನ ಸರಳ ಅಭಿಮುಖ ಜೋಡಣೆ, ದೀರ್ಘವೃತ್ತ ಅಥವಾ ಈಟಿಯಾಕಾರದ, ಎಲೆಫಲಕದ ತುದಿ ಮತ್ತು ಬುಡ ಚೂಪಾಗಿರುವ ಎಲೆಗಳು. ಸುಮಾರು 5–15 ಸೆಂಟಿಮೀಟರ್ ಉದ್ದವಿರುವ ಪುಷ್ಪಮಂಜರಿ. ವೃಂತದ ಮೇಲೆ ನಿಕಟವಾಗಿ ಜೋಡಿಸಿರುವ ಬಿಳಿಯ ಹೂವುಗಳನ್ನು ಹೊಂದಿದ ಪುಷ್ಪಮಂಜರಿ.



ಚಿತ್ರ 32 : ಮೆಲಲ್ಯೂಕ

ದ್ವಿಲಿಂಗ ತ್ರಿಜ್ಯಸಮಪಾರ್ಶ್ವ, ಅಧೋಶಲಾಕೆ ಸ್ಥಿತಿಯ, ಪುಷ್ಪ ಪಾತ್ರೆಯ ಸುತ್ತ ಬಟ್ಟಲಾಕಾರವಾಗಿರುವ ಹೂವುಗಳು. ಹೆಂಚುಹೊದಿಕೆ ರೀತಿ ಜೋಡಣೆಯ 5 ಸಂಯುಕ್ತ ಪುಷ್ಪಪಾತ್ರ ಪತ್ರಕಗಳ ಗೋಳಾಕಾರದ ಉದುರದಂತಿರುವ ಪುಷ್ಪಪಾತ್ರೆ. ಹೆಂಚು ಹೊದಿಕೆ ರೀತಿ ಜೋಡಣೆಯ 5 ಪುಷ್ಪ ದಳಗಳನ್ನು ಹೊಂದಿದ ಉದುರುವ ದಳವೃತ್ತ. ಅನೇಕ ಕೇಸರಗಳು 5 ಗುಂಪುಗಳಾಗಿ ಪುಷ್ಪಾಕ್ಷದ ಅಂಚಿನ ಮೇಲೆ ಪುಷ್ಪದಳಗಳಿಗೆ ಅಭಿಮುಖ ಜೋಡಿಸಿರುವ, ಹೊರಗಡೆಗೆ ಎದ್ದು

ಕಾಣುವ, ಪ್ರವರ್ತನ ರೀತಿಯ ಪರಾಗಕೋಶಗಳಿರುವ ಕೇಸರ ಮಂಡಲ. 5 ಸಂಯುಕ್ತ ಅಂಡಕೋಶಗಳಿರುವ, 5 ಕೋಣೆಗಳಿದ್ದು ಪ್ರತಿಯೊಂದು ಕೋಣೆಯಲ್ಲಿ ಅನೇಕ ಅಂಡಕಗಳು, ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಪುಷ್ಪಪಾತ್ರೆ ಪತ್ರಕಗಳಿಂದ ಮುಚ್ಚಿಕೊಂಡಿರುವ ಕೆಳ ಅಂಡಾಶಯ. ಸಂಪುಟಕ ಮಾದರಿ ಫಲ.

ಉಪಯೋಗಗಳು : ಈ ಮರದ ಎಲೆಗಳಿಂದ ಲಭ್ಯವಾಗುವ ತೈಲವನ್ನು ಕಾಜುಪ್ರಟ್ ತೈಲವೆಂದು ಕರೆಯುವರು. ಎಲೆಗಳನ್ನು ನೇರವಾಗಿ ನೀರು ಮತ್ತು ಆವಿ ರೀತಿಯಲ್ಲಿ ಬಾಷ್ಪೀಕರಿಸಿ ಈ ತೈಲವನ್ನು ತಯಾರಿಸುವರು. ಈ ತೈಲವು ಬಣ್ಣ ರಹಿತವಾಗಿರಬಹುದು ಅಥವಾ ತಿಳಿ ಹಳದಿ ಅಥವಾ ತಿಳಿ ಹಸುರು ಬಣ್ಣ ಹೊಂದಿರ ಬಹುದು. ಬಾಷ್ಪೀಕರಣದನಂತರ ಪತ್ರಹರಿತ್‌ದ ಸ್ವಲ್ಪ ಅಂಶವು ತೈಲದಲ್ಲಿ ಸೇರಿರುವುದರಿಂದ ತೈಲವು ತಿಳಿ ಹಸುರಾಗಿರುತ್ತದೆ. ಈ ತೈಲದಲ್ಲಿ ಶೇಕಡಾ 50–65 ರಷ್ಟು ಸೈನಿಯೋಲ್ ಮುಖ್ಯ ಘಟಕವಿರುವುದರಿಂದ ಇದಕ್ಕೆ ಒಂದು ವಿಧವಾದ ಕರ್ಪೂರದ ಸುವಾಸನೆ ಇರುವುದು. ಇದಲ್ಲದೆ ಟರ್ಪಿನಾಲ್ ಮತ್ತು ಇದರ ಎಸ್ಟರ್‌ಗಳು ಸಹ ಇರುತ್ತವೆ. ಈ ತೈಲವನ್ನು ಬೆಳಕು ಬೀಳದಂತೆ ಇರುವ ಪಾತ್ರೆಗಳಲ್ಲಿ ಜಾಗ್ರತೆ ಯಾಗಿ ಕಾಯ್ದಿರಿಸಬೇಕು. ಈ ತೈಲವು ಒಂದು ರೀತಿಯ ತೀಕ್ಷ್ಣ ಸುವಾಸನೆ ಮತ್ತು ನಿಧಾನವಾಗಿ ಆವಿಯಾಗುವ ಗುಣ ಹೊಂದಿರುವುದರಿಂದ ಇದನ್ನು ಕೀಟನಾಶಕ ಹಾಗೂ ಹೇನು, ತಿಗಣೆ, ನೊಣಗಳನ್ನು ನಾಶಮಾಡುವುದಕ್ಕಾಗಿ ಉಪಯೋಗಿಸುವರು. ಅಲ್ಲದೆ, ಸೊಳ್ಳೆ ನಿವಾರಕ ಗುಣ ಹೊಂದಿರುವುದರಿಂದ ಸೊಳ್ಳೆಗಳನ್ನು ನಾಶಮಾಡಲು ಉಪಯೋಗಿಸುವರು.

ಕಾಜಂಪುಟ್ ತೈಲವನ್ನು ಸಾಕಷ್ಟು ಪ್ರಮಾಣದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಉಪಯೋಗಿಸುವರು. ಈ ತೈಲವನ್ನು ಜೀರ್ಣಕಾರಿಯಾಗಿ ಮತ್ತು ಸ್ನಾಯು ಸೆಳೆತ ವನ್ನು ಕಡಮೆ ಮಾಡಲು ಉಪಯೋಗಿಸುತ್ತಾರೆ. ಕರುಳಿನ ಕೊಳೆತದಿಂದ ಬರುವ ಸಂಧಿವಾತವನ್ನು ಉಪಶಮನಗೊಳಿಸಲು ಇದನ್ನು ಸೇವಿಸುವುದುಂಟು. ಟರ್ಪೆಂಟೈನ್ ಮತ್ತು ಆಲಿವ್ ತೈಲದ ಜೊತೆ ಕಾಜುಪುಟ್ ತೈಲವನ್ನು ಬೆರೆಸಿ ಬಾವು ಮತ್ತು ಕೀಲುಗಳಲ್ಲಿ ಬರುವ ನೋವುಗಳ ನಿವಾರಣೆಗೆ ಮುಲಾಮಾಗಿ ಉಪಯೋಗಿಸುವರು.

35. ರೋಸ್ ಮೇರಿ

(ರೋಸ್‌ಮೇರಿನಸ್ ಅಫಿಶಿನಾಲಿಸ್; Rosemarinus officinalis Linn.)

ವ್ಯಾಪನೆ : ಈ ಸಸ್ಯದ ತವರು ಮೆಡಿಟರೇನಿಯನ್ ಪ್ರದೇಶ. ಇದು ಹೆಚ್ಚು ಬಿಸಿಲು ಮತ್ತು ಒಣ ಹವೆಯ ಗುಡ್ಡಗಾಡುಗಳ ಇಳಿಜಾರು ಪ್ರದೇಶಗಳಲ್ಲಿ ಮುಖ್ಯವಾಗಿ ಸ್ಪೇನ್, ಡಾಲ್‌ಮಟಿಯಾ, ಟ್ಯೂನಿಸಿಯಾ, ಮೊರಕ್ಕೊ ಮತ್ತು ದಕ್ಷಿಣ ಫ್ರಾನ್ಸ್

ದೇಶಗಳಲ್ಲಿ ಹೆಚ್ಚಾಗಿ ಬೆಳೆಯುವುದು ಕಂಡುಬರುತ್ತದೆ. ಯೂರೋಪಿನ ಕೆಲವು ಪ್ರದೇಶಗಳಲ್ಲಿ ಇದನ್ನು ಇತ್ತೀಚೆಗೆ ಬೆಳೆಯುತ್ತಿದ್ದಾರೆ. ದಕ್ಷಿಣ ಭಾರತದಲ್ಲಿ ಯಾರಕಾಡ್ ಶಿವರಿ ಬೆಟ್ಟಗಳ ಮೇಲೆ ಇದನ್ನು ಪ್ರಯೋಗಾತ್ಮಕವಾಗಿ ಬೆಳೆಸುವುದರಲ್ಲಿ ಸಾಕಷ್ಟು ಸಫಲರಾಗಿದ್ದಾರೆ.



ಚಿತ್ರ 33 : ರೋಸ್ ಮೇರಿ

ವರ್ಣನೆ : ಎರಡು ಮೀಟರ್ ಎತ್ತರ ಬೆಳೆಯಬಹುದಾದ ಚಿಕ್ಕನಿತ್ಯಹಸುರು ಪೊದರು. ವೃಂತಪರ್ಣ ರಹಿತ ಸರಳ ಸುತ್ತು ಜೋಡಣೆಯ,ಸುಮಾರು 2.5 ಸೆಂಟಿಮೀಟರ್ ಉದ್ದ, ಸುವಾಸನೆಯುಕ್ತ ಎಲೆಗಳು. ಎಲೆ ಕಂಕುಳಲ್ಲಿ ಕೂಟಚಕ್ರಕ ಪುಷ್ಪ ಮಂಜರಿ. ತೊಟ್ಟಿಲ್ಲದ, ಪುಷ್ಪಪತ್ರಕವಿರುವ, ಪೂರ್ಣ ದ್ವಿಲಿಂಗ ಅಧೋಶಲಾಕೆಯ ನೀಲಿ ಹೂವುಗಳು. 5 ಪುಷ್ಪಪಾತ್ರಕಗಳು, ಸಂಯುಕ್ತ ಗಂಟೆಯಾಕಾರದ ಪುಷ್ಪಪಾತ್ರೆ. 5 ಸಂಯುಕ್ತ ತುಟಿಯಂತೆ ಇಪ್ಪಾಲಾಗಿರುವ ಹೆಂಚುಹೊದಿಕೆ ರೀತಿ ಜೋಡಿಸಿರುವ ಪುಷ್ಪದಳಗಳು. 4 ದ್ವಿದೀರ್ಘ, ದಳಾರೂಹ, ಒಳಗಡೆಗೆ ತಿರುಗಿದ ಪರಾಗಕೋಶವುಳ್ಳ ಕೇಸರಗಳು. ಎರಡು ಸಂಯುಕ್ತ ಅಂಡಕೋಶಗಳುಳ್ಳ, ಉಚ್ಚಸ್ಥಾನದ ಅಂಡಾಶಯದಲ್ಲಿ ಮೊದಲು ಎರಡು ಕೋಣೆಗಳಿದ್ದು ಅನಂತರ 4 ಕೋಣೆಗಳಾಗಿ, ಪ್ರತಿಕೋಣೆಯಲ್ಲೂ ಒಂದೊಂದು ಅಕ್ಷಕ ಅಂಡಾಕಾಧಾರಕ್ಕೆ ಅಂಟಿರುವ ಕೆಳಶಲಾಕೆಯುಳ್ಳ ಜಾಯಾಂಗ. ಕರಟಕಾಯಿ ಫಲ.

ಉಪಯೋಗಗಳು : ಎಲೆ ಮತ್ತು ಹೂವುಗಳನ್ನು ಬಾಷ್ಪೀಕರಿಸಿ ರೋಸ್ ಮೇರಿ ಸುಗಂಧತೈಲವನ್ನು ತೆಗೆಯುತ್ತಾರೆ. ಈ ತೈಲವು ವರ್ಣರಹಿತ ಅಥವಾ ತಿಳಿ

ಹಳದಿ. ಸುಮಧುರವಾಸನೆಯನ್ನು ಹೊಂದಿರುತ್ತದೆ. ಅಲ್ಲದೆ ಹೆಚ್ಚುಕಡಮೆ ಕರ್ಪೂರದ ರುಚಿಯನ್ನು ಹೋಲುತ್ತದೆ. ಈ ತೈಲವು ಬೋರ್ನಿಯೋಲ್, ಬೋರ್ನಿಲ್, ಎಸಿಟೇಟ್, ಕ್ಯಾಂಫರ್, ಸಿನೋಲಿ, ಆಲ್ಫಪಿನ್ನಿ ಮತ್ತು ಕ್ಯಾಂಫಿನಿ ಮೊದಲಾದ ಘಟಕಗಳನ್ನು ಹೊಂದಿರುತ್ತದೆ.

ಮುಖ್ಯವಾಗಿ ರೋಸ್‌ಮೇರಿ ತೈಲವನ್ನು ಸ್ನಾನಕ್ಕೆ ಉಪಯೋಗಿಸುವ ಸಾಬೂನು ಮತ್ತು ಯು-ಡಿ-ಕೋಲನ್‌ಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಅನೇಕ ಮಾಂಸ ಪದಾರ್ಥಗಳು, ರಸಾಯನ, ಸಾಂಬಾರು, ಚಟ್ನಿ ಮೊದಲಾದುವುಗಳನ್ನು ಸುವಾಸಿತಗೊಳಿಸಲು ಮತ್ತು ಸ್ವಾದಿಷ್ಟಗೊಳಿಸಲು ಉಪಯೋಗಿಸುತ್ತಾರೆ. ಮನೆಯ ಕೋಣೆಗಳನ್ನು ಸುವಾಸಿತಗೊಳಿಸಲು ಉಪಯೋಗಿಸುವ ಪದಾರ್ಥಗಳಲ್ಲಿ ಇದನ್ನು ಉಪಯೋಗಿಸುತ್ತಾರೆ.

ರೋಸ್‌ಮೇರಿ ತೈಲವು ಕೆಲವು ಔಷಧಿಯುಕ್ತ ಉಪಯೋಗಗಳನ್ನು ಹೊಂದಿದೆ. ಮುಖ್ಯವಾಗಿ ಅಜೀರ್ಣ ನಿವಾರಕವಾಗಿ ಹಾಗೂ ತಲೆಗೆ ಉಪಯೋಗಿಸುವ ಶಾಂಪೂ ಮೊದಲಾದವುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

36. ಲವಂಗ

(ಸೈಜಿಜಿಯಂ ಆರೊಮಾಟಿಕಂ ; Syzygium aromaticum Merr. L.M. Perry)

ವ್ಯಾಪನೆ : ಲವಂಗದ ಮರಗಳ ತವರು ಮೊಲಕ್ಕಾ ದ್ವೀಪಗಳು. ಆದರೆ ಇತ್ತೀಚೆಗೆ ಉಷ್ಣವಲಯದ ಸಾಕಷ್ಟು ಭಾಗಗಳಲ್ಲಿ ಮರಗಳನ್ನು ಬೆಳೆಸಲಾಗುತ್ತಿದೆ. ಜಾಂಜಿಬಾರ್ ಮತ್ತು ಪೆಂಬಾ ದ್ವೀಪಗಳಲ್ಲಿ ಇದನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಿದ್ದು ಜಗತ್ತಿನ ಒಟ್ಟು ಇಳುವರಿಯಲ್ಲಿ ಸುಮಾರು ಶೇಕಡಾ 80 ಕ್ಕಿಂತ ಹೆಚ್ಚು ಪ್ರಮಾಣದ ಲವಂಗವನ್ನು ಈ ದ್ವೀಪಗಳೇ ಪೂರೈಕೆ ಮಾಡುತ್ತವೆ. ಭಾರತದಲ್ಲಿ ಈ ಮರಗಳನ್ನು ಕೇರಳ ಮತ್ತು ನೀಲಗಿರಿ ಪ್ರದೇಶಗಳ ತೋಟಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೆಳೆಸಲಾಗಿದೆ.

ವರ್ಣನೆ : ಇದು ಸುಮಾರು 5–7 ಮೀಟರ್ ಮತ್ತು ಕೆಲವು ಪ್ರದೇಶಗಳಲ್ಲಿ 13 ಮೀಟರ್ ನೇರಕ್ಕೆ ಬೆಳೆಯುವ ನಿತ್ಯಹಸುರು ಮರ ಅಥವಾ ಪೊದರು ದಾರು ರೀತಿಯ ಕಾಂಡ. ವೃಂತಪರ್ಣವಿಲ್ಲದ ಬಲೆಯಾಕಾರದ ತುದಿಯಲ್ಲಿ ಚೂಪಾಗಿರುವ ನಿತ್ಯಹಸುರು, ಗ್ರಂಥಿ ಚುಕ್ಕೆಗಳನ್ನು ಹೊಂದಿದ, ತೊಗಲಿನಂತಹ, ಸಮಅಂಚಿನ, ಸರಳವಾದ ಅಭಿಮುಖ ಜೋಡಣೆಯ, ಉಪಅಂಚಿನಲ್ಲಿರುವ ನಾಳಗಳುಳ್ಳ ಎಲೆಗಳು. ಮಧ್ಯಾರಂಭಿ ಪುಷ್ಪಮಂಜರಿ. ದ್ವಿಲಿಂಗ ತ್ರಿಜ್ಯ ಸಮಪಾರ್ಶ್ವ, ಅಧೋಶಲಾಕೆಯ ಚಿಕ್ಕ ಹೂವುಗಳು. ಅಂಡಾಶಯದ ಮೇಲಿರುವ ಉದುರದ ತ್ರಿಕೋಣಾಕಾರದ

ಬಿಡಿಯ ನಾಲ್ಕು ಚಿಕ್ಕ ಪುಷ್ಪಪಾತ್ರಪತ್ರಕಗಳು. ಬಿಡಿಯಾಗಿ ಹೆಂಚುಹೊದಿಕೆ ಜೋಡಣೆಯಲ್ಲಿ ಜೋಡಿಸಿರುವ 4–8 ಪುಷ್ಪದಳಗಳು. ಅನೇಕ ಬಿಡಿಯಾದ ಕೇಸರಗಳು. ಉದ್ದವಾಗಿ ಸೀಳುವ, ಪ್ರವರ್ತನ ಪರಾಗ ಕೋಶಗಳು. ಕೆಳಭಾಗದ ಒಂದು ಕೋಣೆಯ ಉದ್ದನೆ ಅಂಡಾಶಯ. ದಟ್ಟ ನೇರಳೆ ಅಥವಾ ಹೆಚ್ಚು ಕಡಮೆ ಕಪ್ಪು ವರ್ಣದ, ಬಟಾಣಿ ಕಾಳಿನಷ್ಟು ದೊಡ್ಡ ಬೀಜವನ್ನು ಹೊಂದಿದ, ಗೋಳಾಕಾರದ ಫಲ.



ಚಿತ್ರ 34 : ಲವಂಗ

ಉಪಯೋಗಗಳು : ಅರಳದೇ ಇರುವ ಈ ಸಸ್ಯದ ಮೊಗ್ಗುಗಳನ್ನು ಲವಂಗ ಎಂದು ಕರೆಯುತ್ತಾರೆ. ಇವುಗಳನ್ನು ಒಣಗಿಸಿ ದಿನಬಳಕೆಯಲ್ಲಿ ಮಸಾಲೆ ಪದಾರ್ಥವಾಗಿ ಉಪಯೋಗಿಸುತ್ತಾರೆ. ಲವಂಗದಿಂದ ಲಭ್ಯವಾಗುವ ತೈಲವನ್ನು ಲವಂಗದೆಣ್ಣೆ ಎಂದು ಕರೆಯುತ್ತಾರೆ.

ಲವಂಗದ ಹೂವಿನ ಪುಷ್ಪಪಾತ್ರೆಯು ತಿಳಿಗುಲಾಬಿ ವರ್ಣಕ್ಕೆ ತಿರುಗಿದಾಗ ಹೂವಿನ ಮೊಗ್ಗುಗಳನ್ನು ಕೈಯಿಂದಲೇ ಆಯ್ದುಕೊಂಡು ಬಿಸಿಲಿನಲ್ಲಿ ಅಥವಾ ಇಟ್ಟಿಗೆ ಒಲೆಗಳ ಮೇಲೆ ಕಂದು ವರ್ಣಕ್ಕೆ ಬರುವವರೆಗೆ ಒಣಗಿಸುತ್ತಾರೆ. ಲವಂಗವು ಅತೀ ಮುಖ್ಯವಾದ ಮಸಾಲೆಗಳಲ್ಲೊಂದಾಗಿದ್ದು ಹೆಚ್ಚಿನ ಸುವಾಸನೆ ಮತ್ತು ರುಚಿಯನ್ನು ಹೊಂದಿರುತ್ತದೆ. ಈ ಕಾರಣದಿಂದಾಗಿ ಲವಂಗವನ್ನು ಸಾರು ಉಪ್ಪಿನಕಾಯಿ, ಮಿಠಾಯಿ, ಮಾಂಸದಿಂದ ತಯಾರಿಸಿದ ಕೆಚಪ್‌ಗಳು ಮತ್ತು ಸಾಂಬಾರು, ಗೊಜ್ಜುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಲವಂಗವನ್ನು ಉಸುರಿನ

ದುರ್ವಾಸನೆಯನ್ನು ಹೋಗಲಾಡಿಸಲು ಮೆಲ್ಲುತ್ತಾರೆ. ಲವಂಗವನ್ನು ವೀಳ್ಯದೆಲೆಯಲ್ಲಿ ಹಾಕಿ ಬೀಡಾ ಕಟ್ಟುತ್ತಾರೆ. ಇಂಡೋನೇಶಿಯಾದಲ್ಲಿ ಲವಂಗದ ಚೂರುಗಳನ್ನು ವಿಶೇಷ ತರಹದ ಸಿಗರೇಟ್‌ಗಳ ತಯಾರಿಕೆಯಲ್ಲಿ ತಂಬಾಕಿನ ಜೊತೆಯಲ್ಲಿ ಬೆರೆಸಿ ಉಪಯೋಗಿಸುತ್ತಾರೆ.

ಲವಂಗದ ಮೊಗ್ಗುಗಳು ಶೇಕಡಾ 15–18ರಷ್ಟು ಲವಂಗದ ಎಣ್ಣೆಯನ್ನು ನೀಡುತ್ತವೆ. ಪ್ರಸಿದ್ಧವಾದ ಸುಗಂಧಯುಕ್ತ ತೈಲಗಳಲ್ಲಿ ಲವಂಗದ ಎಣ್ಣೆಯೂ ಸಹ ಪ್ರಮುಖವಾದುದೆಂದು ಪರಿಗಣಿಸಲಾಗಿದೆ. ವರ್ಣರಹಿತ ಅಥವಾ ಹಳದಿಬಣ್ಣದ ಎಣ್ಣೆಯು ದಿನ ಕಳೆದಂತೆ ಕಪ್ಪಾಗುತ್ತ ಹೋಗುತ್ತದೆ. ಈ ಎಣ್ಣೆಯು ಅಧಿಕ ಘಾಟು ವಾಸನೆ ಬೀರುತ್ತದೆ.

ಲವಂಗದ ತೊಟ್ಟು ಮತ್ತು ಎಲೆಗಳಿಂದ ಕೆಲವು ಸುಗಂಧ ತೈಲಗಳನ್ನು ತೆಗೆಯುತ್ತಾರೆ. ಆದರೆ ಈ ತೈಲಗಳು ಹೆಚ್ಚಾಗಿ ಬಳಕೆಯಲ್ಲಿರುವುದಿಲ್ಲ. ಈ ಮೂರು ತರಹದ ಸುಗಂಧ ಎಣ್ಣೆಗಳನ್ನು ಆಯಾ ಭಾಗದ ಬಾಷ್ಪೀಕರಣದ ಮೂಲಕ ತೆಗೆಯುವರಲ್ಲದೆ ಈ ಮೂರು ಎಣ್ಣೆಗಳೂ ಯುಜಿನಾಲ್ ಘಟಕವನ್ನು ಹೊಂದಿರುತ್ತವೆ.

ಲವಂಗದ ಎಣ್ಣೆಯನ್ನು ವಿವಿಧ ಆಹಾರ ಪದಾರ್ಥಗಳನ್ನು ಸುವಾಸಿತ ಮತ್ತು ಸ್ವಾದಿಷ್ಟಗೊಳಿಸಲು ಹಾಗೂ ಬಾಯಿ ಮುಕ್ಕಳಿಸಲು ಉಪಯೋಗಿಸುವರು. ಅತ್ತರ್, ಸಾಬೂನು, ಸ್ನಾನದ ನೀರು ಇತ್ಯಾದಿಗಳನ್ನು ಸುವಾಸಿತಗೊಳಿಸಲು ಈ ಎಣ್ಣೆಯನ್ನು ಬಳಸುವರು. ಲವಂಗದ ಮೊಗ್ಗು, ಹೂವಿನ ತೊಟ್ಟು ಮತ್ತು ಎಲೆಗಳಿಂದ ತಯಾರಿಸಿದ ಎಣ್ಣೆಯನ್ನು ಯುಜಿನಾಲ್ ಘಟಕವನ್ನು ಸಂಸ್ಕರಿಸಲು ಉಪಯೋಗಿಸುವುದುಂಟು. ಎಲೆಗಳಿಂದ ಪಡೆದ ಎಣ್ಣೆಯು ಸುಮಾರು ಶೇಕಡಾ 90–95ರಷ್ಟು ಯುಜಿನಾಲ್ ಘಟಕವನ್ನು ಹೊಂದಿರುವ ಕಾರಣ ಈ ಎಣ್ಣೆಯು ಯುಜಿನಾಲ್ ಸಂಸ್ಕರಿಸಲು ಇತರ ಎಣ್ಣೆಗಳಿಗಿಂತ ಒಳ್ಳೆಯದು. ಸುಪ್ರಸಿದ್ಧ ಸುವಾಸಿತ ತೈಲ ವೆನಿಲಾ ತಯಾರಿಸಲು ಯುಜಿನಾಲ್‌ನ್ನು ಉಪಯೋಗಿಸುವರಲ್ಲದೇ ಕೆಲವು ಸೆಂಟುಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ.

ಲವಂಗದ ಎಣ್ಣೆಯನ್ನು ಅನೇಕ ವೈದ್ಯಕೀಯ ಚಿಕಿತ್ಸೆಗಾಗಿ ಬಳಸಬಹುದು. ಮುಖ್ಯವಾಗಿ ಸ್ನಾಯುಗಳ ಸೆಳೆತವನ್ನು ಕಡಮೆಮಾಡಲು, ಹಸಿವನ್ನು ಹೆಚ್ಚಿಸಲು, ಹೊಟ್ಟೆ ಉಬ್ಬರವನ್ನು ಉಪಶಮನಗೊಳಿಸಲು ಉಪಯೋಗಿಸುವರು. ಚರ್ಮದ ತುರಿಕೆಯನ್ನು ಸ್ವಲ್ಪಮಟ್ಟಿಗೆ ಕಡಮೆಮಾಡುವುದಕ್ಕೂ ಸಹ ಉಪಯೋಗಿಸುತ್ತಾರೆ. ಪೂತಿನಾಶಕ ಮತ್ತು ಬ್ಯಾಕ್ಟೀರಿಯಾ ನಿವಾರಕ ಗುಣಗಳನ್ನು ಹೊಂದಿರುವ ಕಾರಣ ಇದನ್ನು ಕೆಲವು ಔಷಧಗಳ ತಯಾರಿಕೆಯಲ್ಲಿ ಬಳಸುವರು. ಹಲ್ಲುನೋವಿನ ಉಪಶಮನಕ್ಕಾಗಿ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಾರೆ. ಪ್ರಯೋಗಾಲಯದಲ್ಲಿ ಕೆಲವು

ರಾಸಾಯನಿಕ ರಂಗುಗಳ (ಸ್ಟೈಯಿನ್) ತಯಾರಿಕೆಯಲ್ಲಿ, ಪಾರದರ್ಶಕ ಸ್ಲೈಡ್‌ಗಳನ್ನು ಸ್ವಚ್ಛಮಾಡಲು ಈ ಎಣ್ಣೆಯನ್ನು ವಿಶೇಷವಾಗಿ ಬಳಸುತ್ತಾರೆ.

37. ಲಾಮಂಚ

(ದಪ್ಪಸಜ್ಜೆ ಹುಲ್ಲು)

[ವಿಟಿವೆರಿಯ ಜಿಜಾನಿಯಾಯಿಡಿಸ್; Vitiveria zizanioides (Linn.)Nash.]


ವ್ಯಾಪನೆ : ಲಾಮಂಚವು ನದೀ ತೀರದ ಪ್ರದೇಶಗಳಲ್ಲಿ ಜವುಗು ಭೂಮಿಯಲ್ಲಿ ಬೆಳೆಯುತ್ತದೆ. ಭಾರತದಲ್ಲಿ ಕರ್ನಾಟಕ, ಆಂಧ್ರ, ಅಸ್ಸಾಮ್, ಬಿಹಾರ, ಪಂಜಾಬ್, ಗುಜರಾತ್, ಮಹಾರಾಷ್ಟ್ರ, ಕೇರಳ ಮತ್ತು ಪೂರ್ವ ಗೋದಾವರಿ ಪ್ರದೇಶಗಳಲ್ಲಿ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಗುವಳಿ ಮಾಡುತ್ತಾರೆ.

ವರ್ಣನೆ : ಶಿಫಾವೃಂತವು ದಪ್ಪ, ಒರಟಾದ, ಟೊಳ್ಳಾದ, ಅಂತರ ಗಿಣ್ಣುಗಳಿರುವ, ಕಾಂಡಗಳನ್ನು ಹೋಂದಿದ ಬಹುಸಾಂವತ್ಸರಿಕ ಶಾಕ. ತೊಟ್ಟಿಲ್ಲದ, ಎಳೆಯುದಾಗಿರುವ ಎಲೆಯ ಬುಡದಲ್ಲಿ ತೆಳುಪೊರೆ ಇದ್ದು ಕೆಳಗಿನ ಎಲೆಗಳ ತೆಳುಪೊರೆಯು ಸಂಕುಚಿತಗೊಂಡಿರುವ, ಸರಳ ದ್ವಿಗುಣಿತ ರೀತಿಯ ತುದಿ ಹೊಂದಿರುವ, ಪರ್ಯಾಯ ಜೋಡಣೆಯ, ಕಡಮೆ ಅಗಲವುಳ್ಳ, ಸಮಾನಾಂತರ ನರವಿನ್ಯಾಸವುಳ್ಳ ಎಲೆಗಳು. ನೇರವಾಗಿರುವ ಪುಷ್ಪಮಂಜರಿ ವೃಂತದ ಮೇಲೆ ಅನೇಕ ಸುತ್ತುಗಳಲ್ಲಿ ಜೋಡಿಸಿರುವ ತೊಟ್ಟಿರುವ ಕಿರುಪುಷ್ಪಗುಚ್ಛಗಳಿರುವ ಸರಳ ಅಂತ್ಯಾರಂಭಿ ಮಿಶ್ರವಾದರಿ ಪುಷ್ಪಮಂಜರಿ. ಪ್ರತಿಯೊಂದು ಅಂತ್ಯಾರಂಭಿ ಪುಷ್ಪಮಂಜರಿ ವೃಂತದ ಮೇಲೆ ಜೋಡಿಯಾಗಿರುವ ಕಿರುಗೊಂಚಲುಗಳಲ್ಲಿ ಒಂದು ನಿರ್ವೃಂತವಾಗಿದ್ದು ದ್ವಿಲಿಂಗ ಹೂವುಗಳನ್ನು ಹೊಂದಿರುತ್ತದೆ. ಇನ್ನೊಂದು ವೃಂತವನ್ನು ಹೊಂದಿದ್ದು ಏಕಲಿಂಗ (ಗಂಡು) ಹೂವುಗಳನ್ನು ಹೊಂದಿರುತ್ತದೆ. ಪ್ರತಿ ಕಿರುಗೊಂಚಲಿನಲ್ಲಿ ಎರಡು ಸಮಾನವಾದ ಒರಟುಸುಂಕಗಳಲ್ಲಿ ಮೇಲ್ಭಾಗದ ಸುಂಕ ಮೊನಚು, ದೋಣಿಯಾಕಾರ; ಕೆಳಭಾಗದ ಸುಂಕ ದುಂಡಗಿರುತ್ತದೆ.

ಎರಡು ನರಗಳನ್ನು ಹೊಂದಿದ ಪೊರೆಯಂತಹ ಊಬು ಸೂಕ್ಷ್ಮ ಹಲ್ಲಿನಂತಹ ಅಂಚುಳ್ಳದ್ದು. ಇದರ ತುದಿಯಲ್ಲಿ ಮೊನಚು ತುದಿ ಇರುತ್ತದೆ. ಪೇಲಿಯಾ ಚಿಕ್ಕದು ; ಹೂವುಗಳನ್ನು ಮುಚ್ಚಿರುತ್ತದೆ. ಹೂವಿನ ಕ್ಷೀಣವಾದ ಎರಡು ಲಾಡಿಕ್ಯೂಲ್‌ಗಳು ಪೊರೆಯಂತಿರುತ್ತವೆ. ಪ್ರವರ್ತನ ರೀತಿ ಪರಾಗ ಕೋಶದ 3 ಕೇಸರಗಳು ; ಉಚ್ಚಸ್ಥಾನದ 3 ಸಂಯುಕ್ತ ಅಂಡಕೋಶಗಳಲ್ಲಿ ಒಂದು ಕೋಣೆ, ಒಂದು ನೇರ ಪ್ರಕಾಶೋನ್ಮುಖಿ ಅಂಡಕ. ಸಾಮಾನ್ಯವಾಗಿ 2 ಶಲಾಕೆಯ ಜಾಯಾಂಗ. ತೊಟ್ಟಿರುವ ಕಿರುಪುಷ್ಪಮಂಜರಿಯ ಹೊರಭಾಗ ಸಂಕುಚಿತ. ತುಂಬಾ ತೆಳುವಾದ ಪೊರೆಯಂತಹ

ಹೊಟ್ಟುಗಳಿರುತ್ತವೆ. ಅಲ್ಲದೆ ಇದರ ಊಬುಗಳಿಗೆ ಮೊನಚುತುದಿ ಇರುವುದಿಲ್ಲ. ಕಿರುಪುಷ್ಪಮಂಜರಿಯಲ್ಲಿ ಬರಿ ಗಂಡು ಹೂವುಗಳಿರುತ್ತವೆ. ಒಣ, ಒಡೆಯದ, ಒಂದೇ ಬೀಜದ ಕ್ಯಾರಿಯೋಪ್ಸಿಸ್ ಫಲ.

ಉಪಯೋಗಗಳು : ಇದರ ಬೇರು ತುಂಬ ಸುವಾಸನೆಯುಳ್ಳದ್ದು. ಆದ್ದರಿಂದ ಸುಗಂಧಯುಕ್ತ ಉಪಯೋಗಗಳಿಗೆ ಬಳಸುತ್ತಾರೆ. ಕತ್ತರಿಸಿದ ಸ್ಲಿಪ್‌ಗಳನ್ನು ಬಳಸಿ ಈ ಹುಲ್ಲನ್ನು ಬೆಳೆಸಿ 18-24 ತಿಂಗಳುಗಳಾದ ಮೇಲೆ ಬೇರುಗಳನ್ನು ಡಿಸೆಂಬರ್-ಫೆಬ್ರವರಿಯ ಮಧ್ಯಕಾಲದಲ್ಲಿ ಕಟಾವು ಮಾಡುವರು. ಈ ಸಸ್ಯದ ಒಣಗಿದ ಬೇರುಗಳಲ್ಲಿ ವಿಟವೆಲ್ ಸುಗಂಧ ತೈಲವಿರುವುದರಿಂದ ಬೇರುಗಳನ್ನು ಆವಿ ರೀತಿಯ ಬಾಷ್ಪೀಕರಣಕ್ಕೆ ಒಳಪಡಿಸಿ ತೈಲವನ್ನು ಬೇರ್ಪಡಿಸುವರು. ಬೇರ್ಪಡಿಸಿದ ತೈಲವನ್ನು ಡಬ್ಬಿಗಳಲ್ಲಿ ಹಾಕಿ ಸುಮಾರು ಆರು ತಿಂಗಳವರೆಗೆ ಮಾಗಲು ಬಿಡುವುದರಿಂದ ಸುವಾಸನೆ ಹೆಚ್ಚುತ್ತದೆ. ಬಾಷ್ಪೀಕರಣ ಪದ್ಧತಿಯಲ್ಲದೆ ಕೆಲವು ಲೀನಕಾರಿಗಳಿಂದ ಸಂಸ್ಕರಿಸುವುದರಿಂದಲೂ ಈ ತೈಲವನ್ನು ತಯಾರಿಸುವುದುಂಟು. ಈ ತೈಲವು ತುಂಬ ಹಿತಕರ ಸುವಾಸನೆ ಹಾಗೂ ಸ್ಥಿರೀಕರಣ ಗುಣವನ್ನು ಹೊಂದಿದೆ. ಇತರ ಪದಾರ್ಥಗಳ ಜೊತೆಯಲ್ಲಿ ಸ್ವಾಭಾವಿಕವಾಗಿ ಬೆರೆಯುವ ಮಹತ್ತರ ಗುಣವನ್ನು ಹೊಂದಿದೆ. ಈ ವಿಶೇಷ ಗುಣಗಳನ್ನು ಈ ತೈಲವು ಪಡೆದಿರುವುದರಿಂದ ಅತ್ತರ್‌ಗಳ ತಯಾರಿಕೆಯಲ್ಲಿ, ಸಾಬೂನುಗಳನ್ನು ಸುವಾಸಿತಗೊಳಿಸುವಲ್ಲಿ ಇದನ್ನು ಉಪಯೋಗಿಸುತ್ತಾರೆ.



ಚಿತ್ರ 35 : ಲಾಮಂಚ

ಒಣಗಿದ ಸುಗಂಧಸೂಸುವ ಬೇರುಗಳಿಂದ ಬೀಸಣಿಕೆ, ಪರದೆಯಂತೆ ಇಳಿಬಿಡುವ ಚಾಪೆ, ಸುಂದರವಾದ ಬುಟ್ಟಿ ಮೊದಲಾದವುಗಳನ್ನು ನೆಯ್ಯುತ್ತಾರೆ. ಈ ವಸ್ತುಗಳ

ಮೇಲೆ ನೀರನ್ನು ಚಿಮುಕಿಸಿದಾಗ ಅತಿ ಮಧುರವಾದ ಸುವಾಸನೆಯು ಹೊರಹೊಮ್ಮಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ.

ಶರಬತ್ ಮತ್ತು ಇತರ ಪಾನೀಯಗಳಿಗೆ ಹಿತವಾದ ಸುವಾಸನೆ ಮತ್ತು ರುಚಿಯನ್ನು ನೀಡಲು ಸಹ ಇದನ್ನು ಉಪಯೋಗಿಸುವರು.

ಈ ಬೇರುಗಳು ಅನೇಕ ಔಷಧಿಯುಕ್ತ ಉಪಯೋಗಗಳನ್ನು ಹೊಂದಿರುತ್ತವೆ. ಇದರಿಂದ ಮಾಡಿದ ಕಷಾಯವನ್ನು ಹಸಿವು ಹೆಚ್ಚಿಸಲು, ಸ್ನಾಯುವಿನ ಸೆಳೆತವನ್ನು ಕಡಮೆ ಮಾಡಲು, ಬೆವರಿನ ಸ್ರಾವವನ್ನು ಹೆಚ್ಚಿಸಲು, ಋತುಸ್ರಾವವನ್ನು ಸರಿಪಡಿಸಲು ಮತ್ತು ಮೂತ್ರವನ್ನು ಹೆಚ್ಚಿಸಲು ಉಪಯೋಗಿಸುತ್ತಾರೆ.

38. ಲ್ಯಾವೆಂಡರ್

(ಲಾವಾಂಡುಲ; Lavandula ಪ್ರಭೇದಗಳು)

ವ್ಯಾಪನೆ : ಈ ಜಾತಿಯ ಅನೇಕ ಪ್ರಭೇದಗಳನ್ನು ದಕ್ಷಿಣ ಫ್ರಾನ್ಸ್ ಮತ್ತು ಇಟಲಿ ದೇಶಗಳ ಎತ್ತರವಾದ ತಂಪಾಗಿರುವ ಬೆಟ್ಟಗಳ ಪ್ರದೇಶದಲ್ಲಿ ಕಾಣಬಹುದು. ಭಾರತದ ಕಾಶ್ಮೀರ ಕಣಿವೆಗಳಲ್ಲಿ ಇತ್ತೀಚೆಗೆ ಇದನ್ನು ಪ್ರಯೋಗಾತ್ಮಕವಾಗಿ ಬೆಳೆಯುವಲ್ಲಿ ಸಫಲರಾಗಿದ್ದಾರೆ. ಇದರ ಕೆಲವು ಪ್ರಭೇದಗಳನ್ನು ಕರ್ನಾಟಕದ ಮೈಸೂರು, ಕೊಡಗು ಮತ್ತಿತರ ಕಡೆಗಳಲ್ಲಿ ಕಾಣಬಹುದು.

ವರ್ಣನೆ : ಸಾಮಾನ್ಯವಾಗಿ ಸುವಾಸನೆಯ ಶಾಕಗಳು. ರೇಖಾಕಾರದ, ಸಮ ಅಥವಾ ವಿಚ್ಛಿದ್ರ ಅಂಚು, ಅಭಿಮುಖ ಅಥವಾ ಸುತ್ತು ಜೋಡಣೆಯ, ವೃಂತ ಪರ್ಣರಹಿತ ಎಲೆಗಳು. ಸರಳ ಅಥವಾ ಕವಲಾದ ಪುಷ್ಪಮಂಜರಿ. ಸುವಾಸನೆಯ, ಚಿಕ್ಕ, ತೊಟ್ಟಿಲ್ಲದ, ನೀಲಿ ಪುಷ್ಪಪತ್ರಕ, ಸಮದ್ವಿಪಾರ್ಶ್ವದ, ದ್ವಿಲಿಂಗ ಅಧೋಶಲಾಕ ಹೂವುಗಳು. ನೆಟ್ಟಗೆ ಕೊಳವೆಯಾಕಾರದ, ಚಿಕ್ಕ ಸಮವಿಭಜನೆಯ 5 ಪುಷ್ಪ ಪಾತ್ರ ಪತ್ರಕಗಳು. ತುಟಿಗಳ ಹಾಗೆ ತೋರುವಂತೆ ಇಬ್ಭಾಗವಾಗಿರುವ, ಹೆಂಚುಹೊದಿಕೆ ಜೋಡಣೆಯಲ್ಲಿ 5 ಪುಷ್ಪದಳದ ದಳವೃತ್ತ. ದ್ವಿದೀರ್ಘ, ಒಳಗಡೆಗೆ ತಿರುಗಿರುವ ಮತ್ತು ಸಂಗಮಗೊಂಡಿರುವ ಪರಾಗಕೋಶ. ಬಿಡಿಯಾದ ಕೇಸರದಂಡವಿರುವ 4 ಕೇಸರಗಳು. ಎರಡು ಸಂಯುಕ್ತ ಅಂಡಕೋಶಗಳು, ನಾಲ್ಕು ಕೋಣೆಗಳ ಪ್ರತಿಯೊಂದು ಕೋಣೆಯು ಒಂದೊಂದು ಅಂಡಕವು ಅಕ್ಷಕ ಅಂಡಕಾಧಾರಕ್ಕೆ ಅಂಟಿದ್ದು ಜಾಯಾಂಗಮೂಲ ಶಲಾಕವುಳ್ಳ, ಇಬ್ಭಾಗವಾದ ಅಸಮ ಶಲಾಕಾಗ್ರವಿರುವ, ಉಚ್ಚ ಸ್ಥಾನದ ಅಂಡಾಶಯ. 4 ಕಿರುಕರಟಕಾಯಿಗಳ ನಯ ಒಣ ಫಲ.

ಉಪಯೋಗಗಳು : ಫಲವತ್ತಾದ ಭೂಮಿಯಲ್ಲಿ ಇದರ ಪ್ರಭೇದಗಳನ್ನು ಬೆಳೆಯಬಹುದು. ಜಾಗರೂಕತೆಯಿಂದ ಕೆಲವು ಒಳ್ಳೆಯ ಗಿಡಗಳನ್ನು ಆಯ್ದು ಅವು

ಗಳನ್ನು ಕತ್ತರಿಸಿ, ಕಾಂಡ ತುಂಡುಗಳ ಮೂಲಕ ಇದರ ಪ್ರಭೇದಗಳನ್ನು ಸಂತಾನವೃದ್ಧಿ ಮಾಡಬಹುದು. ಹೂವು ನೀಲಿ ವರ್ಣವಿದ್ದು ನಂತರ ಬೂದುಮಿಶ್ರಿತ ನೀಲಿವರ್ಣಕ್ಕೆ ತಿರುಗಿದಾಗ ಅವುಗಳನ್ನು ಸೂರ್ಯಪ್ರಕಾಶವಿರುವ ಸಮಯದಲ್ಲಿ ಮಾತ್ರ ಆಯ್ದು ಕೊಳ್ಳುತ್ತಾರೆ. ಹೂವುಗಳನ್ನು ನೀರು ಅಥವಾ ಆವಿ ಬಾಷ್ಪೀಕರಣ ಅಥವಾ ಲೀನ ಕಾರಿಗಳಿಂದ ಸಂಸ್ಕರಿಸುವ ಮೂಲಕ ಲೆವೆಂಡರ್ ತೈಲವನ್ನು ತೆಗೆಯುತ್ತಾರೆ. ಒಳ್ಳೆಯ



ಚಿತ್ರ 36: ಲ್ಯಾವೆಂಡರ್

ರೀತಿಯಲ್ಲಿ ಸಾಗುವಳಿ ಮಾಡಿದ ಸಸ್ಯಗಳಿಂದ ಹೆಕ್ಟೇರಿಗೆ ವರ್ಷಕ್ಕೆ ಸುಮಾರು 30 ಕಿಲೋಗ್ರಾಮ್ ಲ್ಯಾವೆಂಡರ್ ತೈಲವನ್ನು ತೆಗೆಯಬಹುದು. ಉಲ್ಲಾಸ ಬೀರುವ ಪರಿಮಳವು ಇತರ ಅನೇಕ ಸುಗಂಧ ತೈಲಗಳ ಜೊತೆಯಲ್ಲಿ ಬೆರೆಯುವ ವಿಶೇಷ ಗುಣವನ್ನು ಹೊಂದಿರುವುದರಿಂದ ಬಹಳ ಪುರಾತನ ಕಾಲದಿಂದಲೂ ಇದನ್ನು ಸುಗಂಧ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಿದ್ದಾರೆ. ಈ ತೈಲವನ್ನು ನೀರು ಮತ್ತು ಮದ್ಯ

ಸಾರದ ಜೊತೆಯಲ್ಲಿ ಬೆರಸಿ ಸುವಾಸನೆಯ ಪನ್ನೀರನ್ನು ತಯಾರಿಸುತ್ತಾರೆ. ಶ್ರೇಷ್ಠ ದರ್ಜೆಯ ಲ್ಯಾವೆಂಡರ್ ತೈಲವನ್ನು ಉತ್ತಮ ದರ್ಜೆಯ ಸೆಂಟು ತಯಾರಿಕೆಯಲ್ಲಿ ಬಳಸಂತ್ತಾರೆ. ಸಾಧಾರಣ ದರ್ಜೆಯ ತೈಲವನ್ನು ಲ್ಯಾವೆಂಡರ್ ಪನ್ನೀರು, ಯುಡಿ ಕೊಲೋನ್ ತಯಾರಿಕೆಯಲ್ಲಿ ಕೀಳು ದರ್ಜೆಯ ತೈಲ ಹಾಗೂ ಸಾಬೂನುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಇದಲ್ಲದೆ ಒಣಗಿದ ಲ್ಯಾವೆಂಡರ್ ಹೂವುಗಳನ್ನು ಚಿಕ್ಕ ಸುವಾಸನೆ ಪುಡಿಚೀಲಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಸಾಂಬಾರ ಪದಾರ್ಥಗಳ ಮಿಶ್ರಣವನ್ನು ಸುವಾಸಿತಗೊಳಿಸಲು ಹೂವುಗಳ ಒಣದಳ ಗಳನ್ನು ಉಪಯೋಗಿಸುತ್ತಾರೆ.

ಲ್ಯಾವೆಂಡರ್ ತೈಲವನ್ನು ಔಷಧಿಗಳನ್ನು ಸುವಾಸಿತಗೊಳಿಸಲು ಮತ್ತು ವಾತಹರ ಔಷಧಿ ತಯಾರಿಕೆಗಳಲ್ಲಿ ಉಪಯೋಗಿಸುತ್ತಾರೆ.

ಇತರ ಪ್ರಭೇದಗಳು

ಲ್ಯಾವೆಂಡುಲಾ ಅಫಿಸಿನಾಲಿಸ್ (Lavendula officinalis Linn.)

ಲ್ಯಾ. ಬರ್ಮ್ಯಾನಿ (L. burmanni Benth.)

ಲ್ಯಾ. ಲ್ಯಾಟಿಫೋಲಿಯಾ (L. latifolia vill.)

ಲಾ. ಹೈಬ್ರಿಡ್ (L. hybrida Reverchon.)

ಈ ಪ್ರಭೇದಗಳು ಸುಗಂಧಯುಕ್ತ ಉಪಯೋಗಗಳನ್ನು ಹೊಂದಿವೆ.

39. ವನಸಂಪಿಗೆ

(ಕನಂಗಾ ಓಡೊರೇಟಾ ; Cananga odorata Hook f. and thomas)

ವ್ಯಾಪನೆ : ಈ ನಿತ್ಯಹಸುರು ಮರದ ತವರು ಬರ್ಮಾ, ಜಾವಾ, ಫಿಲಿಪೈನ್ಸ್. ಕ್ರಿ.ಶ. 1797 ರಲ್ಲಿ ಭಾರತ ದೇಶದಲ್ಲಿ ಪ್ರಥಮ ಬಾರಿಗೆ ಇದನ್ನು ಬೆಳೆಯಲು ಪ್ರಾರಂಭಿಸಲಾಯಿತು. ಸುವಾಸಿತ ಹೂವುಗಳನ್ನು ಹೊಂದಿರುವ ಈ ಮರವನ್ನು ಸಾಮಾನ್ಯವಾಗಿ ಉದ್ಯಾನವನಗಳಲ್ಲಿ ಅಲಂಕಾರಕ್ಕೆ ಬೆಳೆಸುತ್ತಾರೆ.

ವರ್ಣನೆ : ಇದು 36 ಮೀಟರ್ ಉದ್ದದ ಶೀಘ್ರವಾಗಿ ಬೆಳೆಯುವ ನಿತ್ಯ ಹಸುರು ಮರ, ನೇರವಾಗಿ ಬೆಳೆವ ದಾರು ಕಾಂಡ. ಸರಳ, ಪರ್ಯಾಯ ಜೋಡಣೆಯ, ಈಟಿಯಾಕಾರದ, ಮೊನಚಾದ ತುದಿ, ದುಂಡು ತಳಭಾಗ, ಹೊಳಪು ಮೇಲ್ಭಾಗವುಳ್ಳ ಅಲೆಅಂಚಿನ ಉದ್ದ ಪತ್ರವೃಂತವುಳ್ಳ ಎಲೆಗಳು. ಎರಡು ಅಥವಾ ಮೂರು ಹೂವುಗಳು ಅಂತ್ಯಾರಂಭಿ ಪುಷ್ಪಮಂಜರಿಯಲ್ಲಿರುತ್ತವೆ. 7.5 ಸೆಂಟಿಮೀಟರ್ ಉದ್ದ ಜೋತಾ ಡುವ ತಿಳಿಹಳದಿ, ಕ್ಷಣಿಕ ಸುವಾಸನೆಯ, ಉದ್ದ ಪುಷ್ಪವೃಂತವಿರುವ, ದ್ವಿಲಿಂಗದ

ಕೆಲವೇ ಪತ್ರಕಗಳನ್ನುಳ್ಳ ಹೂವುಗಳು. ದೊಡ್ಡ, ತ್ರಿಕೋಣಾಕಾರದ ಹೆಂಚು ಹೊದಿಕೆ ಮಾದರಿ ಜೋಡಣೆಯುಳ್ಳ ಮೂರು ಪುಷ್ಪಪಾತ್ರಪತ್ರಕಗಳು. ಕಡಿದಾಗಿದ್ದು 9 ಸೆಂಟಿಮೀಟರ್ ಉದ್ದ, ಎರಡು ಸುತ್ತುಗಳಲ್ಲಿರುವ 6 ಪುಷ್ಪಪತ್ರಕಗಳು (3 + 3). ಒಳಸುತ್ತಿನಲ್ಲಿನ ಮೂರು ಪುಷ್ಪಪತ್ರಕಗಳು ತಳಗಡೆ ಭಾಗದಲ್ಲಿ ಕೆಂಪು ಮಚ್ಚೆಯುಳ್ಳವು.



ಚಿತ್ರ 37 : ವನಸಂಪಿಗೆ

ಪರಾಗಕೋಶಕ್ಕಿಂತ ಉದ್ದ ಮತ್ತು ದಪ್ಪವಾಗಿ ಬೆಳೆದಿರುವ ಬಹುಕೇಸರಗಳು. ಹೂವು ಅರಳಿದಾಗ ಕಪ್ಪು ವರ್ಣಕ್ಕೆ ತಿರುಗುವ, ಸುಮಾರು 10–12 ಬಿಡಿ ಅಂಡಕೋಶಗಳು. ಉಚ್ಚಸ್ಥಾನದ ಅಂಡಾಶಯಗಳಿದ್ದು ಪ್ರತಿಬಿಡಿ ಅಂಡಕೋಶದಲ್ಲಿ ಒಂದೊಂದು ಕೋಣೆ, ಪ್ರತಿಕೋಣೆಯಲ್ಲಿ ಒಂದರಿಂದ ಅನೇಕ ಪ್ರಕಾಶೋನ್ಮುಖ ಅಂಡಕಗಳು. ಅಂಚು ಅಂಡಕಾಧಾರಕ್ಕೆ ಅಂಟಿರುತ್ತವೆ. ಅನೇಕ ರಸಫಲಗಳ ಸಾಮೂಹಿಕ ಫಲ.

ಉಪಯೋಗಗಳು : ವನಸಂಪಿಗೆಯ ಎರಡು ಪ್ರಭೇದಗಳಿದ್ದು ಕನಾಂಗ ಒಡೊರೇಟಫಾರ್ಮ ಜೆನ್ಯೂಯಿನ ಹೂವುಗಳಿಂದ ಯಾಂಗ್ ಮತ್ತು ಕ. ಒಡೊರೇಟ್‌ಫಾರ್ಮ ಮ್ಯಾಕ್ರೋಫಿಲ್ಲ ಹೂವುಗಳಿಂದ ಕೆನಾಂಗ ಸುಗಂಧ ತೈಲವನ್ನು ತೆಗೆಯಬಹುದು.

ಈ ಸಸ್ಯದ ಹೂವುಗಳು ಅರಳುವಾಗ ಹಸುರಾಗಿದ್ದು ವಾಸನೆರಹಿತ. ಹೂವು ಸಾಕಷ್ಟು ಅರಳಿದಂತೆಲ್ಲಾ ಅವುಗಳ ಸುವಾಸನೆಯೂ ಹೆಚ್ಚುಗುತ್ತಾ ಹೋಗುತ್ತದೆ. ಅಲ್ಲದೇ ಅವುಗಳು ನಸು ಹಳದಿಯಿಂದ ಪೂರ್ಣ ಹಳದಿ ವರ್ಣಕ್ಕೆ ತಿರುಗುತ್ತವೆ. ಈ ಹೂವುಗಳಿಂದ ತೆಗೆಯಲಾದ ಸುಗಂಧ ತೈಲವು ಯಾಂಗ್ ಯಾಂಗ್ ಎಂದು ಹೆಸರು ವಾಸಿಯಾಗಿದೆ. ಪೆಟ್ರೋಲಿಯಂ ಈಥರ್ ಮತ್ತು ಶೇಕಡಾ 80ರಷ್ಟು ಮದ್ಯಸಾರ ಇತ್ಯಾದಿ ದ್ರಾವಕಗಳನ್ನು ಬಳಸಿ ಈ ಸುಗಂಧ ತೈಲವನ್ನು ತೆಗೆಯುತ್ತಾರೆ.

ಯಾಂಗ್ ಯಾಂಗ್ ಎಲ್ಲ ತೈಲಗಳಿಗಿಂತ ಅತಿ ಶ್ರೇಷ್ಠವಾಗಿದ್ದು ಇದನ್ನು ಸುಗಂಧ ತೈಲಗಳ ರಾಣಿ ಎಂದು ಕರೆಯುತ್ತಾರೆ. ಈ ಸುಗಂಧ ತೈಲವು ಉಲ್ಲಾಸಕರ ಸುವಾಸನೆಯನ್ನು ಬೀರುವುದರಿಂದ ಶ್ರೇಷ್ಠದರ್ಜೆಯ ಸೆಂಟು ತಯಾರಿಕೆಯಲ್ಲಿ ಬಳಸುತ್ತಾರೆ. ಮಲ್ಲಿಗೆ, ಸಂಪಿಗೆ, ಮತ್ತಿತರ ಸುಗಂಧ ತೈಲಗಳ ಜೊತೆಯಲ್ಲಿ ಯಾಂಗ್ ಯಾಂಗ್ ತೈಲವನ್ನು ಬೆರೆಸಿ ಸುಂದರವಾದ ಹಾರ ಮತ್ತು ತುರಾಯಿಗಳ ಮೇಲೆ ಆಹ್ಲಾದಕರ ಸುಗಂಧ ಬೀರಲು ಸಿಂಪಡಿಸುತ್ತಾರೆ. ಸುಂದರ ಹೂವುಗಳನ್ನು ಹೊಂದಿರುವ ಈ ಮರವನ್ನು ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುತ್ತಾರೆ.

ಮ್ಯಾಕ್ರೋಫಿಲ್ಲ ತಳಿಯ ವನಸಂಪಿಗೆ ಹೂವುಗಳಿಂದ ಕಚ್ಚಾ ಬಾಷ್ಪೀಕರಣ ವಿಧಾನದಿಂದ ಕೆನಾಂಗ ತೈಲವನ್ನು ತೆಗೆಯುತ್ತಾರೆ. ಈ ತೈಲವು ಯಾಂಗ್ ಯಾಂಗ್ ಸುಗಂಧ ತೈಲದಷ್ಟು ಶ್ರೇಷ್ಠವಾಗಿರುವುದಿಲ್ಲವಾದ ಕಾರಣ ಈ ತೈಲವನ್ನು ಕೆಲವು ಅಗ್ಗದ ಸೆಂಟು ತಯಾರಿಕೆಯಲ್ಲಿ ಮತ್ತು ಸಾಬೂನು ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

40. ವಯೊಲಾ ಒಡೊರೆಟಾ (Viola odorata Linn.)

ವ್ಯಾಪನೆ : ಯೂರೋಪ್ ದೇಶಗಳು ಈ ಸಸ್ಯದ ತವರಾಗಿದ್ದು ಪ್ರಪಂಚದ ಎಲ್ಲ ಭಾಗಗಳಲ್ಲಿ ಇದು ಬೆಳೆಯುವುದು.

ವರ್ಣನೆ : ಕೃಶವಿರೋಹವಿರುವ ಶಾಕ. ವೃಂತಪರ್ಣವಿರುವ, ಪರ್ಯಾಯ ಜೋಡಣೆಯ, ಅಂಡಾಕಾರದ ಕೆಳಭಾಗದಲ್ಲಿ ಹೃದಯಾಕಾರದ ಎಲೆಗಳು. ಎಲೆ ಕಂಕುಳಲ್ಲಿರುವ ಪುಷ್ಪಮಂಜರಿ ವೃಂತದ ಮೇಲಿರುವ ಒಂಟಿ ಹೂವು. ದ್ವಿಲಿಂಗ, ಅಧೋಶಲಾಕೆಯ, ತ್ರಿಜ್ಯ ಸಮಪಾರ್ಶ್ವ ಹೂವುಗಳು. ಉದುರದೇ ಇರುವ ಹಂಚು ಹೊದಿಕೆ ಮಾದರಿ ಜೋಡಣೆಯ 5 ಪುಷ್ಪಪಾತ್ರೆ ಪತ್ರಕಗಳು. ಹಂಚು ಹೊದಿಕೆ ಮಾದರಿ ಜೋಡಣೆಯ 5 ಪುಷ್ಪದಳಗಳು. ಚಿಕ್ಕ ಕೇಸರ ದಂಡಗಳ, ಅಗಲವಾದ, ಕೂಡಿದ ಪರಾಗಕೋಶ, ದಳಪುಟವಿರುವ, ಪರಾಗಸಂಪರ್ಕಿತ 5 ಕೇಸರಗಳು. ಒಂದು ಕೋಣೆಯಲ್ಲಿ ಅನೇಕ ಅಂಡಕಗಳು ಬಹಿಸ್ಥಗೋಡೆಯ ಅಂಡಕಾಧಾರಕ್ಕೆ ಅಂಟಿದ್ದು, ಉಚ್ಚ ಅಂಡಾಶಯ. ಸರಳ ಶಲಾಕೆ. 3 ವಾಪೆಯುಕ್ತ ಸಂಪುಟಕ ಫಲ.

ಉಪಯೋಗಗಳು : ಈ ಹೂವುಗಳಿಂದ ತಯಾರಿಸುವ ತೈಲವನ್ನು ವಯೊಲೆಟ್ ತೈಲ ಎಂದು ಕರೆಯುವರು. ಈ ತೈಲವು ಮನೋಲ್ಲಾಸಕರ ಸುವಾಸನೆಯನ್ನು ಹೊಂದಿದ್ದು ಹೆಚ್ಚು ಪ್ರಸಿದ್ಧಿಯುಳ್ಳದ್ದು. ಇದನ್ನು ಲೀನಕಾರಿಗಳಿಂದ ಸಂಸ್ಕರಿಸಲಾಗುತ್ತದೆ. 2.5 ಕಿಲೋಗ್ರಾವರ್ ಎಣ್ಣೆಯನ್ನು ತೆಗೆಯಲು 15 ಟನ್‌ಗಳಷ್ಟು ಹೂವುಗಳು ಬೇಕಾಗುತ್ತವೆ. ಹೂವುಗಳಿಂದ ನೇರವಾಗಿ ತೆಗೆದ ವಯೊಲೆಟ್ ತೈಲವು



ಚಿತ್ರ 38 : ವಯೋಲಾ ಓಡೊರೇಟಾ

ತುಂಬಾ ಬೆಲೆಯುಳ್ಳದ್ದು. ಇತ್ತೀಚೆಗೆ ಇದರ ಬದಲಾಗಿ, ಐಯೊಸೋನ್‌ನಿಂದ ಉತ್ಪತ್ತಿಯಾಗುವ ಘಟಕಗಳಿಂದ ಕೃತಕ ರೀತಿಯಲ್ಲಿ ತಯಾರಿಸುವ ತೈಲವನ್ನು ಉಪಯೋಗಿಸುತ್ತಾರೆ. ಸೆಂಟ್‌ಗಳ ತಯಾರಿಕೆಯಲ್ಲಿ, ಸಾಬೂನು, ಮುಖಾಲಂಕಾರದ ವಸ್ತುಗಳನ್ನು ಸುವಾಸಿತಗೊಳಿಸಲು ಈ ತೈಲವನ್ನು ಉಪಯೋಗಿಸುವರು.


41. ವಲೇರಿಯನ್ ಸಸ್ಯ (ಕಾಡು ಜಟಾಮಾಂಸಿ)

(ವಲೇರಿಯನ್ ಅಫಿಶಿನಾಲಿಸ್ ; Valeriana officinalis Linn.)

ವ್ಯಾಪನೆ : ಉತ್ತರ ಮತ್ತು ಮಧ್ಯ ಯೂರೋಪು ಹಾಗೂ ಏಷ್ಯಾದ ಉತ್ತರ ಭಾಗವು ಇದರ ತವರಾಗಿದೆ. ಈಗ ಬೆಲ್ಜಿಯಂ, ಹಾಲೆಂಡ್, ಫ್ರಾನ್ಸ್, ಮಧ್ಯ ಜರ್ಮನಿ, ಹಂಗೇರಿ ಮತ್ತು ಅಮೆರಿಕಗಳಲ್ಲಿ ಬೆಳೆಯಲಾಗುತ್ತಿದೆ. ಭಾರತದಲ್ಲಿ ತುಂಬ

ಕಡಮೆ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದು, ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ಸ್ವಲ್ಪಮಟ್ಟಿಗೆ ಸಾಗುವಳಿ ಮಾಡುವರು.

ವರ್ಣನೆ: ಕಿರಿಯ ಒರಟು ಕಾಂಡಕ್ಕಿಂತ ದಪ್ಪ ವಿರೋಹ ಬೇರಿನಂತಹ ಕಾಂಡವುಳ್ಳ ಬಹುಸಾಂವತ್ಸರಿಕ ಶಾಕ. 0.3-1 ಮೀಟರ್ ಎತ್ತರಕ್ಕೆ ನೇರ, ಗಿಣ್ಣುಗಳ ಮೇಲೆ ಚಿಕ್ಕ ರೋಮವುಳ್ಳ ಕಾಂಡ. ಅಭಿಮುಖಿ ಜೋಡಣೆಯ, ಗರಿರೂಪದ ಸಂಯುಕ್ತ ಎಲೆಗಳು. ಕೋರಿಂಬೋಸ್ ಮಾದರಿಯಲ್ಲಿ ಅನೇಕ ಬೆಂಡುಗಳಿರುವ ಮಿಶ್ರ ರೀತಿಯ ಪುಷ್ಪಮಂಜರಿ. ಚಿಕ್ಕ ದೀರ್ಘವೃತ್ತಾಕಾರ ಅಥವಾ ಉದ್ದನೆಯ,



ಚಿತ್ರ 39: ವಲೇರಿಯನ್

ಶಾಶ್ವತ, ಬಿಡಿಯಾಗಿ ಅಥವಾ ಸ್ವಲ್ಪ ಮಾತ್ರ ಬಿಡಿಯಾಗಿರುವ ಪುಷ್ಪಪೃಂತ ಪತ್ರಕ. ದ್ವಿಲಿಂಗ, ಊರ್ಧ್ವ ಶಲಾಕೆಯ ಬಿಳಿಮಿಶ್ರಿತನೇರಿಳೆ ಹೂವುಗಳು. ಅಸ್ಪಷ್ಟ 5 ಸಂಯುಕ್ತ ಪುಷ್ಪಪಾತ್ರ ಪತ್ರಕಗಳು. ಕೊಳವೆಯಾಕಾರದ ಪುಷ್ಪಪಾತ್ರೆ. 5 ಸಂಯುಕ್ತ ಪುಷ್ಪದಳಗಳು. ಬಿಳಿಮಿಶ್ರಿತ ನೇರಿಳೆ ಬಣ್ಣದ ಲಾಳಿಕೆಯಾಕಾರದ ದಳವೃತ್ತ,

ಮೂರು ಕೇಸರಗಳು. ಮೂರು ಕೋಣೆಗಳ ಪ್ರತಿ ಕೋಣೆಯಲ್ಲಿ ಒಂದು ಅಂಡಕ. ಕೆಳ ಅಂಡಾಶಯ, ನೇರಿಳೆ ಬಣ್ಣದ ಶಾಶ್ವತ ಪುಷ್ಪಪಾತ್ರ ಪತ್ರಕಗಳನ್ನುಳ್ಳ ಸಂಪುಟಕ ಮಾದರಿ ಫಲ.

ಉಪಯೋಗಗಳು : ಒಣಗಿದ ವಿರೋಹ ಕಾಂಡದಿಂದ ಬಾಷ್ಪೀಕರಿಸಿದ ಸುವಾಸಿತ ತೈಲವನ್ನು ಅತ್ತರ್ ತಯಾರಿಕೆಯಲ್ಲಿ ಬಳಸುತ್ತಾರೆ.

ಸಸ್ಯವನ್ನು ನಾಟಿಮಾಡಿದ ಬಳಿಕ ಸಾಮಾನ್ಯವಾಗಿ ಎರಡು ವರ್ಷಗಳನಂತರ ಕಟಾವು ಮಾಡುವರು. ಎರಡನೇ ವರ್ಷದಲ್ಲಿ ಕಟಾವು ಮಾಡುವುದರಿಂದ ವಿರೋಹ ಕಾಂಡಗಳು ಹೆಚ್ಚು ಪ್ರಮಾಣದಲ್ಲಿ ದೊರಕುವುದಲ್ಲದೇ ಹೆಚ್ಚಿನ ಪ್ರಮಾಣದ ತೈಲವನ್ನು ಕೂಡಾ ಪಡೆಯಬಹುದು. ಸಾಮಾನ್ಯವಾಗಿ ಸೆಪ್ಟೆಂಬರ್ ತಿಂಗಳಲ್ಲಿ ಹಸುರೆಲೆಗಳು ಹಳದಿ ವರ್ಣಕ್ಕೆ ತಿರುಗಿ ಬಿದ್ದುಹೋಗುವ ಮುಂಚಿತವಾಗಿ ಕಟಾವು ಮಾಡುವುದುಂಟು. ಒಣಹವೆಯಲ್ಲಿ ಕೈಗಳಿಂದ ಅಥವಾ ಯಂತ್ರಗಳ ಸಹಾಯದಿಂದ ವಿರೋಹ ಕಾಂಡಗಳನ್ನು ಬೇರ್ಪಡಿಸಿ ಅವುಗಳನ್ನು ಸ್ವಚ್ಛಮಾಡಿ ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಮಾಡುವರು. ಈ ತುಂಡುಗಳನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ಒಣಗಿಸುವರು. ಅಮೆರಿಕಾದಲ್ಲಿ ಒಂದು ಹೆಕ್ಟೇರಿಗೆ 2250 ಕಿಲೋಗ್ರಾಮ್ ಒಣಗಿದ ವಿರೋಹ ಕಾಂಡಗಳನ್ನು ಬೆಳೆದಿರುವುದು ಕಂಡುಬಂದಿದೆ.

ತಾಜಾ ಬೇರು ಮತ್ತು ಬೇರುಕಾಂಡಗಳು ಯಾವ ಬಗೆಯ ವಾಸನೆಯನ್ನೂ ಹೊಂದಿರುವುದಿಲ್ಲ. ಆದರೆ ಅವುಗಳನ್ನು ಒಣಗಿಸಿದನಂತರ ವಲೇರಿಯನ್ ಸುವಾಸನೆಯನ್ನು ಬೀರುತ್ತವೆ. ಈ ಸುವಾಸನೆಗೆ ಅವುಗಳಲ್ಲಿರುವ ಆವಿಯಾಗುವ ಎಣ್ಣೆಯೇ ಮುಖ್ಯಕಾರಣ. ತೈಲವನ್ನು ಆವಿ ಬಾಷ್ಪೀಕರಣದ ಮೂಲಕ ನೇರವಾಗಿ ತಯಾರಿಸುವರು. ಈ ತೈಲವು ಹಳದಿಮಿಶ್ರಿತ ಹಸುರಿನಿಂದ ಕಂದುಮಿಶ್ರಿತಹಳದಿ. ಈ ತೈಲದಲ್ಲಿ ಬೊರ್ನಿಲ ಐಸೋವೆಲರೇಟ್ ಘಟಕವು ಶೇಕಡಾ 9.5 ರ ಪ್ರಮಾಣದಲ್ಲಿರುತ್ತದೆ.

ಇದನ್ನು ಅತ್ತರು ತಯಾರಿಕೆಯಲ್ಲಿ ಉಪಯೋಗಿಸುವರು. ತಂಬಾಕಿನ ಕೆಲವು ಮಿಶ್ರಣಗಳನ್ನು ಸುವಾಸಿತಗೊಳಿಸಲು ಮತ್ತು ರುಚಿನೀಡಲು ಈ ವಲೇರಿಯನ್ ತೈಲವನ್ನು ಉಪಯೋಗಿಸುವುದುಂಟು.

ಒಣ ಬೇರು ಮತ್ತು ಕಾಂಡಗಳು ಔಷಧಿಯುಕ್ತ ಉಪಯೋಗಗಳನ್ನು ಹೊಂದಿದ್ದು, ಹೊಟ್ಟೆ ಉಬ್ಬರ, ಹಿಸ್ಟೀರಿಯಾ ಮತ್ತು ನರಗಳ ಬಲಹೀನತೆ ಮೊದಲಾದವುಗಳ ನಿವಾರಣೆಗೆ ಉಪಯೋಗವಾಗುತ್ತವೆ.

ಇತರ ಪ್ರಭೇದಗಳು


1. ನಂದ್ಯಾವರ್ತ (ವಲೇರಿಯಾನಾ ವಾಲಿಚಿ; **V. wallichii DC**)

ಈ ಪ್ರಭೇದವು ಹಿಮಾಲಯದ ಅಡಿಯಲ್ಲಿ ಕಾಶ್ಮೀರದಿಂದ ಅಸ್ಸಾಮ್‌ವರೆಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತದೆ. ಇದೂ ಸಹ ವೆಲೇರಿಯಾನಾ ಅಫಿಶಿನಾಲಿಸ್ ಗುಣಗಳನ್ನೇ ಹೊಂದಿದ್ದು ಅದೇ ಬಗೆಯ ಔಷಧಿಯುಕ್ತ ಉಪಯೋಗಗಳನ್ನು ಹೊಂದಿದೆ.

42. ವೆನಿಲ್ಲ

(ವೆನಿಲ್ಲ ಪ್ಲಾನಿಫೋಲಿಯಾ : **Vanilla planifolia Andrews**)

ವ್ಯಾಪನೆ : ಈ ಸಸ್ಯದ ತವರು ಮಧ್ಯ ಮತ್ತು ದಕ್ಷಿಣ ಅಮೆರಿಕಾ, ಮೆಕ್ಸಿಕೋ ಹಾಗೂ ವೆಸ್ಟ್ ಇಂಡೀಸ್ ದ್ವೀಪಗಳು. ಭಾರತದ ನೀಲಗಿರಿ, ಅಸ್ಸಾಮ್, ಬಿಹಾರ, ಕೊಡಗು ಮೊದಲಾದ ದೇಶಗಳಲ್ಲಿ ಪ್ರಯೋಗಾತ್ಮಕವಾಗಿ ಬೆಳೆಯಲಾಗುತ್ತಿದೆ.



ಚಿತ್ರ 40 : ವೆನಿಲ್ಲ

ವರ್ಣನೆ : ಆಗಂತುಕ ಬೇರುಗಳಿರುವ ದಪ್ಪ ಕಾಂಡ. ಅತ್ಯಧಿಕ ರೆಂಬೆಗಳುಳ್ಳ ಏರುಬಳ್ಳಿ ಶಾಕ. ಬುಡದಲ್ಲಿ ಪೊರೆ, ಪರ್ಯಾಯ ಜೋಡಣೆಯ, ದೀರ್ಘ ವೃತ್ತಾಕಾರದ, ಸಮಅಂಚುಳ್ಳ ಚೂಪುತುದಿಯ ರಸಭರಿತ ಎಲೆಗಳು. ಅಂತ್ಯಾರಂಭಿ ಪುಷ್ಪ

ಮಂಜರಿ. ದೊಡ್ಡ, ಆಕರ್ಷಕವಲ್ಲದ, ಒಂದು ರೀತಿಯ ಪ್ರತ್ಯೇಕ ಆಕಾರದ, ಹಸುರು ಮಿಶ್ರಿತ ಹಳದಿ ದ್ವಿಲಿಂಗ, ಟ್ರೈಮಿರಸ್, ಅಧೋಶಲಾಕೆ ಹೂವುಗಳು. ರಸಭರಿತ, ಎರಡು ವೃತ್ತಗಳಲ್ಲಿ ಹೆಂಚುಹೊದಿಕೆ ರೀತಿ ಜೋಡಿಸಿದ 6 ದಳಗಳ ಪರಿದಳಪುಂಜ. ಒಳವೃತ್ತದಲ್ಲಿ ಅಕ್ಷದ ಕಡೆಗಿರುವ ಒಂದು ಪರಿದಳವು ಅಗಲ ಕಿರಿದಾದ ತುತ್ತೂರಿ ಆಕಾರದ ಲೆಬೆಲೆಮ್ ಆಗಿ ಕೇಸರ ಮತ್ತು ಶಲಾಕೆ ಜೊತೆಗೂಡಿ ಒಂದು ಸ್ಥಂಭದಂತೆ ಗೈನಾಂಡ್ರಿಯಂ ಕೆಳಗಿನಿಂದ ಅಂಟಿದ್ದು ಸುತ್ತಿಕೊಂಡಿರುತ್ತದೆ. ಉದ್ದ ರೆಕ್ಕೆರಹಿತ ಗೈನಾಂಡ್ರಿಯಂ. ಹರಳುರೂಪಿತ ಪರಾಗ ಕೋಶ, ಒಳಬಾಗಿದ ಕೇಸರಗಳು. ಕೆಳ ಸ್ಥಾನದ 3 ಸಂಯುಕ್ತ ಅಂಡಕೋಶಗಳುಳ್ಳ ಒಂದು ಕೋಣೆ. 3 ಬಹಿಸ್ಥ ಗೋಡೆಯ ಅಂಡಕಾಧಾರಕ್ಕೆ ಅನೇಕ ಅಂಡಕಗಳು ಅಂಟಿದ ಅಂಡಾಶಯ. ಉದ್ದ, ತೆಳು, ಹಳದಿ, ರಸಭರಿತ ಸಂಪುಟಕ ಮಾದರಿ ಫಲವನ್ನು ವೆನಿಲ್ಲಾ ಬೀನ್ ಎಂದು ಕರೆಯುತ್ತಾರೆ.

ಉಪಯೋಗಗಳು : ಸಾಕಷ್ಟು ಹೆಸರುವಾಸಿಯಾಗಿರುವ ವೆನಿಲ್ಲಾ ಎಸೆನ್ಸನ್ನು ವೆನಿಲ್ಲಾ ಕಾಯಿಗಳಿಂದ ತೆಗೆಯುವರು. ಹಣ್ಣುಗಳು ಹಳದಿಗೆ ತಿರುಗಿ ಹಣ್ಣಿನ ತುದಿಯು ಕಪ್ಪುಬಣ್ಣ ಪಡೆದಾಗ ಅವು ಇನ್ನೂ ಅಪಕ್ವಸ್ಥಿತಿಯಲ್ಲಿರುತ್ತವೆ. ಈ ಅಪಕ್ವಫಲಗಳನ್ನು ಬಿಡಿಸಿ ಬೆಳಗಿನ ಬಿಸಿಲಿನಲ್ಲಿ ಒಣಗಿಸುವರಲ್ಲದೆ ಮಧ್ಯಾಹ್ನದ ವೇಳೆಯಲ್ಲಿ ಅವುಗಳನ್ನು ಕಂಬಳಿಯಿಂದ ಮುಚ್ಚುತ್ತಾರೆ. ಅನಂತರ ರಾತ್ರಿಯ ವೇಳೆಯಲ್ಲಿ ಅವುಗಳನ್ನು ಗಾಳಿ ಯಾಡದಂತಿರುವ ಪೆಟ್ಟಿಗೆಗಳಲ್ಲಿ ಹಾಕಿ ಇಡುತ್ತಾರೆ. ಈ ರೀತಿ ಮಾಗಿಸುವ ವಿಧಾನವನ್ನು ಕೆಲವು ವಾರಗಳವರೆಗೆ ಮಾಡುವರು. ಹೀಗೆ ಉತ್ತಮ ರೀತಿಯ ಮಾಗಿಸುವ ವಿಧಾನವನ್ನು ಪಡೆದ ವೆನಿಲ್ಲಾ ಕಾಯಿಗಳು ಜಿಡ್ಡಾಗಿದ್ದು ಸಮತಲವಾದ ಮೇಲ್ಮೈ ಹೊಂದಿದ್ದು ಕಪ್ಪು ಅಥವಾ ದಟ್ಟ ಕಂದು ವರ್ಣವಿರುತ್ತವೆ. ಈ ಫಲಗಳು ಹೊಂದಿರುವ ಅತಿಯಾದ ಸುವಾಸನೆಗೆ ವೆನಿಲಿನ್ ಮುಖ್ಯ ಘಟಕವೇ ಕಾರಣವಾಗಿರುತ್ತದೆ. ಈ ಘಟಕವಿರುವ ಎಸೆನ್ಸನ್ನು ಸಾಮಾನ್ಯವಾಗಿ ಆಲ್ಕೋಹಾಲಿನಿಂದ ಸಂಸ್ಕರಿಸಿ ತೆಗೆಯುತ್ತಾರೆ.

ಕೃತ್ರಿಮ ರೀತಿಯಲ್ಲಿ ತಯಾರಾದ ವೆನಿಲ್ಲ ಎಸೆನ್ಸ್ ಮಾರುಕಟ್ಟೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದ್ದರೂ ವೆನಿಲ್ಲ ಕಾಯಿಗಳಿಂದ ತೆಗೆದ ವೆನಿಲ್ಲ ಎಸೆನ್ಸ್‌ಗೇ ಹೆಚ್ಚು ಬೇಡಿಕೆ ; ಏಕೆಂದರೆ, ಇದರ ಸ್ವಾಭಾವಿಕ ಪ್ರತ್ಯೇಕ ಸುವಾಸನೆ ಮತ್ತು ರುಚಿಯು ಕೃತ್ರಿಮ ರೀತಿಯಲ್ಲಿ ತಯಾರಿಸಿದ ವೆನಿಲ್ಲಾ ಎಸೆನ್ಸ್‌ಗೆ ಇರುವುದಿಲ್ಲ.

ಈ ಎಸೆನ್ಸನ್ನು ಐಸ್‌ಕ್ರೀಮ್, ಚಾಕಲೇಟ್, ವಿವಿಧ ಪೇಯ, ಮಿಠಾಯಿ, ಕೇಕ್, ಪುಡ್ಡಿಂಗ್ ಇತ್ಯಾದಿ ತಿನಿಸು ಪದಾರ್ಥಗಳನ್ನು ಸುವಾಸಿತಗೊಳಿಸಲು ಮತ್ತು ರುಚಿ ಗೊಳಿಸಲು ಉಪಯೋಗಿಸುವರು. ಶುದ್ಧಗೊಳಿಸಿದ ಮಿಠಾಯಿಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಸಾಮಾನ್ಯವಾಗಿ ಒಂದು ವೆನಿಲ್ಲಾ ಬೀಜದಿಂದ ತಯಾರಿಸಿದ


ಪುಡಿಯು 0.6 ಕಿಲೋಗ್ರಾಂ ಚಾಕಲೇಟ್‌ಗಳನ್ನು ಸುವಾಸಿತಗೊಳಿಸುತ್ತದೆ. ಇದಲ್ಲದೆ ವೆನಿಲ್ಲಾ ಎಸೆನ್ಸನ್ನು ಸೆಂಟು ಮತ್ತು ಅನೇಕ ಮುಖಾಲಂಕಾರ ವಸ್ತುಗಳ ತಯಾರಿಕೆಯಲ್ಲಿ ಸಾಬೂನುಗಳನ್ನು ಸುವಾಸಿತಗೊಳಿಸಲು ಹಾಗೂ ಸುಗಂಧ ಕಿರುಚೀಲದ ಪುಡಿಗಳಲ್ಲಿಯೂ ಬಳಸುವರು.

ಇತ್ತೀಚೆಗೆ ವೆನಿಲ್ಲಾವನ್ನು ಹಣ್ಣುಗಳ ಮೇಲೆ ಬರುವ ಕೀಟ ಮತ್ತು ಮಿಡತೆಗಳ ನಿವಾರಣೆ ಔಷಧಿಗಳಲ್ಲಿ ಕೀಟನಾಶಕವಾಗಿ ಉಪಯೋಗಿಸುವರು.

43. ಶೇಪು

(ಎನೀಥಮ್ ಗ್ರಾವಿಯೋಲೆನ್ಸ್: Anethum graveolens Linn.)

ವ್ಯಾಪನೆ : ಈ ಗಿಡವು ಈಜಿಪ್ಟ್, ಇರಾನ್ ಮತ್ತು ಯೂರೋಪ್‌ನ ಹಲವು ಭಾಗಗಳಲ್ಲಿ ಯಥೇಚ್ಛವಾಗಿ ವನ್ಯಸಸ್ಯವಾಗಿ ಬೆಳೆಯುತ್ತದೆ, ಅಮೆರಿಕ, ಹಂಗೇರಿ,



ಚಿತ್ರ 41 : ಶೇಪು

ಜರ್ಮನಿ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಇದನ್ನು ಸಾಗುವಳಿಮಾಡುತ್ತಾರೆ. ಭಾರತದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಬೆಳೆಸುವ ಪ್ರಯೋಗದಲ್ಲಿ ಸಫಲರಾಗಿದ್ದಾರೆ.

ವರ್ಣನೆ : ಒಂದು ಮೀಟರ್ ಎತ್ತರ ಬೆಳೆವ ಏಕವಾರ್ಷಿಕ ಅಥವಾ ದ್ವಿವಾರ್ಷಿಕ ಸುವಾಸನೆಯುತ ಶಾಕ. ತುದಿಯಲ್ಲಿ ಗರಿಯ ರೂಪ, ಈಟಿಯಾಕಾರವಿರುವ ಬಹು ಭಿನ್ನಪತ್ರವುಳ್ಳ ಸಂಯುಕ್ತ ಎಲೆಗಳು. ವಿವಿಧ ಆಕಾರವುಳ್ಳ ಪುಷ್ಪಪತ್ರಕವಿರುವ ಮತ್ತು ಅನೇಕ ಪುಷ್ಪವೃಂತ ಪತ್ರಕಗಳನ್ನು ಹೊಂದಿದ ಬಹುಲಿಂಗತ್ವಹೂಗಳ, ಸಂಯುಕ್ತ ಛತ್ರಿಗೊಂಚಲು ಪುಷ್ಪಮಂಜರಿಯಲ್ಲಿವೆ. ಊರ್ಧ್ವ ಶಲಾಕೆಯ ಏಕ ಅಥವಾ ದ್ವಿಲಿಂಗ ಹೂವುಗಳು. ಚಿಕ್ಕ ಹಲ್ಲು ಅಥವಾ ಹುರುಪೆರೀತಿಯ 5 ಬಿಡಿ ಪುಷ್ಪಪಾತ್ರಕಗಳ, ದೀರ್ಘ ಅಂಡಾಕಾರ ಅಥವಾ ಬೆಣೆಯಾಕಾರದ, ತುದಿಯಲ್ಲಿ ಒಳಭಾಗಕ್ಕೆ ಬಗ್ಗಿರುವ 5 ಕೇಸರಗಳು. ಕೆಳಭಾಗದ ಎರಡು ಸಂಯುಕ್ತ ಅಂಡಕೋಶಗಳು. ಪ್ರತಿ ಕೋಣೆಯಲ್ಲಿ ಒಂದು ಅಂಡಕವು ಅಕ್ಷಕ ಅಂಡಕಾಧಾರಕ್ಕೆ ಅಂಟಿದ್ದು ಹೊಳಪಾದ ಹೊರಭಾಗ, ಅಂಡಾಶಯದ ಮೇಲ್ಭಾಗಕ್ಕೆ ಚಿಕ್ಕ ಸ್ಟೈಲೊಪೋಡಿಯಮ್ ಇದ್ದು ಎರಡು ಶಲಾಕೆಗಳಿರುವ ಜಾಯಾಂಗ. ಅಂಡಾಕಾರದ ಅಳ್ಳಕ, ಬಿರಿಯದ ಕಂದು ವರ್ಣದ ಎರಡು ಮೆರಿಕಾರ್ಪ್‌ಗಳಿದ್ದು ಪ್ರತಿಯೊಂದು ಮೆರಿಕಾರ್ಪ್‌ದಲ್ಲಿ ಒಂದು ಬೀಜವಿರುವ 3–4 ಮಿಲಿ ಮೀಟರ್ ಉದ್ದ, 2–3 ಮಿಲಿ ಮೀಟರ್ ಅಗಲವಾಗಿರುವ ಕ್ರಿಮೋಕಾರ್ಪ್ ಫಲ.

ಉಪಯೋಗಗಳು : ಇದರ ಎಲ್ಲಾ ಭಾಗಗಳು ಸುಗಂಧಯುಕ್ತ ಗುಣ ಹೊಂದಿರುತ್ತವೆ; ಆದರೆ ಒಣಫಲಗಳು ಹೆಚ್ಚಿನ ಪ್ರಮಾಣದಲ್ಲಿ ಸುಗಂಧ ತೈಲ ಹೊಂದಿವೆ. ಈ ತೈಲವನ್ನು ದಿಲ್ ತೈಲವೆಂದು ಕರೆಯುವರು. ಫಲಗಳ ಸಹಿತ ಸಂಪೂರ್ಣ ಶಾಕಗಳಿಂದ ತಯಾರಿಸಿದ ಸುಗಂಧ ತೈಲವನ್ನು ದಿಲ್‌ಹರ್ಬ್ ಎಣ್ಣೆಯೆಂದು ಕರೆಯುತ್ತಾರೆ. ದಿಲ್‌ಹರ್ಬ್ ಎಣ್ಣೆಯ ಸುವಾಸನೆ ಮತ್ತು ಇತರ ಗುಣಗಳು ದಿಲ್ ತೈಲದಿಂದ ಸ್ವಲ್ಪಮಟ್ಟಿಗೆ ಭಿನ್ನವಾಗಿರುತ್ತವೆ. ದಿಲ್‌ತೈಲದಲ್ಲಿ ಕ್ಯಾರ್ವೋನ್ ಫಲಕವು ದಿಲ್‌ಹರ್ಬ್ ತೈಲಕ್ಕಿಂತಲೂ ಹೆಚ್ಚಿನ ಪ್ರಮಾಣ (ಶೇಕಡಾ 40–60) ದಲ್ಲಿರುತ್ತದೆ. ದಿಲ್‌ಹರ್ಬ್ ತೈಲದಲ್ಲಿ ಡಿ–2 ಫಿಲ್ಯಾಂಡ್ರಿನ್ ಪ್ರಮುಖ ಘಟಕವು ದಿಲ್‌ಹರ್ಬ್ ತೈಲದ ವಿಶಿಷ್ಟ ಗುಣಮಟ್ಟಕ್ಕೆ ಕಾರಣ.

ಶೇಪು ಅಥವಾ ದಿಲ್ ಫಲಗಳು ಹೆಚ್ಚು ಕಡಮೆ ಸೀಮೆಸೋಂಪಿನ ವಾಸನೆಯನ್ನು ಹೋಲುತ್ತಿದ್ದು ತೀಕ್ಷ್ಣ ರುಚಿಯನ್ನು ಹೊಂದಿರುತ್ತವೆ. ಪಾಶ್ಚಾತ್ಯ ದೇಶಗಳಲ್ಲಿ ಉಪ್ಪಿನಕಾಯಿ, ಸಾರು, ಪಲ್ಯ, ಕೋಸಂಬರಿ, ಸಾಂಬಾರ ಮೊದಲಾದವುಗಳನ್ನು ಸುವಾಸಿತಗೊಳಿಸಲು ಇವುಗಳನ್ನು ಉಪಯೋಗಿಸುವುದುಂಟು. ಸಾಬೂನುಗಳನ್ನು ಸುವಾಸಿತಗೊಳಿಸಲು ಇವುಗಳನ್ನು ಉಪಯೋಗಿಸುತ್ತಾರೆ.

ಇದರ ಸೊಪ್ಪನ್ನು ಉಪ್ಪಿನಕಾಯಿ, ಸಾಂಬಾರ ಮೊದಲಾದವುಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಇತ್ತೀಚೆಗೆ ದಿಲ್‌ತೈಲದ ಬದಲು ದಿಲ್‌ಹರ್ಬ್ ತೈಲವನ್ನು ವಿವಿಧ ಆಹಾರಗಳನ್ನು ಸುವಾಸಿತಗೊಳಿಸಲು ಹೆಚ್ಚು ಬಳಸುತ್ತಿದ್ದಾರೆ.

ಈ ಸಸ್ಯದ ಬೀಜಗಳನ್ನು ಜೀರ್ಣಕಾರಿಯಾಗಿ ಮತ್ತು ಹಸಿವನ್ನು ಹೆಚ್ಚಿಸಲು ಉಪಯೋಗಿಸುತ್ತಾರೆ. ಮುಖ್ಯವಾಗಿ ಚಿಕ್ಕ ಮಕ್ಕಳ ಅಜೀರ್ಣ, ಹೊಟ್ಟೆಉಬ್ಬರಗಳ ನಿವಾರಣೆಗೆ ಈ ಫಲಗಳನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ಕಷಾಯ ಮಾಡಿ ಕುಡಿಸುತ್ತಾರೆ.

44. ಶುಂಠಿ


(ಜಿಂಜಿಬರ್ ಅಫಿಶಿನೇಲ್; Zingiber officinale Roscoe.)

ವ್ಯಾಪನೆ : ಮೂಲತಃ ಈ ಸಸ್ಯವು ಏಷ್ಯಾಖಂಡದ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಬೆಳೆಯುತ್ತಿದ್ದರೂ ಅನೇಕ ವರ್ಷಗಳಿಂದ ಭಾರತ ಮತ್ತು ಚೀನಾ ದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಿ ಉಪಯೋಗಿಸುತ್ತಿದ್ದಾರೆ. ಈ ಸಸ್ಯದ ಶಿಫಾವ್ಯಂತಗಳ ಉಪಯುಕ್ತತೆಗಾಗಿ ಮತ್ತು ಇದನ್ನು ಸುಲಭವಾಗಿ ದಾಸ್ತಾನು ಮಾಡಬಹುದೆಂಬ ಕಾರಣದಿಂದಾಗಿ ಇತ್ತೀಚೆಗೆ ಇದನ್ನು ಅನೇಕ ಪ್ರಾಂತಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ.

ವರ್ಣನೆ : ಅನೇಕ ಭಾಗಗಳಾಗಿ ವಿಭಜಿತವಾಗಿ ಹಸ್ತದ ರೀತಿ ಕಾಣುವ ಅನೇಕ ಪೊರೆಗಳನ್ನು ಹೊಂದಿದ ಮೆದು ಶಿಫಾವ್ಯಂತ. ಇದರಿಂದ ನೇರವಾಗಿ ಬೆಳೆಯುವ ತಂದಿ ಹೊಂದಿರುವ ಬಹುಸಾಂವತ್ಸರಿಕ ಶಾಕ. ಎಲೆಯ ಪೊರೆ ಕವಚಗಳಿಂದ ಮುಚ್ಚಿಕೊಂಡಿರುವ ಮೃದುವಾದ ಮಿಥ್ಯಾಕಾಂಡ. ಎರಡು ಸಾಲಿನಲ್ಲಿ ಸರಳ, ಸಮಅಂಚಿನ, ಉದ್ದ ಈಟಿಯಾಕಾರದ ಎಲೆಗಳು. ಶಿಫಾವ್ಯಂತದಿಂದ ನೇರವಾಗಿ ಬೆಳೆಯುವ ಉದ್ದವಾಗಿರುವ ಪುಷ್ಪಮಂಜರಿ. ಅಭಿಮುಖ ಜೋಡಣೆಯ ಹಸುರುಮಿಶ್ರಿತಹಳದಿ ಪುಷ್ಪಪತ್ರಕಗಳು. ಪುಷ್ಪವೃಂತರಹಿತ ದ್ವಿಲಿಂಗ ಊರ್ಧ್ವ ಶಲಾಕೆಯ, ಸಮದ್ವಿಪಾರ್ಶ್ವತೆಯ ಹಳದಿ ಹೂವುಗಳುಳ್ಳ ಕೊಳವೆಯಾಕಾರದ 3 ಸಂಯುಕ್ತ ಪುಷ್ಪಪಾತ್ರಕಗಳು. ಸ್ವಲ್ಪ ಉದ್ದ, ಹಳದಿ, 3 ಸಂಯುಕ್ತ ದಳಗಳ ಕೊಳವೆಯಾಕಾರದ ದಳವೃತ್ತ, ಹೊರವೃತ್ತದ ಕೇಸರಗಳಿಂದ ಒಳವೃತ್ತದ ಅಕ್ಷದಕಡೆಗೆ ಇರುವ ದಳಾರೂಹ ಫಲಿತ ಕೇಸರವು ಮೂರು ಭಾಗಗಳಾಗಿದ್ದು ವಿಂಗಡಿಸಿರುವ ನೇರಿಳೆಯ ಲೆಬೆಲಮ್ ಹೊಂದಿರುವ ಕೇಸರ ಮಂಡಲ. 3 ಸಂಯುಕ್ತ ಅಂಡಕೋಶಗಳಲ್ಲಿ 3 ಕೋಣೆಗಳಿದ್ದು ಪ್ರತಿ ಕೋಣೆಯಲ್ಲಿ ಅನೇಕ ಅಂಡಕಗಳು ಅಕ್ಷಕ ಅಂಡಕಾಧಾರಕ್ಕೆ ಅಂಟಿವೆ. ಕೆಳ ಅಂಡಾಶಯ. ಲಾಳಿಕೆಯಾಕಾರದ ಶಲಾಕಾಗ್ರವಿರುವ ಶಲಾಕ. ಎರಿಲ್ ಹೊಂದಿದ ಬೀಜ, 3 ಕವಾಟಗಳ ಸಂಪುಟಕ ಮಾದರಿ ಫಲ. ಈ ಸಸ್ಯದಲ್ಲಿ ಹೂವುಗಳಾಗುವುದು ಅತಿ ವಿರಳ.

ಉಪಯೋಗಗಳು: ಶಿಫಾವ್ಯಂತದ ಹೊರಭಾಗ ತಿಳಿಹಳದಿ; ಒಳಭಾಗ ಹಸುರಾಗಿರುತ್ತದೆ. ಶುಂಠಿಯಲ್ಲಿ ಪಿಷ್ಟ, ಅಂಟು ಮತ್ತು ಒಂದು ರೀತಿಯ ಓಲಿಯೋರೆಸಿನ್ ಕೂಡ ಇರುತ್ತದೆ. ಇವುಗಳಲ್ಲದೆ ಅಗತ್ಯವಾದ ಒಂದು ರೀತಿಯ ಸುಗಂಧ ತೈಲವಿರುತ್ತದೆ.

ಮಣ್ಣಿನ ಮೇಲ್ಭಾಗದಲ್ಲಿ ಕಾಣುವ ಸಸ್ಯದ ಎಲ್ಲ ಭಾಗಗಳೂ ಒಣಗಿದನಂತರ ಶಿಫಾವೃಂತಗಳನ್ನು ಮಾತ್ರ ಆಯ್ದುಕೊಂಡು ಅವುಗಳನ್ನು ಶುದ್ಧಗೊಳಿಸಿ ನೇರವಾಗಿ ಹಸಿ ಶುಂಠಿಯಂತೆ ಅಥವಾ ಅವುಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಒಣ ಶುಂಠಿಯಂತೆ ಉಪಯೋಗಿಸಬಹುದು. ಶುಂಠಿಯಿಂದ ಹೊರಹೊಮ್ಮುವ ಸುವಾಸನೆಗೆ ಅದರಲ್ಲಿನ ತೈಲವೂ ತೀಕ್ಷ್ಣ ರುಚಿಗೆ ಅದರಲ್ಲಿನ ಝಿಂಜರಿನ್ ಓಲಿಯೋರೆಸಿನ್ ಅಂಶವೂ ಕಾರಣ. ವಿವಿಧ ಆಹಾರ ಪದಾರ್ಥಗಳು, ಉಪ್ಪಿನಕಾಯಿ, ಪುಡಿಂಗ್ ಹಾಗೂ ಅನೇಕ ಪೇಯಗಳಾದ ಬೀರ್ ಹಾಗೂ ಮದ್ಯಪಾನೀಯಗಳನ್ನು ಸುವಾಸಿತಗೊಳಿಸಲು ಹಾಗೂ ಅವುಗಳಿಗೆ ಒಂದು ವಿಧವಾದ ರುಚಿ ನೀಡಲು ಶುಂಠಿಯನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸುವುದುಂಟು. ಎಳೆಯ ರಸಭರಿತವಾದ ಶಿಫಾವೃಂತಗಳನ್ನು ನೀರಿನಲ್ಲಿ ಅನೇಕಬಾರಿ ಕುದಿಸಿ ಅವುಗಳ ಹೊರಸಿಪ್ಪೆಯನ್ನು ಬೇರ್ಪಡಿಸಿ ಬಳಿಕ ಸಕ್ಕರೆಯ ಪಾಕದಲ್ಲಿ ಕುದಿಸಿ ಶುಂಠಿಮೊರಬ್ಬ ಎಂಬ ಸುವಾಸಿತ ಮತ್ತು ರುಚಿಕರ ಸಿಹಿ ಪದಾರ್ಥವನ್ನು ತಯಾರಿಸುವರು.



ಚಿತ್ರ 42 : ಶುಂಠಿ

ತೈಲವನ್ನು ತೆಗೆದೂ ಒಂದು ವಿಧವಾದ ತೀಕ್ಷ್ಣವಾದ ರುಚಿ ಬರುವಂತೆ ಮೆಣಸಿನ ಪುಡಿಯನ್ನು ಬೆರೆಸಿ ಉಪಯೋಗಿಸುವರು.

ಶುಂಠಿಯು ಹಲವು ಔಷಧಿಯುಕ್ತ ಉಪಯೋಗಗಳನ್ನು ಹೊಂದಿದೆ. ಅಜೀರ್ಣ ರೋಗಿಗಳಿಗೆ ಇದು ದಿವ್ಯ ಔಷಧ. ಸಾಮಾನ್ಯವಾಗಿ ನೆಗಡಿ, ಕೆಮ್ಮು, ಇನ್‌ಫ್ಲೂಎಂಜಾ

ಮೊದಲಾದ ರೋಗಗಳಿಗೆ ಶುಂಠಿಯ ಕಷಾಯ ಮಾಡಿಕೊಡುವರು. ತಾಜಾ ಶುಂಠಿಯ ರಸವನ್ನು ಜೇನು ತುಪ್ಪದಲ್ಲಿ ಸೇರಿಸಿ ಕೆಮ್ಮು ಮತ್ತು ಅಸ್ಥಮಾ ರೋಗಗಳ ಉಪಶಮನಕ್ಕೆ ಕೊಡಬಹುದು. ಶುಂಠಿರಸ ಮತ್ತು ಈರುಳ್ಳಿಯನ್ನು ಬೆರೆಸಿ ಹೊಟ್ಟೆ ತೊಳಸುವಿಕೆ, ವಾಂತಿ ಮೊದಲಾದ ಜಠರ ರೋಗಗಳ ನಿವಾರಣೆಗೆ ಉಪಯೋಗಿಸುವರು. ಶುಂಠಿಯನ್ನು ಗಂಧದಂತೆ ತೇಯ್ದು ತಲೆನೋವು, ಹಲ್ಲು ನೋವುಗಳಿಗೆ ಲೇಪಿಸುತ್ತಾರೆ. ರಕ್ತನಾಳಗಳನ್ನು ಅಗಲಿಸಿ ರಕ್ತಚಲನೆಯನ್ನು ಹೆಚ್ಚಿಸುವ ಗುಣವನ್ನು ಹೊಂದಿರುವುದರಿಂದ ಒಣ ಶುಂಠಿಯ ಪುಡಿಯನ್ನು ಕೈಕಾಲುಗಳಿಗೆ ಉಜ್ಜಿ ಮೈ ತಣ್ಣಗಾದಾಗ ರಕ್ತ ಚಲನೆ ಮತ್ತು ದೇಹದ ಉಷ್ಣತೆಯನ್ನು ಹೆಚ್ಚಿಸಬಹುದು.

45. ಸಂಪಿಗೆ

(ಮೈಕೇಲಿಯಾ ಚಂಪಕಾ : Michelia champaca Linn.)

ವ್ಯಾಪನೆ : ಉಷ್ಣವಲಯದ ಪೂರ್ವಭಾಗ ಇದರ ತವರು. ಇತ್ತೀಚೆಗೆ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಬೆಳೆಯಲಾಗುತ್ತದೆ. ಭಾರತದ ಅನೇಕ ಪ್ರದೇಶಗಳಲ್ಲಿ ಈ ಮರವನ್ನು ಸುಂದರ ಮತ್ತು ಸುವಾಸನೆಯ ಹೂಗಳಿಗಾಗಿ ತೋಟಗಳಲ್ಲಿ, ಉದ್ಯಾನವನಗಳಲ್ಲಿ ಅಲಂಕಾರಕ್ಕೆ ಮತ್ತು ದೇವಾಲಯಗಳ ಬಳಿಯಲ್ಲಿ ಪೂಜೆಗೆ ಬೆಳೆಯುತ್ತಾರೆ.

ವರ್ಣನೆ : ನೆಟ್ಟಗೆ ದಪ್ಪ ಕಾಂಡವಿದ್ದು ಮೇಲ್ಗಡೆಗೆ ಬೆಳೆಯುವ ಕೊಂಬೆಗಳನ್ನು ಹೊಂದಿರುವ ಸುಂದರ ನಿತ್ಯಹಸಿರು ಮರ. ದೊಡ್ಡ ಈಟಿಯಾಕಾರದ, ಸರಳ ಪರ್ಯಾಯ ಜೋಡಣೆಯ, ಸಮ ಅಂಚುಳ್ಳ ಹೊಳಪು ಮೇಲ್ಭಾಗದ ವೃಂತ ಪೂರ್ಣವಾಗಿರುವ ಎಲೆಗಳು. ದೊಡ್ಡ, ಎಲೆಯ ಮೊಗ್ಗುಗಳನ್ನು ಮುಚ್ಚಿರುವ ವೃಂತ ಪರ್ಣಗಳು, ಬೂದು ಮಿಶ್ರಿತಹಳದಿ. ಮೃದು ಮೋಲ್ಮೈ. ಶೀಘ್ರ ಉದುರುವ ಪುಷ್ಪಪತ್ರಕದಿಂದ ಮುಚ್ಚಿರುವ ಹೂ ಮೊಗ್ಗು. ಎಲೆಯ ಕಂಕುಳಲ್ಲಿ ಒಂಟಿ, ದ್ವಿಲಿಂಗ. ಅಧೋಶಲಾಕೆಯ ತ್ರಿಜ್ಯ ಸಮಪಾರ್ಶ್ವ ಹೂವುಗಳು. ಅನೇಕ ಸುತ್ತಿನಲ್ಲಿ ಜೋಡಿಸಿರುವ ಕಡು ಹಳದಿ ಅಥವಾ ಕೆಂಪು ಮಿಶ್ರಿತ ಹಳದಿಯ ಅತಿ ಸುವಾಸನೆಯುಳ್ಳ 15 ಅಥವಾ ಹೆಚ್ಚು ದಳಗಳ ಪುಷ್ಪಾವರಣ. ಉದ್ದವಾಗಿರುವ ಪುಷ್ಪಪೀಠದ ಮೇಲೆ ಸುತ್ತು ಜೋಡಣೆಯಲ್ಲಿರುವ ಅನೇಕ ಕೇಸರಗಳು. ಪುಷ್ಪಪೀಠದ ಮೇಲೆ ಸುತ್ತು ಜೋಡಣೆಯಲ್ಲಿರುವ ಬಿಡಿಯಾದ, ಅನೇಕ ಶಲಾಕಕೋಶಗಳು. ಉಚ್ಚ ಅಂಡಾಶಯ. ಬಹಿಸ್ಥ ಗೋಡೆಯ ಅಂಡಕಾಧಾರಕ್ಕೆ ಅಂಟಿಕೊಂಡಿರುವ 2 ಅಥವಾ ಅನೇಕ ಅಂಡಕಗಳು. ಸಾಮೂಹಿಕ ಏಕಸೀಳು ಫಲ. ಭ್ರೂಣಾಹಾರವಿರುವ ಸಣ್ಣ ಭ್ರೂಣವುಳ್ಳ ಮೂಲೆಗಳನ್ನು ಹೊಂದಿದ, ಕೆಂಪು, ಮೃದು ತಿರುಳಿನ ಹೊರಕವಚ ಬೀಜಗಳು. ಫಲಗಳು ಒಡೆದಾಗ ಬೀಜಗಳು ಸಣ್ಣದಾರದಂತಿರುವ ಅಂಡಕ ದಂಡದಿಂದ ಹೊರಗಡೆ ನೇತಾಡುತ್ತಿರುತ್ತವೆ.

ಉಪಯೋಗಗಳು ; ಸಂಪಿಗೆ ತೈಲ ಒಂದು ಜನಪ್ರಿಯ ಸುಗಂಧ ತೈಲ. ಬಹಳ ಸುವಾಸನೆಯ ಸಂಪಿಗೆ ಹೂವುಗಳನ್ನು ಲೀನಕಾರಿಗಳಿಂದ ಸಂಸ್ಕರಿಸಿ ಬಾಷ್ಪೀಕರಿಸಿ ತೈಲ ತೆಗೆಯುತ್ತಾರೆ. ಕೇಶವರ್ಧಕ ತೈಲಗಳು, ಅತ್ತರ್‌ಗಳು ಹಾಗೂ ಊದುಬತ್ತಿ ತಯಾರಿಕೆಗಳಲ್ಲಿ ಇದನ್ನು ಬಳಸುತ್ತಾರೆ.



ಚಿತ್ರ 43 : ಸಂಪಿಗೆ

ಸುಮಧುರ ಸುವಾಸನೆಯ ಸಂಪಿಗೆ ಹೂವುಗಳನ್ನು ದೇವರ ಪೂಜೆಗೆ ಮತ್ತು ಮಹಿಳೆಯರ ಕೇಶಾಲಂಕಾರಕ್ಕೆ ಉಪಯೋಗಿಸುತ್ತಾರೆ. ಈ ಮರದ ವಿವಿಧ ಭಾಗಗಳನ್ನು ಅನೇಕ ರೀತಿಯ ರೋಗ ನಿವಾರಣೆಗೆ ಬಳಸುತ್ತಾರೆ. ಎಲೆಯಿಂದ ತೆಗೆದ ರಸವನ್ನು ಜೇನುತುಪ್ಪದೊಡನೆ ಬೆರಸಿ ಹೊಟ್ಟೆ ಶೂಲೆಯ ನಿವಾರಣೆಗೆ ಉಪಯೋಗಿಸಬಹುದು. ಈ ಮರದ ತೊಗಟೆಯನ್ನು ಪುಡಿ ಮಾಡಿ ಜ್ವರ ನಿರೋಧಕವಾಗಿ ತೊಗಟೆಯಿಂದ ತೆಗೆದ ಕಷಾಯವನ್ನು ಜಠರ ಮತ್ತು ಚರ್ಮದ ಊತ ನಿವಾರಣೆಗಾಗಿ ಉಪಯೋಗಿಸಬಹುದು. ಒಣಗಿರುವ ಕಹಿ ಬೇರನ್ನು ತೇದು ತೆಗೆದ ಗಂಧವನ್ನು ಮೊಸರು ಅಥವಾ ಒಡೆದ ಹಾಲಿನ ಜೊತೆಯಲ್ಲಿ ಕುರು ಮತ್ತು ಊತಗಳುಳ್ಳ ದೇಹದ ಭಾಗಗಳಿಗೆ ಲೇಪಿಸಬಹುದು. ಕೊಬ್ಬರಿ ಎಣ್ಣೆಯಲ್ಲಿ ಹೂವುಗಳನ್ನು ಅರೆದು ತಯಾರಿಸಿದ ಗಂಧವನ್ನು ಸಂಧಿವಾತ ರೋಗಿಗಳಿಗೆ ಲೇಪನೆಯಂತೆ ಬಳಸಬಹುದು. ಬೀಜಗಳಿಂದ ಮಾಡಿದ ಪುಡಿಯನ್ನು ಪಾದಗಳಲ್ಲಿ ಬರುವ ಸೀಳುಗಳ ನಿವಾರಣೆಗಾಗಿ ಉಪಯೋಗಿಸಬಹುದು.

ಇತರ ಪ್ರಭೇದಗಳು

1. ದೊಡ್ಡ ಸಂಪಿಗೆ (ಮೈಕೇಲಿಯಾ ನೀಲಗಿರಿಕ ; Michelia nilagirica Zenk.)


2. ಚೈನಾ ಸಂಪಿಗೆ (ಮೈಕೇಲಿಯಾ ಆಲ್ಬ; Michelia alba Dc.)

ಈ ಹೂವುಗಳು ಸಹ ಒಳ್ಳೆಯ ಸುವಾಸನೆ ಹೊಂದಿದ್ದು ದೇವರ ಪೂಜೆ ಮತ್ತು ಮಹಿಳೆಯರ ಕೇಶಾಲಂಕಾರಕ್ಕೆ ಉಪಯೋಗವಾಗುತ್ತವೆ.

46. ಸೆಲರಿ

(ಏಪಿಯಮ್ ಗ್ರೇವಿಯೋಲೆನ್ಸ್: Apium graveolens Linn.)

ವ್ಯಾಪನೆ : ಇದರ ತವರು ದಕ್ಷಿಣ ಯೂರೋಪ್, ಉತ್ತರ ಪಶ್ಚಿಮ ಹಿಮಾಲಯದ ತಪ್ಪಲು ಮತ್ತು ಪಂಜಾಬಿನ ಕೆಲವು ಗುಡ್ಡಗಾಡು ಪ್ರದೇಶಗಳು. ಹೆಚ್ಚಾಗಿ ಈ ಪ್ರದೇಶಗಳ ಜವುಗು ಭೂಮಿಯಲ್ಲಿ ಇದು ಬೆಳೆಯುತ್ತದೆ. ಇತ್ತೀಚೆಗೆ ಭಾರತದ ಅನೇಕ ಪ್ರದೇಶಗಳಲ್ಲಿ ಇದನ್ನು ಬೆಳೆಯುತ್ತಿದ್ದಾರೆ. ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ತೋಟಗಾರಿಕೆ ಬೆಳೆಯಂತೆ ಬೆಳೆಯುತ್ತಿದ್ದಾರೆ.



ಚಿತ್ರ 44: ಸೆಲರಿ

ವರ್ಣನೆ : ಮೃದು ಬೇರುಗಳನ್ನುಳ್ಳ ಸುಮಾರು 1 ಮೀಟರ್ ಎತ್ತರದ ಏಕ ಅಥವಾ ದ್ವಿಸಾಂವತ್ಸರಿಕ ಶಾಕ. ಉದ್ದ, ಮೃದು ರಸಭರಿತ ತೊಟ್ಟುಗಳನ್ನುಳ್ಳ ಸಂಯುಕ್ತ ಎಲೆಗಳು. ಸಂಯುಕ್ತ ಛತ್ರಿಗೊಂಚಲು ಪುಷ್ಪಮಂಜರಿ. ಬಿಳಿಯ 5 ಸುತ್ತುಗಳಿರುವ ಉಪರಿಶಲಾಕೆಯ, ದ್ವಿಲಿಂಗ, ಹೊರಬದಿಗೆ ಸಮದ್ವಿಪಾರ್ಶ್ವ ಹಾಗೂ ಮಧ್ಯದಲ್ಲಿ ತ್ರಿಜ್ಯಸಮ ಪಾರ್ಶ್ವ ಹೂವುಗಳು. ಚಿಕ್ಕದಾಗಿರುವ 5 ಬಿಡಿ ಪುಷ್ಪದಳಗಳು. ಬಿಡಿಯಾಗಿರುವ 5 ಕೇಸರಗಳು. ಕೆಳಭಾಗದ ಎರಡು ಸಂಯುಕ್ತ ಅಂಡಕೋಶಗಳು. ಎರಡು ಕೋಣೆಗಳಿದ್ದು ಪ್ರತಿ ಕೋಣೆಯಲ್ಲಿ ಒಂದು ಅಂಡಕ ಅಕ್ಷಕ ಅಂಡಕಾಧಾರಕ್ಕೆ

ಅಂಟಿದ್ದು, ಅಂಡಾಶಯದ ಮೇಲ್ಗಡೆಗೆ ಸ್ಟೈಲೋಪೋಡಿಯಂ ಇದ್ದು ಎರಡು ಶಲಾಕ ಗಳಿರುವ ಚಾಯಾಂಗ, ಚಪ್ಪಟೆ ಪಾರ್ಶ್ವಗಳ ಅಂಡಾಕಾರದ ಚಿಕ್ಕ ಕ್ರಿಮೋಕಾರ್ಪ್ ಫಲ. ಹೆಚ್ಚು ಕಡಮೆ ಬಾಲಚಂದ್ರಾಕಾರದ, ದಟ್ಟ ಕಂದು ವರ್ಣದ 1-2 ಸೆಂಟಿ ಮೀಟರ್ ಉದ್ದ ಹಾಗೂ 1 ಸೆಂಟಿಮೀಟರ್‌ಗಿಂತ ಸ್ವಲ್ಪ ಕಡಮೆ ವ್ಯಾಸದ 5 ದಿಣ್ಣೆ ಗಳು. ಬಿಡಿ ಫಲಾಂಶಕಗಳು,

ಉಪಯೋಗಗಳು : ಇದರ ಬೀಜಗಳಿಂದ ಸೆಲೆರಿ ಸುಗಂಧ ತೈಲವನ್ನು ತಯಾರಿಸುವರು. ಸೆಲೆರಿ ಬೆಳೆಗೆ ಒಳ್ಳೆಯ ನೀರಿನ ಪೂರೈಕೆ ಮತ್ತು ಆಗಾಗ್ಗೆ ಗೊಬ್ಬರ ಪೂರೈಕೆ ಮಾಡುವುದು ತುಂಬಾ ಅವಶ್ಯಕ. ಪಂಜಾಬ್ ಮತ್ತು ಉತ್ತರ ಪ್ರದೇಶದ ಸಹರಾನಪುರದ ಹತ್ತಿರ ಸೆಲೆರಿಯನ್ನು ಶೀತಲ ಹವಾಮಾನದಲ್ಲಿ ಬೆಳೆಯುವರು. ಇದರ ಕಾಳುಗಳನ್ನು ಪರದೇಶಕ್ಕೆ ರಫ್ತು ಮಾಡುತ್ತಾರೆ. ಒಂದು ಹೆಕ್ಟೇರಿಗೆ ಸುಮಾರು 735 ರಿಂದ 827 ಕಿಲೋಗ್ರಾಮ್ ಕಾಳುಗಳನ್ನು ಪಡೆಯಬಹುದು. ಫಲಗಳನ್ನು ಆವಿರೀತಿಯ ಬಾಷ್ಪೀಕರಣ ಮಾಡಿ ಶೇಕಡಾ 2 ರಿಂದ 3 ರಷ್ಟು ಪ್ರಮಾಣದಲ್ಲಿ ಸೆಲರಿ ತೈಲವನ್ನು ತೆಗೆಯಬಹುದು. ಈ ತೈಲವು ವರ್ಣರಹಿತ ಅಥವಾ ತಿಳಿಹಳದಿಯಾಗಿದ್ದಲ್ಲಿ ವಿಶಿಷ್ಟ ಸುವಾಸನೆಯನ್ನು ಹೊಂದಿರುತ್ತದೆ. ಸೆಲೆರಿ ಸೊಪ್ಪಿನಿಂದಲೂ (ಎಳೆಯ ಹಣ್ಣುಗಳ ಸಹಿತ) ಸಹ ಸುವಾಸನೆ ತೈಲವನ್ನು ತಯಾರಿಸುವರು. ಆದರೆ ಈ ರೀತಿ ಯಲ್ಲಿ ತಯಾರಿಸಿದ ತೈಲವು ಬೀಜದಿಂದ ತಯಾರಿಸಿದ ತೈಲದಷ್ಟು ಬಳಕೆಯಲ್ಲಿಲ್ಲ ಮತ್ತು ಹೆಚ್ಚಿನ ಮಹತ್ವ ಪಡೆದಿಲ್ಲ. ಭಾರತವು 1957 ಮತ್ತು 1958 ರಲ್ಲಿ ಅಮೆರಿಕ ದೇಶಕ್ಕೆ ಅನುಕ್ರಮವಾಗಿ 17.7 ಲಕ್ಷ ಮತ್ತು 18.5 ಲಕ್ಷ ಬೆಲೆಯುಳ್ಳ ಸೆಲೆರಿ ಬೀಜಗಳನ್ನು ರಫ್ತು ಮಾಡಿರುವುದಾಗಿ ತಿಳಿದುಬಂದಿದೆ. ಆದರೆ ಭಾರತದಲ್ಲಿ ಬೀಜ ಮತ್ತು ಸಸ್ಯದಿಂದ ಸಾಕಷ್ಟು ಪ್ರಮಾಣದಲ್ಲಿ ತೈಲವನ್ನು ತಯಾರಿಸುತ್ತಿಲ್ಲ. ಸೆಲೆರಿ ಫಲಗಳು ಸುವಾಸನೆ ಹಾಗೂ ಒಂದು ರೀತಿಯ ತೀಕ್ಷ್ಣ ರುಚಿ ಪಡೆದಿರುತ್ತವೆ. ಈ ಕಾರಣದಿಂದಾಗಿ ಸಾಮಾನ್ಯವಾಗಿ ಇವುಗಳನ್ನು ಮಸಾಲೆ ಪದಾರ್ಥಗಳಲ್ಲಿ ಬಳಸುವುದುಂಟು. ಅಲ್ಲದೆ, ಮಾಂಸದ ಸಾರು, ಕೋಸಂಬರಿ, ಹಣ್ಣಿನ ರಸಾಯನ, ಟೊಮ್ಯಾಟೊ ಹಣ್ಣಿನ ರಸ, ಗೊಜ್ಜು, ಸಂಬಾರ, ಉಪ್ಪಿನಕಾಯಿ ಮೊದಲಾದಂವು ಗಳನ್ನು ಸ್ವಾದಿಷ್ಟ ಮತ್ತು ಸುವಾಸಿತಗೊಳಿಸಲು ಉಪಯೋಗಿಸುವರು. ಇದೇ ರೀತಿ ಸೆಲರಿ ತೈಲವನ್ನು ರುಚಿ ಮತ್ತು ಸುವಾಸಿತಗೊಳಿಸಲು ಉಪಯೋಗಿಸುವರು. ಈ ತೈಲವು ತುಂಬಾ ಸುವಾಸನೆ ಮತ್ತು ರುಚಿ ಹೊಂದಿರುವುದರಿಂದ ಅನೇಕ ರೀತಿಯ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಕೆಲವು ಅತ್ತರ್‌ಗಳನ್ನು ತಯಾರಿಸುವ ಕಾಲದಲ್ಲಿ ಸ್ಥಿರೀಕರಿಸಲೂ ಸಹ ಇದನ್ನು ಉಪಯೋಗಿಸುವರು. ರಸಭರಿತ ಸೆಲರಿ ಎಲೆ ಮತ್ತು ಕಾಂಡಗಳನ್ನು ಹಸಿಯಾಗಿ ಅಥವಾ ರಸಾಯನ, ಕೋಸಂಬರಿಗಳಲ್ಲಿ ಬೆರೆಸಿ ತಿನ್ನುವರು. ಈ ಸಸ್ಯವನ್ನು ಕಾಯಿ ಪಲ್ಲೆಯಂತೆ ಕುದಿಸಿ

ತಿನ್ನುವುದುಂಟು. ಚೆನ್ನಾಗಿ ಅರೆದ ಸೆಲರಿ ಫಲ ಮತ್ತು ಉಪ್ಪಿನಪುಡಿಯನ್ನು ಬೆರೆಸಿ ಸೆಲರಿ ಉಪ್ಪು ಮಿಶ್ರಣವನ್ನು ತಯಾರಿಸುವರು.

ಈ ಸಸ್ಯವು ಔಷಧಿಯುಕ್ತ ಉಪಯೋಗಗಳನ್ನು ಸಹ ಹೊಂದಿದೆ. ಅನೇಕ ಔಷಧಿಗಳನ್ನು ಸುವಾಸಿತಗೊಳಿಸುವಿಕೆ, ಹೊಟ್ಟೆಉಬ್ಬರದ ಉಪಶಮನ ಹಾಗೂ ಜಠರ ರೋಗ ನಿವಾರಣೆಗೆ ಇದು ಉಪಯೋಗವಾಗುತ್ತದೆ. ಯೂರೋಪ್‌ನಲ್ಲಿ ಸ್ನಾಯುಗಳ ನೋವನ್ನು ಕಡಮೆ ಮಾಡಲು ಇದರ ಕಷಾಯವನ್ನು ಕುಡಿಯುವುದು ಅತಿ ಬಳಕೆ ಯಲ್ಲಿದೆ. ಈ ಸಸ್ಯವು ಉದ್ವೇಗವನ್ನು ಕಡಮೆ ಮಾಡಿ ನರಗಳನ್ನು ಶಾಂತವಾಗಿಸುವ ಗುಣವನ್ನು ಸಹ ಹೊಂದಿರುತ್ತದೆ.

47. ಸಿಂಬೊಪೋಗಾನ್ ಹುಲ್ಲು

(Cymbopogon ಪ್ರಭೇದ)

ವ್ಯಾಪನೆ : ಸಿಂಬೊಪೋಗಾನ್ ಪ್ರಭೇದದಲ್ಲಿ ಅನೇಕ ಸುಗಂಧಯುಕ್ತ ಪ್ರಭೇದ ಗಳಿದ್ದು ಅವುಗಳಲ್ಲಿ ಲಂತಿಬಲೆ ಹುಲ್ಲು, ರೋಷಾಹುಲ್ಲು, ಸಿಟ್ರೊನೆಲ್ಲಾ ಹುಲ್ಲು ಮುಖ್ಯವಾದವು. ಲಂತಿಬಲೆ ಹುಲ್ಲು ಕೇರಳದ ಗುಡ್ಡಗಳ ಇಳಿಜಾರು ಭಾಗದಲ್ಲಿ ಸಾಕಷ್ಟು ಬೆಳೆಯುತ್ತದೆ. ತಮಿಳು ನಾಡಿನ ತಿರುನೈವೇಲಿ ಮತ್ತು ಕರ್ನಾಟಕದ ಎಲ್ಲ ಭಾಗಗಳಲ್ಲಿ ಇದನ್ನು ಕಾಣಬಹುದು. ರೋಷಾಹುಲ್ಲು ಸಾಮಾನ್ಯವಾಗಿ ಮಧ್ಯ ಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಬೆಳೆಯುತ್ತದೆ. ಸಿಟ್ರೊನೆಲ್ಲಾ ಹುಲ್ಲನ್ನು ಸಿಲೋನಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಭಾರತದ ಉಷ್ಣ ಪ್ರದೇಶ ಗಳಲ್ಲಿ ಇದನ್ನು ಕಾಣಬಹುದು.

ವರ್ಣನೆ : ಈ ಜಾತಿಯಲ್ಲಿ ಬಹುಸಾಂವತ್ಸರಿಕ, ದಟ್ಟವಾಗಿ ಕುಚ್ಚಿನಂತೆ ಬೆಳೆಯುವ, ಸುವಾಸನೆಯುಳ್ಳ ಶಾಕಗಳು. ಶಿಫಾವೃಂತ ಅಥವಾ ಭೂಸ್ತಾರಿ ಕಾಂಡ. ಸರಳ, ತೊಟ್ಟಿಲ್ಲದ ಪರ್ಯಾಯ ಜೋಡಣೆಯ, ಸಮಾನಾಂತರ ನರವಿನ್ಯಾಸವುಳ್ಳ, ಕಿರು ಎಲೆ ಹೊಂದಿದ, ಒರಟು ಸಮತಲ ಎಲೆಗಳು. ಅನೇಕ ಶಾಖೆ ಬುಡದಲ್ಲಿ ಜೋಡಿ ಅಂತ್ಯಾರಂಭಿಗಳಿರುವ ಅನೇಕ ಕಿರುಗುಚ್ಛಗಳ ಮಿಶ್ರರೀತಿಯ ಪುಷ್ಪಮಂಜರಿ. ಜೋಡಿ ಯಾದ ಎರಡು ಅಂತ್ಯಾರಂಭಿಗಳಲ್ಲಿ ಒಂದು ಮಾತ್ರ ಪುಷ್ಪಮಂಜರಿವೃಂತವನ್ನು ಹೊಂದಿರುತ್ತದೆ. ಕೆಳಗಡೆಯ ಕಿರುಗುಚ್ಛ ಒಂದನ್ನು ಹೊರತು ಉಳಿದ ಎಲ್ಲ ಕಿರು ಗುಚ್ಛಗಳು ತೊಟ್ಟುರಹಿತ. ಈ ತೊಟ್ಟಿಲ್ಲದ ಕಿರುಗುಚ್ಛಗಳು ಸಾಮಾನ್ಯವಾಗಿ ಮೇಲ್ಭಾಗದಲ್ಲಿ, ಅಪರೂಪವಾಗಿ ಪಾರ್ಶ್ವಭಾಗದಲ್ಲಿ ಕುಗ್ಗಿದ್ದು, ಹೂವುಗಳನ್ನು ಆವರಿಸಿ ರಕ್ಷಣೆ ನೀಡುವ ಒಂದು ಜೊತೆ ಸುಂಕಗಳು ಪರ್ಯಾಯ ಜೋಡಣೆಯಲ್ಲಿ ಇರುತ್ತವೆ. ಕೆಳಗಿನ ಸುಂಕ ಸಮತಲವಾಗಿ ಸ್ವಲ್ಪ ಕುಗ್ಗಿ ಮಧ್ಯಭಾಗದಿಂದ ಸ್ವಲ್ಪ ಮೇಲ್ಗಡೆ ಎರಡು ದೋಣಿಗಳನ್ನು ಹೊಂದಿರುತ್ತದೆ. ಮೇಲಿನ ಸುಂಕ ದೋಣಿಯಾ

ಕಾರ, ಒಂದೇ ಒಂದು ದೋಣಿ ದಳವನ್ನು ಹೊಂದಿರುತ್ತದೆ. ಊಬುಗಳು ತೆಳುಪಾರ ದರ್ಶಕವಿದ್ದು ಕೆಳಗಿನ ಊಬು ಸಂಪೂರ್ಣವಾಗಿ ಪೊಳ್ಳಾಗಿ ಮೇಲಿನ ಊಬು ಎರಡು ಭಾಗಗಳಾಗಿ ತೆಳು ಉದ್ದನೆ ಚೂಪು ತುದಿ ಹೊಂದಿರುತ್ತದೆ. ಊಬು ಸಾಮಾನ್ಯವಾಗಿ ದ್ವಿಲಿಂಗ ಹೂವುಗಳನ್ನು ಹೊಂದಿರುತ್ತದೆ. ತೊಟ್ಟಿರುವ ಕಿರುಗುಚ್ಛ, ತಮ್ಮ ಆಕಾರ ಮತ್ತು ಗಾತ್ರಗಳಲ್ಲಿ ತೊಟ್ಟಿಲ್ಲದ ಕಿರುಗುಚ್ಛಗಳಿಂದ ಬೇರೆಯಾಗಿದ್ದು ಕುಗ್ಗಿರುವುದಿಲ್ಲ. ಊಬು ತೆಳುವು, ಗಂಡು ಹೂವುಗಳನ್ನು ಮಾತ್ರ ಹೊಂದಿರುತ್ತದೆ. ಚಿಕ್ಕ, ಪಾರ್ಶ್ವ ಸಮರೂಪತೆಯ, ಅಧೋಶಲಾಕ ಹೂವುಗಳು. ಮಾರ್ಪಾಡಾಗಿ ಕ್ಷೀಣಹೊಂದಿದ ಲಾಡಿಕ್ಯೂಲ್ ಎಂದು ಕರೆಯಲ್ಪಡುವ ಎರಡು ಪರಿದಳಪುಂಜಗಳು. ಪ್ರವರ್ತನ ಮಾದರಿ ಜೋಡಣೆ. ಉದ್ದಕ್ಕೆ ಸೀಳುವ ಪರಾಗ ಕೋಶ. ಒಂದು ಕೋಣೆಯ, ನೇರ ಪ್ರಕಾಶೋನ್ಮುಖ ಮಾದರಿ ಅಂಡಕ. 2 ಶಲಾಕೆಗಳಿರುವ ಜಾಯಾಂಗ. ದೀರ್ಘ ಚತುರಸ್ರ ಆಕಾರದ, ಅರ್ಧದಷ್ಟು ಉದ್ದಕ್ಕೆ ವ್ಯಾಪಿಸಿರುವ ಭ್ರೂಣವನ್ನು ಹೊಂದಿದ ಕ್ಯಾರಿಯೋಪ್ಸಿಸ್ ಫಲ.

ಇತರ ಪ್ರಭೇದಗಳು

1) ನಿಂಬೆ ಹುಲ್ಲು

(ಸಿಂಬೋಪೋಗಾನ್ ಸಿಟ್ರೇಟಸ್; Cymbopogon citratus Stapf.)

ಉಪಯೋಗಗಳು : ನಿಂಬೆ ಹುಲ್ಲಿನ ಎಲೆಗಳನ್ನು ಬಾಷ್ಪೀಕರಿಸಿ ತೆಗೆದ ತೈಲವನ್ನು ನಿಂಬೆ ಎಣ್ಣೆ ಎಂದು ಕರೆಯುತ್ತಾರೆ. ಈ ತೈಲವು ಕೆಂಪುಮಿಶ್ರಿತ ಹಳದಿ ವಾಸನೆ. ರುಚಿಯಲ್ಲಿ ನಿಂಬೆ ವಾಸನೆಯನ್ನು ಹೋಲುತ್ತದೆ. ಎಲೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ (ಶೇಕಡಾ 70–80) ಸಿಟ್ರೋಲ್ ಘಟಕವಿರುವುದೇ ಈ ಗುಣಕ್ಕೆ ಮುಖ್ಯ ಕಾರಣ. ಈ ತೈಲವನ್ನು ಹೆಚ್ಚು ಪ್ರಮಾಣದಲ್ಲಿ ಅತ್ತರ್, ಶೃಂಗಾರ ವಸ್ತುಗಳ ತಯಾರಿಕೆಯಲ್ಲಿ ಸುವಾಸನೆಗೆ ಬಳಸುತ್ತಾರೆ.

ಈ ಸಸ್ಯವನ್ನು ವೈದ್ಯಕೀಯ ಚಿಕಿತ್ಸೆಗಳಿಗಾಗಿ ಬಳಸುತ್ತಾರೆ. ಈ ಹುಲ್ಲನ್ನು ನೀರಿನ ಜೊತೆ ಕಷಾಯ ಮಾಡಿ ಸ್ವೇದಕಾರಿಯಾಗಿ, ಅಜೀರ್ಣದಿಂದ ಬಳಲುವ ಮಕ್ಕಳಿಗೆ ಕೊಡುತ್ತಾರೆ. ನೆಗಡಿ ಶೀತಗಳ ಉಪಶಮನಕ್ಕೆ ಹಾಗೂ ಇದನ್ನು ಕರಿ ಮೆಣಸಿನ ಜೊತೆಯಲ್ಲಿ ಬೆರೆಸಿ ವಾಂತಿ ವಿರೇಚನಗಳ ಉಪಶಮನ, ಮಲೇರಿಯ ರೋಗದ ಉಪಶಮನ, ಕ್ರಮ ತಪ್ಪುವ ಋತುಸ್ರಾವವನ್ನು ಸರಿಪಡಿಸುವಿಕೆಗಳಿಗಾಗಿ ಉಪಯೋಗಿಸುವುದುಂಟು. ಗಟ್ಟಿ ಕಷಾಯವನ್ನು ಉಳುಕು ಮತ್ತಿತರ ನರಗಳ ಬಲ ಹೀನತೆಯ ನಿವಾರಣೆಗಾಗಿ ಲೇಪಿಸುವರು. ಎಲೆಗಳನ್ನು ಮಜ್ಜಿಗೆ ಜೊತೆ ಬೆರೆಸಿ ಗಜಕರ್ಣ, ಚರ್ಮರೋಗ ನಿವಾರಣೆಗೆ ಸೇವಿಸಬಹುದು.

2) ಅಂಶಿಬಲೆ ಹುಲ್ಲು

(ಸಿ. ಫ್ಲೆಕ್ಸೋಸಸ್; C. flexosus Wats)

ಉಪಯೋಗಗಳು : ಎಲೆಗಳನ್ನು ಬಾಷ್ಪೀಕರಿಸಿ ತೆಗೆಯುವ ಈ ಎಣ್ಣೆಯು ವರ್ಣರಹಿತ ಅಥವಾ ತಿಳಿಹಸುರು ಮಿಶ್ರಿತ ಹಳದಿ ವರ್ಣವಾಗಿದ್ದು ಇದರಲ್ಲಿ ಶೇಕಡಾ 75-90 ಜಿರ್ಯಾನಿಯೋಲ್ ಇರುವ ಕಾರಣದಿಂದ ಕಂಪಾದ ಗುಲಾಬಿ ರೀತಿಯ ವಾಸನೆಯನ್ನು ಹೊಂದಿರುತ್ತದೆ. ಸುವಾಸನೆಯುಳ್ಳ ಈ ತೈಲವನ್ನು ಅತ್ತರು, ಅಲಂಕಾರ ಸಾಧನ, ಸಾಬೂನುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

3) ಕುಂತಿ ಹುಲ್ಲು (ರೋಶಾಹುಲ್ಲು)

(ಸಿ. ಮಾರ್ಟಿನಿ; C. martini Wats)

ಉಪಯೋಗಗಳು : ಎಲೆಗಳನ್ನು ಬಾಷ್ಪೀಕರಿಸಿ ತೆಗೆಯುವ ಈ ಎಣ್ಣೆಯು ವರ್ಣರಹಿತ ಅಥವಾ ತಿಳಿ ಹಸುರುಮಿಶ್ರಿತ ಹಳದಿ ವರ್ಣವಾಗಿದ್ದು ಇದರಲ್ಲಿ ಶೇಕಡಾ



ಚಿತ್ರ 45 : ಕುಂತಿಹುಲ್ಲು

75-90 ಜಿರ್ಯಾನಿಯೋಲ್ ಇರುವ ಕಾರಣದಿಂದ ಕಂಪಾದ ಗುಲಾಬಿ ರೀತಿಯ ವಾಸನೆಯನ್ನು ಹೊಂದಿರುತ್ತದೆ. ಸುವಾಸನೆಯುಳ್ಳ ಈ ತೈಲವನ್ನು ಅತ್ತರು, ಅಲಂಕಾರ ಸಾಧನ, ಸಾಬೂನುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಈ ತೈಲವನ್ನು ಕೂದಲು ಉದುರುವಿಕೆ, ಸೊಂಟರೋಗದಲ್ಲಿ ಬರುವ ವಾತರೋಗ ಮತ್ತು ಕೆಲವು ಚರ್ಮರೋಗಗಳ ನಿವಾರಣೆಗಾಗಿ ಉಪಯೋಗಿಸುವರು. ಇದಲ್ಲದೆ ಸೊಳ್ಳೆಗಳ ನಿವಾರಣೆಗಾಗಿ ಬಳಸುವ ಮುಲಾಮುಗಳಲ್ಲಿ ಈ ಎಣ್ಣೆಯನ್ನು ಬೆರೆಸುತ್ತಾರೆ.

4) ಸಿಟ್ರೊನೆಲ್ಲ ಹುಲ್ಲು

(ಸಿ. ನರ್ಡಸ್; C. nurdus Rendle.)

ಉಪಯೋಗಗಳು : ಸುವಾಸನೆಯುಳ್ಳ ಈ ತೈಲವನ್ನು ಕಡಮೆ ಬೆಲೆಯ ಶ್ರೇಷ್ಠವಾದ ಸುವಾಸನೆ ಸಾಬೂನು, ಅತ್ತರ್, ಪಾಲಿಶ್ ಇತ್ಯಾದಿಗಳ ತಯಾರಿಕೆಯಲ್ಲಿ, ಕೀಟ ಮತ್ತು ಕ್ರಿಮಿನಾಶಕ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಾರೆ.




ಚಿತ್ರ 46 : ಸಿಟ್ರೊನೆಲ್ಲಾ ಹುಲ್ಲು

48. ಸೀಮೆ ಸೋಂಪು

(ಕಾರಮ್ ಕಾರ್ವಿ; Carum carvi Linn.)

ವ್ಯಾಪನೆ : ಈ ಸಸ್ಯವು ಕಾಶ್ಮೀರ, ಉತ್ತರ ಹಾಗೂ ದಕ್ಷಿಣ ಹಿಮಾಲಯ ಪ್ರದೇಶಗಳಲ್ಲಿ ಕಂಡುಬರುತ್ತದೆ. ಯೂರೋಪ್ ಮತ್ತು ಅಮೆರಿಕ ದೇಶಗಳಲ್ಲಿ ಸಹ ಬೆಳೆಯುತ್ತಾರೆ.

ವರ್ಣನೆ : ದ್ವಿಸಾಂವತ್ಸರಿಕ ಶಾಕ. ಪರ್ಯಾಯ ಜೋಡಣೆಯ ಗರಿರೂಪದ ಅಥವಾ ಹೆಚ್ಚಾಗಿ ಹರಿದಿರುವ ಎಲೆಗಳು. ಸಂಯುಕ್ತ ಛತ್ರಿ ಗೊಂಚಲು ಪುಷ್ಪಮಂಜರಿ. ಪುಷ್ಪಮಂಜರಿ ವೃಂತದ ತುದಿಯಲ್ಲಿ ಇನ್‌ವಲ್ಯೂಕರ್ ರೀತಿಯಲ್ಲಿ ಇರುವ ಪುಷ್ಪ ವೃಂತಕಗಳು. 3-8 ಹೂಗಳಿದ್ದು, ಹೊರಭಾಗದಲ್ಲಿ ಸಮದ್ವಿಪಾರ್ಶ್ವ ಮತ್ತು ಮಧ್ಯಭಾಗದಲ್ಲಿ ತ್ರಿಜ್ಯ ಸಮಪಾರ್ಶ್ವ ಶ್ವೇತವರ್ಣದ ಹೂವುಗಳು. ಪುಷ್ಪಪಾತ್ರಕಗಳು ಹಲ್ಲಿನಂತೆ ಚಿಕ್ಕದಾಗಿರುತ್ತವೆ ಅಥವಾ ಇರುವುದಿಲ್ಲ. ಅಗಲವಾದ, ದುಂಡು ತುದಿಯ ಅಸಮ 5 ಪುಷ್ಪದಳಗಳು. ಡಿಸ್ಕ್ ಮೇಲೆ ಆಳವಡಿಸಿದ 5 ಕೇಸರಗಳು.



ಚಿತ್ರ 47 : ಸೀಮೆಸೋಂಪು

ಕೆಳಸ್ಥಾನದ ಎರಡು ಸಂಯುಕ್ತ ಅಂಡಕೋಶಗಳ ಎರಡು ಕೋಣೆ ; ಪ್ರತಿ ಕೋಣೆಯಲ್ಲಿ ಒಂದು ಅಂಡಕ. ಅಕ್ಷಕ ಅಂಡಕಾಧಾರಕ್ಕೆ ಅಂಟಿರುವ ಅಂಡಾಶಯ. ಉದ್ದನೆ ಅಂಡಾಶಯದ ಮೇಲೆ ಒಳಗಡೆಗೆ ತಿರುವಿಕೊಂಡಿರುವ ಶಲಾಕೆ. ಟೋಪಿಯಂತಹ ಶಲಾಕಾಗ್ರ. ಉದ್ದ ಪಾರ್ಶ್ವಭಾಗ, ದಟ್ಟ ಕಂದುವರ್ಣದ ಕ್ರಿಮೊಕಾರ್ಪ್ ಫಲ, ಬಿಡಿಯಾಗಿ ಬಾಗಿದ, ಎರಡು ತುದಿ ಚೂಪಾಗಿರುವ, 3–7 ಮಿಲಿಮೀಟರ್ ಉದ್ದದ ಫಲಾಂಶಕಗಳು.

ಉಪಯೋಗಗಳು : ಸೀಮೆಸೋಂಪಿನ ಕಾಳು ಒಳ್ಳೆಯ ಸುವಾಸನೆ ಮತ್ತು ತೀಕ್ಷ್ಣ ರುಚಿಯನ್ನು ಹೊಂದಿರುತ್ತದೆ. ಈ ಕಾಳುಗಳಿಂದ ಬಂದ ತೈಲವನ್ನು ಕಾರ್ವಿ ಹಣ್ಣಿನ ತೈಲ ಎಂದು ಕರೆಯುತ್ತಾರೆ. ಈ ತೈಲವನ್ನು ನೀರು ಉಪಯೋಗಿಸಿ ಆವಿ ರೀತಿಯ ಬಾಷ್ಪೀಕರಣದ ಮೂಲಕ ತೆಗೆಯುತ್ತಾರೆ. ಈ ತೈಲವನ್ನು ಹೆಚ್ಚಾಗಿ ಮಸಾಲೆ ಪದಾರ್ಥಗಳು, ಸಾಂಬಾರು, ಪಲ್ಯ, ಉಪ್ಪಿನಕಾಯಿ, ಬ್ರೆಡ್, ಬಿಸ್ಕತ್ತು, ಕೇಕ್ ಹಾಗೂ ಕೆನೆಯಿಂದ ಮಾಡುವ ಪದಾರ್ಥಗಳನ್ನು ಸುವಾಸಿತಗೊಳಿಸಲು ಉಪಯೋಗಿಸುತ್ತಾರೆ. ಸೀಮೆಸೋಂಪಿನ ಕಾಳುಗಳಲ್ಲದೆ ಇದರ ಕಾಂಡ ಮತ್ತು ಎಲೆಗಳಿಂದ ಸುಗಂಧ ತೈಲವನ್ನು ಬಾಷ್ಪೀಕರಣದಿಂದ ತೆಗೆಯುತ್ತಾರೆ. ಕಾಂಡ ಮತ್ತು ಎಲೆಗಳಿಂದ ತೆಗೆದ ತೈಲಗಳಲ್ಲಿ ಮುಖ್ಯವಾಗಿ ಕಾಡಿನೆನ್ ಘಟಕವಿರುತ್ತದೆ.

ಕಾರ್ವಿ ಹಣ್ಣಿನ ತೈಲವನ್ನು ಜೀರ್ಣಕಾರಿಯಾಗಿ ಹಸಿವುಂಟುಮಾಡಲು ಮತ್ತು ವಾತಹರ ಔಷಧಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಇದನ್ನು ದನಗಳಿಗೆ ಮೇವಾಗಿಯೂ ಉಪಯೋಗಿಸಬಹುದು.

49. ಸೋಂಪು

(ಫೀನಿಕ್ಯುಲಮ್ ವಲ್ಗೇರ್ ; Foeniculum vulgare Mill)

ವ್ಯಾಪನೆ : ಮೆಡಿಟರೇನಿಯನ್ ಪ್ರದೇಶ ಇದರ ತವರು. ಈಗ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಸೋಂಪು ಬೆಳೆಯನ್ನು ಬೆಳೆಯುತ್ತಿದ್ದಾರೆ. ಭಾರತದಲ್ಲಿ ಹೆಚ್ಚಾಗಿ ಗುಜರಾತ್ ಮತ್ತು ಬಂಗ್ಲಾ ದೇಶಗಳಲ್ಲಿ ಬೆಳೆಯುತ್ತಾರೆ. ಕರ್ನಾಟಕದಲ್ಲಿ ಸಹ ಬೆಳೆಯುತ್ತಾರೆ.

ವರ್ಣನೆ : ಚಿಕ್ಕ ಏಕಸಾಂವತ್ಸರಿಕ ಶಾಕ. ಅನೇಕ ವಿಭಾಗಗಳಾಗಿ ಹರಿದ ಗರಿ ರೂಪದ, ಸಂಯುಕ್ತ, ಅಗಲ ಪತ್ರವೃಂತಗಳಿರುವ, ಪರ್ಯಾಯ ಜೋಡಣೆಯ ಎಲೆಗಳು. ಸಂಯುಕ್ತ ಛತ್ರಿಗೊಂಚಲಿನ ಪುಷ್ಪಮಂಜರಿ. ಉಪರಿ ಶಲಾಕೆಯ, ದ್ವಿಲಿಂಗ ಹೊರಭಾಗದಲ್ಲಿ ಸಮದ್ವಿಪಾರ್ಶ್ವತೆಯ ಮಧ್ಯಭಾಗದಲ್ಲಿ ತ್ರಿಜ್ಯ ಸಮಪಾರ್ಶ್ವ ರೂಪದ ಹೂವುಗಳು. ಶೂನ್ಯ ಪುಷ್ಪಪತ್ರಕಗಳು. ಅಗಲವಾದ 5 ಹಳದಿ ವರ್ಣದ ಬಿಡಿ ಪುಷ್ಪದಳಗಳು. ಬಿಡಿಯ 5 ಕೇಸರಗಳು. ಕೆಳಭಾಗದ ಎರಡು ಅಂಡಕೋಶಗಳು. ಎರಡು ಕೋಣೆಗಳಿದ್ದು ಪ್ರತಿಕೋಣೆಯಲ್ಲಿ ಒಂದು ಅಂಡಕವು ಅಕ್ಷಕ ಅಂಡಕಾಧಾರಕ್ಕೆ ಅಂಟಿಕೊಂಡಿರುವ ಜಾಯಾಂಗ. ದೀರ್ಘವೃತ್ತಾಕಾರದ, ಎರಡು ಭಾಗಗಳಾಗಿರುವ, ಫಲಧರ ಹೊಂದಿದ ಏಣುಗಳಿರುವ, ಸ್ವಲ್ಪ ಚಪ್ಪಟೆಯಾದ ಫಲಾಂಶಗಳಿರುವ ಕ್ರಿಮೊಕಾರ್ಪ್ ಫಲ.

ಉಪಯೋಗಗಳು : ಚೀನೀಯರು, ಭಾರತೀಯರು ಮತ್ತು ಈಜಿಪ್ಟಿನವರು ಎಷ್ಟೋ ಕಾಲದಿಂದ ಇದನ್ನು ಮಸಾಲೆಯಾಗಿ ಬಳಸುತ್ತಿದ್ದಾರೆ. ರೋಮನ್ನರು ಇವರ ಸುವಾಸನೆಯ ಕಾಳುಗಳಿಗಾಗಿ ಮತ್ತು ಕಾಂಡಗಳನ್ನು ತಿನ್ನುವುದಕ್ಕಾಗಿ ಬೆಳೆಸುತ್ತಿದ್ದರು. ಈ ಸಸ್ಯದ ಎಲ್ಲ ಭಾಗಗಳೂ ಸುವಾಸನೆಯನ್ನು ಹೊಂದಿದ್ದು ಅನೇಕ



ಚಿತ್ರ 48 : ಸೋಂಪು

ರೀತಿಯಲ್ಲಿ ಉಪಯೋಗವಾಗುತ್ತವೆ. ಈ ಕಾಳುಗಳನ್ನು ಅಡಿಗೆ ತಯಾರಿಕೆಯಲ್ಲಿ ಮತ್ತು ಕ್ಯಾಂಡಿಗಳ ತಯಾರಿಕೆಯಲ್ಲಿ ಹಾಗೂ ಮದ್ಯಪಾನಗಳಲ್ಲಿ ಉಪಯೋಗಿಸುತ್ತಾರೆ. ಇದರಿಂದ ತೆಗೆದ ಸುವಾಸಿತ ತೈಲವನ್ನು ಅತ್ತರ್ ಮತ್ತು ಸಾಬೂನು ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಸೋಂಪು ಒಳ್ಳೆಯ ಪಚನ ಕ್ರಿಯೆಯನ್ನು ಹೆಚ್ಚಿಸುವ ಗುಣ ಹೊಂದಿರುವುದರಿಂದ ಅದನ್ನು ಚೆನ್ನಾಗಿ ಕುದಿಸಿ ಅದರ ನೀರನ್ನು ಚಿಕ್ಕ ಮಕ್ಕಳಿಗೆ ಸಾಮಾನ್ಯವಾಗಿ ಕೊಡುತ್ತಾರೆ. ಭೇದಿ ಔಷಧದಂತೆಯೂ ಇದನ್ನು ಉಪಯೋಗಿಸುತ್ತಾರೆ.

50. ಶ್ರೀಗಂಧದ ಮರ

(ಸಂಟಾಲಮ್ ಅಲ್ಬಮ್ ; Santalum album Linn.)

ವ್ಯಾಪನೆ : ಶ್ರೀಗಂಧದ ಮರವು ಭಾರತ ಮತ್ತು ದಕ್ಷಿಣ ಪೂರ್ವ ಏಷ್ಯಾದಲ್ಲಿ ಬೆಳೆಯುತ್ತದೆ. ಇತ್ತೀಚೆಗೆ ಜಗತ್ತಿನ ಅನೇಕ ಪ್ರದೇಶಗಳಲ್ಲಿ ಇದನ್ನು ಬೆಳೆಯುತ್ತಾರೆ.



ಚಿತ್ರ 49 : ಶ್ರೀಗಂಧದ ಮರ

ಭಾರತದಲ್ಲಿ ಕರ್ನಾಟಕದ ಅರಣ್ಯಗಳಲ್ಲಿ ಇದನ್ನು ಯಥೇಚ್ಛವಾಗಿ ವನ್ಯವಾಗಿ ಬೆಳೆದಿರುವುದನ್ನು ಕಾಣಬಹುದು. ಕೇರಳದ ಅರಣ್ಯಗಳಲ್ಲಿ ಕೂಡ ಇದು ಬೆಳೆದಿದೆ.

ವರ್ಣನೆ : ಸಾಧಾರಣ ಎತ್ತರದ, ಕಪ್ಪು ಮಿಶ್ರಿತ ಕಂದು ತೊಗಟೆ ಹೊಂದಿದ ಕೊಂಬೆಗಳಿರುವ ನಿತ್ಯಹಸುರು ಮರ. ಉದ್ದ ಅಭಿಮುಖ ಜೋಡಣೆಯ, ಹೊಳಪಾದ ಮೇಲುಭಾಗವಿರುವ ಎಲೆಗಳು ತುದಿ ಅಥವಾ ಎಲೆ ಕಂಕುಳಲ್ಲಿ ಮಿಶ್ರ ಪುಷ್ಪಮಂಜರಿ. ಒಂದು ಚಿಕ್ಕ ಪುಷ್ಪಪತ್ರಕವಿರುವ, ಎರಡು ಪುಷ್ಪವೃಂತ ಪತ್ರಕಗಳಿರುವ ದ್ವಿಲಿಂಗ, ಅಧೋಶಲಾಕೆ ಅಥವಾ ಪರಿಶಲಾಕೆಯ ನೇರಳೆಯ ಚಿಕ್ಕ ಹೂವುಗಳು. 4 ಪರಿದಳಗಳ ಪರಿದಳಪುಂಜ. ಇದರ ಕೆಳಭಾಗಕ್ಕೆ ಅಂಟಿರುವ 4–5 ಕೇಸರಗಳು. 2–3 ಅಂಡಕಗಳಿರುವ ಮಧ್ಯಮ ಸ್ಥಾನದ ಅಂಡಾಶಯ. ಉದ್ದ ಶಲಾಕೆ ನಳಿಕೆ, 2-3 ವಿಭಜಿತ ಶಲಾಕಾಗ್ರ. ಓಟೆ ಫಲ.

ಉಪಯೋಗಗಳು : ಈ ಮರದಿಂದ ಶ್ರೀಗಂಧ ತೈಲವನ್ನು ಮರದ ಚೇಗು ಭಾಗದಿಂದ ಭಟ್ಟಿ ಇಳಿಸಿ ತಯಾರಿಸುತ್ತಾರೆ. ತೈಲವು ಅತ್ಯುತ್ತಮ ಸುವಾಸನೆ ಹೊಂದಿರುವುದರಿಂದ ಸಾಬೂನು, ಅತ್ತರ್, ಗಂಧದ ಕಡ್ಡಿ ಮತ್ತಿತರ ಸುಗಂಧ ಪದಾರ್ಥ ತಯಾರಿಕೆಯಲ್ಲಿ ಮಿಶ್ರಣ ಮಾಡುತ್ತಾರೆ.

ಶ್ರೀಗಂಧದ ಮರ ಮತ್ತು ಎಣ್ಣೆಯನ್ನು ಅನೇಕ ವೈದ್ಯಕೀಯ ಚಿಕಿತ್ಸೆಗಾಗಿ ಉಪಯೋಗಿಸುತ್ತಾರೆ. ಶ್ರೀಗಂಧದ ಎಣ್ಣೆಯನ್ನು ಉರಿಮೂತ್ರ, ಮೂತ್ರಕೋಶದ ಊತ, ಶುಕ್ಲದೋಷ ಮತ್ತು ಕೆಮ್ಮುಗಳ ನಿವಾರಣೆಗಾಗಿ ಉಪಯೋಗಿಸುತ್ತಾರೆ. ಶ್ರೀಗಂಧದ ಮರದಿಂದ ಗಂಧವನ್ನು ತೇಯ್ದು ಇದನ್ನು ಉರಿ ಮತ್ತು ಊತವಾಗಿರುವ ದೇಹದ ಮೇಲೆ, ಬೆವರುಸಾಲೆ ಮತ್ತು ಇತರ ಚರ್ಮರೋಗಗಳ ನಿವಾರಣೆಗೆ ಲೇಪನದಂತೆ ಉಪಯೋಗಿಸುತ್ತಾರೆ. ಇದಲ್ಲದೆ ಶ್ರೀಗಂಧದ ಮರವನ್ನು ದೊಡ್ಡ ದೊಡ್ಡ ಕೊಠಡಿಗಳಲ್ಲಿ ಇಡುವ ಸುಂದರವಾದ ಕೆತ್ತನೆಯ ಕ್ಯಾಬಿನ್‌ವಾಲ್, ಸುಂದರ ವಿಗ್ರಹ ಪೆಟ್ಟಿಗೆ, ಹಣಿಗೆಗಳು ಮತ್ತಿತರ ಅಲಂಕಾರ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಾರೆ.

51. ಹಿಪ್ಲಿ

(ಪೈಪರ್ ಲಾಂಗಮ್ ; Piper longum Linn.)

ವ್ಯಾಪನೆ : ಈ ಸಸ್ಯವನ್ನು ಭಾರತದ ಉಷ್ಣಪ್ರದೇಶಗಳಾದ ಕೇರಳ, ಆಂಧ್ರ, ಬಂಗಾಲಗಳಲ್ಲಿ ಬೆಳೆಯುತ್ತಾರೆ. ಉಷ್ಣ ಮತ್ತು ಆರ್ದ್ರತೆಯಿಂದ ಕೂಡಿದ ವಾತಾವರಣದಲ್ಲಿ, ಜೇಡಿ ಮತ್ತು ಮರಳುಮಿಶ್ರಿತ ಫಲವತ್ತಾದ ಮಣ್ಣಿನಲ್ಲಿ, ನೆರಳು ಇರುವ ಸ್ಥಳದಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಒಳ್ಳೆಯ ಗೊಬ್ಬರ ಹಾಕಿ ಆಗಾಗ್ಗೆ ಕಳೆ ತೆಗೆದರೆ ಇದರ ಬೆಳೆಯನ್ನು ಅಧಿಕ ಪ್ರಮಾಣದಲ್ಲಿ ಪಡೆಯಬಹುದು.

ವರ್ಣನೆ : ಹಬ್ಬುವ, ಕೃಶವಾದ ಚಿಕ್ಕ ಪೊದೆ. ಉಬ್ಬಿದ ಗಿಣ್ಣುಗಳ ಕಾಂಡ. ಸರಳ ಪರ್ಯಾಯ ಜೋಡಣೆಯ ಕೆಳಭಾಗದಲ್ಲಿ ಅಸಮವಾದ ಅಂಚುಳ್ಳ ಹೃದಯಾ

ಕಾರದ, ಎದ್ದು ಕಾಣುವ ಏಳು ನರವುಳ್ಳ ಗಿಡದ ಮೇಲ್ಭಾಗದಲ್ಲಿ ತೊಟ್ಟಿಲ್ಲದ ಮತ್ತು ಕೆಳಭಾಗದಲ್ಲಿ ಉದ್ದ ತೊಟ್ಟುಳ್ಳ ಹೊಳಪಿನ ಎಲೆಗಳು. ಪುಷ್ಪಮಂಜರಿ ವೃಂತದ ಮೇಲೆ ಏಕಲಿಂಗಿ ಹೂವುಗಳು. ಗಂಡು ಹೂವಿನ ಗೊಂಚಲು 2.5–7.5 ಸಂಟಿ ಮೀಟರ್ ಉದ್ದ ಮತ್ತು ಹೆಣ್ಣು ಹೂವಿನ ಗೊಂಚಲು 1.5–2 ಸೆಂಟಿಮೀಟರ್ ಉದ್ದ. ಕ್ಯಾಟಕಿನ್ ರೀತಿಯ ಪುಷ್ಪಮಂಜರಿ. ವೃಂತಕ್ಕೆ ಅಂಟಿದ್ದು ಬಟ್ಟಲಾಕಾರದ ಪುಷ್ಪ ಪತ್ರಕದ ಕಂಕಂಳಲ್ಲಿ ಕಾಣಸಿಕೊಳ್ಳುವ ಚಿಕ್ಕ ಏಕಲಿಂಗಿ ಹೂವುಗಳು. ಪರಿದಳ ಪುಂಜರಹಿತ 2–4 ಕೇಸರಗಳನ್ನು ಹೊಂದಿದೆ, ಎದ್ದು ಕಾಣುವ ಎರಡು ಪರಾಗಕೋಶ.



ಚಿತ್ರ 50 : ಹಿಪ್ಲಿ

ಚಿಕ್ಕ ಕೇಸರದಂಡದ ಗಂಡು ಹೂವುಗಳು. ಒಂದು ಕೋಣೆಯ ಅಂಡಾಶಯದಲ್ಲಿ ಒಂಟಿ ಮತ್ತು ನೇರ ಅಂಡಕವು ಕೆಳ ಅಂಡಕಾಧಾರಕ್ಕೆ ಅಂಟಿದ್ದು 2–5 ಶಲಾಕಾಗ್ರಕ್ಕೆ ಚಿಕ್ಕ ಶಲಾಕ. ಉಚ್ಚ ಜಾಯಾಂಗವಿರುವ ಹೆಣ್ಣು ಹೂವುಗಳು. ರಸಭರಿತ ಪುಷ್ಪ ಮಂಜರಿ ವೃಂತದಲ್ಲಿ ಸ್ವಲ್ಪ ಒಳಗೆ ಸೇರಿದ ಚಿಕ್ಕ 25 ಸೆಂಟಿಮೀಟರ್‌ವರೆಗೆ ವ್ಯಾಸವುಳ್ಳ ಹಸುರು ಮಿಶ್ರಿತ ಕಪ್ಪು ರಸಫಲ.

ಇತರ ಪ್ರಭೇದಗಳು : ಈ ಜಾತಿಯಲ್ಲಿ ಮೆಣಸು (ಪೈಪರ್ ನೈಗ್ರಮ್) ಪ್ರಭೇದವೂ ಸಹ ಸುಗಂಧಯುಕ್ತ ಉಪಯೋಗವನ್ನು ಹೊಂದಿರುತ್ತದೆ.

ಉಪಯೋಗಗಳು : ಈ ಸಸ್ಯದ ಒಣಗಿದ ಫಲ ಸುಗಂಧಯುಕ್ತ ಉಪಯೋಗ ಗಳನ್ನು ಹೊಂದಿರುತ್ತದೆ. ಅಪಕ್ವವಾದ ಹಿಪ್ಪಲಿ ಹಣ್ಣಿನ ಗೊಂಚಲುಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಉಪ್ಪಿನಕಾಯಿ, ಸಾಂಬಾರ ಪದಾರ್ಥಗಳು ಮತ್ತು ಕೆಲವು ಆಹಾರ ಪದಾರ್ಥಗಳು ಕೆಡದಂತೆ ಇಡಲು ಉಪಯೋಗಿಸುವರು. ಹಿಪ್ಪಲಿಯ ಪೈಪರಿನ್ ಕ್ಷಾರವು ಮುಖ್ಯ ಘಟಕವಾಗಿರುತ್ತದೆ.

ಹಿಪ್ಪಲಿ ಹಣ್ಣುಗಳನ್ನು ಸಾಮಾನ್ಯವಾಗಿ ಆಯುರ್ವೇದ ಔಷಧಿಗಳ ತಯಾರಿಕೆ ಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಾರೆ. ಒಣ ಹಿಪ್ಪಲಿ ಹಣ್ಣುಗಳಿಗಿಂತಲೂ ಇದರ ಬೇರುಗಳಿಗೆ ಹೆಚ್ಚಿನ ಪ್ರಮಾಣದ ಬೇಡಿಕೆಯಿದ್ದು ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾ ಮೊದಲಾದ ವಿದೇಶಗಳಿಗೆ ಇವುಗಳನ್ನು ನಮ್ಮ ದೇಶದಿಂದ ಹೆಚ್ಚಿನ ಪ್ರಮಾಣ ದಲ್ಲಿ ರಫ್ತು ಮಾಡಲಾಗುತ್ತದೆ. ಇದರ ಬೇರುಗಳಲ್ಲಿ ಹಣ್ಣುಗಳಲ್ಲಿರುವ ರಾಸಾಯನಿಕ ಘಟಕಗಳೇ ಇದ್ದು ಬೇರುಗಳನ್ನು ಸಹ ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಬೇರು ಮತ್ತು ಹಣ್ಣುಗಳಿಂದ ಮಾಡಿದ ಪುಡಿ ಅಥವಾ ಕಷಾಯವನ್ನು ತೀವ್ರವಾದ ಕೆಮ್ಮು, ಉಬ್ಬಸಗಳ ನಿವಾರಣೆಗೆ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವರು. ಇದಲ್ಲದೆ ಮೂಲವ್ಯಾಧಿ, ಕಾಲರಾ, ಕುಷ್ಠರೋಗ, ನರಗಳ ಬಲಹೀನತೆ ಉಪಶಮನಕ್ಕೂ ಇದನ್ನು ಉಪಯೋಗಿಸುವುದುಂಟು. ಹಾವು ಕಡಿದ ಭಾಗಕ್ಕೆ ಹಿಪ್ಪಲಿಯ ಬೇರು ಅಥವಾ ಹಣ್ಣನ್ನು ಮುಲಾಮಿನ ರೀತಿಯಲ್ಲಿ ಲೇಪಿಸಿ ಒಣಗಿದ ಹಣ್ಣುಗಳನ್ನು ನೀರಿನ ಜೊತೆಯಲ್ಲಿ ತೇಯ್ದು ಹಾವು ಕಡಿತದಿಂದ ಮೂರ್ಛೆ ಹೋದ ರೋಗಿಯ ಕಣ್ಣು ಮತ್ತು ಮೂಗಿನಲ್ಲಿ ಸವರುತ್ತಾರೆ. ಸುಮಾರು 10–20 ಕಾಳುಗಳನ್ನು ಪುಡಿಮಾಡಿ ಅದನ್ನು ರೋಗಿಗೆ ತಿನ್ನಲು ಕೊಡುತ್ತಾರೆ.

52. ಹಿಂಗು

(ಫೆರುಲಾ ನಾರ್ಥೆಕ್ಸ್: Ferula narthex Boiss)

ವ್ಯಾಪನೆ : ಈ ಸಸ್ಯದ ತವರು ಇರಾನ್ ಮತ್ತು ಅಫ್‌ಘಾನಿಸ್ಥಾನ. ಜಗತ್ತಿನ ಅನೇಕ ಭಾಗಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇದನ್ನು ಬೆಳೆಯುತ್ತಾರೆ. ಭಾರತದಲ್ಲಿ ಕಾಶ್ಮೀರದಲ್ಲಿ ಬೆಳೆಯುತ್ತಾರೆ.

ವರ್ಣನೆ : ಬಹುಸಾಂವತ್ಸರಿಕ ಶಾಕ. ಹೆಚ್ಚಾಗಿ ಹರಿದಿರುವ, ಗರಿರೂಪದ, ಪರ್ಯಾಯ ಜೋಡಣೆಯ, ರೋಮಾವೃತ ಎಲೆಗಳು. ಸಂಯುಕ್ತ ಛತ್ರಿಗೊಂಚಲು ಪುಷ್ಪಮಂಜರಿ. ಪುಷ್ಪಪತ್ರಕ ಹಾಗೂ ಪುಷ್ಪವೃಂತಪತ್ರಕಗಳಿಲ್ಲದ ಐದು ಸುತ್ತು ಗಳಿರುವ ಉಪರಿ ಶಲಾಕೆಯ. ದ್ವಿಲಿಂಗ, ಕೆಲವೊಮ್ಮೆ ಬಹುಲಿಂಗ, ಹೊರಗಡೆಗೆ ಸಮದ್ವಿಪಾರ್ಶ್ವ ಮತ್ತು ಮಧ್ಯದಲ್ಲಿ ತ್ರಿಜ್ಯಸಮಪಾರ್ಶ್ವ ರೂಪತೆಯ. ಹಳದಿ ಹೂವು ಗಳು. ಬಹು ಚಿಕ್ಕ ಹಲ್ಲಿನಂತಹ 5 ಬಿಡಿ ಪುಷ್ಪಪಾತ್ರಪತ್ರಕಗಳು. ಅಂಡಾಕಾರದ,

ಮೊಂಡಾದ ತುದಿಯಿರುವ, ಹಳದಿ ಬಣ್ಣದ 5 ಬಿಡಿ ಪುಷ್ಪದಳಗಳು. ಬಿಡಿಯಾಗಿರುವ 5 ಕೇಸರಗಳು. ಕೆಳಭಾಗದ ಎರಡು ಸಂಯುಕ್ತ ಅಂಡಕೋಶಗಳು. ಎರಡು ಕೋಣೆಗಳಿದ್ದು ಪ್ರತಿ ಕೋಣೆಯಲ್ಲಿ ಒಂದೊಂದು ಅಂಡಕವಿದ್ದು ಅಕ್ಷಕ ಅಂಡಕಾಧಾರಕ್ಕೆ ಅಂಟಿದ ಜಾಯಾಂಗ. ವೃತ್ತಾಕಾರ ಅಥವಾ ದೀರ್ಘವೃತ್ತಾಕಾರ, ಮೇಲ್ಭಾಗ ಸ್ವಲ್ಪ ಚಪ್ಪಟೆ, ಬದಿಯಲ್ಲಿ ಏಣುಗಳು ಹಾಗೂ ರೆಕ್ಕೆ ಹೊಂದಿರುವ ಕ್ರಿಮೋಕಾರ್ಪ್ ಫಲ. ಬೆನ್ನು ಭಾಗ ಚಪ್ಪಟೆಯಾಗಿರುವ ಬೀಜಗಳು.

ಉಪಯೋಗಗಳು : ಈ ಸಸ್ಯದ ಬೇರುಗಳಿಂದ ಹಿಂಗು ಎಂಬ ಅತಿ ಸುವಾಸನೆಯುಳ್ಳ ಗೋಂದು ರಾಳವನ್ನು ತೆಗೆಯುತ್ತಾರೆ. ದಪ್ಪವಾಗಿರುವ ಬೇರಿನ ತೊಗಟೆಯಿಂದ ಸಾಮಾನ್ಯವಾಗಿ ಮಳೆಗಾಲದಲ್ಲಿ ಒಂದು ರೀತಿಯ ಹಾಲಿನಂತಹ ರಸವು ದ್ರವಿಸುತ್ತದೆ. ಮೊದಲು ಬೇರುಗಳ ಗೊಂಚಲುಗಳನ್ನು ಕತ್ತರಿಸಿ ಬಿಸಿಲಿನಿಂದ ಸಂರಕ್ಷಿಸುತ್ತಾರೆ. ಬಳಿಕ ಬೇರುಗಳ ಮೇಲೆ ಬೂದು ಅಥವಾ ಕೆಂಪು ವರ್ಣದ ಗೋಂದುರಾಳವು ಸಂಗ್ರಹವಾಗಲು ಪ್ರಾರಂಭಿಸುತ್ತದೆ. ಇದೇ ಗೋಂದು ರಾಳವನ್ನು ಹಿಂಗು ಎಂದು ಕರೆಯುತ್ತಾರೆ. ಹಿಂಗಿನಲ್ಲಿರುವ ತೈಲದಲ್ಲಿ ಗಂಧಕದ ಘಟಕವಿರುವುದರಿಂದ ಅದು ಅತೀ ತೀಕ್ಷ್ಣ ವಾಸನೆಯುನ್ನು ಹೊಂದಿರುತ್ತದೆ. ಅಲ್ಲದೆ ಒಂದು ರೀತಿಯ ಕಹಿಯಾದ ಮತ್ತು ಘಾಟಾದ ರುಚಿಯನ್ನು ಹೊಂದಿರುತ್ತದೆ.

ಹಿಂಗನ್ನು ಸಾರು, ಪಲ್ಯ, ಕೋಸಂಬರಿ ಮತ್ತು ಅನೇಕ ಆಹಾರ ಪದಾರ್ಥಗಳನ್ನು ವಾಸನೆಗೊಳಿಸಲು ಮತ್ತು ರುಚಿನೀಡಲು ಉಪಯೋಗಿಸುತ್ತಾರೆ. ಯೂರೋಪ್ ಮತ್ತು ಅಮೆರಿಕಾ ದೇಶಗಳಲ್ಲಿ ಹಿಂಗಿನಲ್ಲಿರುವ ಕೆಲವು ಬೇಡವಾದ ಘಟಕಗಳನ್ನು ತೆಗೆದು ಅದನ್ನು ಅತ್ತರ ತಯಾರಿಕೆಯಲ್ಲಿ ಮತ್ತು ಕೆಲವು ಪದಾರ್ಥಗಳಿಗೆ ರುಚಿನೀಡುವ ಸಲುವಾಗಿ ಉಪಯೋಗಿಸುತ್ತಾರೆ.

ಹಿಂಗು ಅನೇಕ ಮುಖ್ಯ ಔಷಧಿಯುಕ್ತ ಉಪಯೋಗಗಳನ್ನು ಹೊಂದಿರುತ್ತದೆ. ಸೆಳವು ರೋಗವನ್ನು ತಡೆಯುವ ವಾತಹರವಾಗಿ, ನರಗಳ ಬಲಹೀನತೆಯುನ್ನು ಕಡಮೆ ಮಾಡಿ ಶಕ್ತಿನೀಡಲು, ಪಚನಕ್ರಿಯೆ ಹೆಚ್ಚಿಸಲು, ಕಫ ಕತ್ತರಿಸಲು, ಮೂತ್ರಸ್ರಾವ ಉತ್ತೇಜಕ ಹಾಗೂ ಅಂತ್ರ ಕ್ರಿಮಿನಾಶಕವಾಗಿ, ಹೀಗೆ ಅನೇಕ ರೀತಿ ರೋಗಗಳ ನಿವಾರಣೆಗೆ ಹಿಂಗನ್ನು ಉಪಯೋಗಿಸುತ್ತಾರೆ. ಹೊಟ್ಟೆ ಉಬ್ಬರ ಮತ್ತು ಹೊಟ್ಟೆ ಶೂಲೆಯ ಉಪಶಮನಕ್ಕೆ ಇದು ಅತಿ ಮುಖ್ಯವಾದ ಔಷಧಿಯಾಗಿರುತ್ತದೆ. ಕಾಲರಾ, ಅಸ್ತಮಾ, ಮಲಬದ್ಧತೆ, ಕೆಮ್ಮು ಮೊದಲಾದವುಗಳ ಉಪಶಮನಕ್ಕೂ ಉಪಯೋಗಿಸುತ್ತಾರೆ. ಹಿಂಗನ್ನು ಒಣಗಿಸಿದನಂತರ ಗುಳಿಗೆಯ ರೂಪದಲ್ಲಿ ಅಥವಾ ದ್ರಾವಣದ ರೂಪದಲ್ಲಿ ಕೊಡುವುದುಂಟು. ಈ ಸಸ್ಯದ ಬೀಜಗಳನ್ನು ಮಕ್ಕಳಿಗೆ ಜಂತು ಮೊದಲಾದ ಕ್ರಿಮಿಗಳನ್ನು ನಾಶಮಾಡಲು ಔಷಧವಾಗಿ ಉಪಯೋಗಿಸುತ್ತಾರೆ.

ಇತರ ಪ್ರಭೇದಗಳು

(ಫೆ. ಫೂಟಿಡಾ; F. foetida, ಫೆ. ಅಸಾಫೂಟಿಡಾ; F. asafoetida)

ಇತರ ಪ್ರಭೇದಗಳಾದ ಫೆ. ಫೂಟಿಡಾ, ಫೆ. ಅಸಾಫೂಟಿಡಾ ಮೊದಲಾದವುಗಳು ಏಷ್ಯಾದ ಮಧ್ಯಭಾಗಗಳಾದ ಅಫಘಾನಿಸ್ಥಾನ ಮೊದಲಾದ ಪ್ರದೇಶಗಳಲ್ಲಿ ಬೆಳೆಯುತ್ತಿದ್ದು ಈ ಪ್ರಭೇದಗಳು ಕೂಡ ಹಿಂಗಿನಂತಹ ಘಟಕಗಳನ್ನೇ ಹೊಂದಿರುತ್ತವೆ.

ಆಧಾರ ಗ್ರಂಥಗಳು

ATAL, C. K., AND KAPUR, B. M., *Cultivation and Utilization of Medicinal and Aromatic Plants.* New Delhi, Regional Research Laboratory, Jammu Tawi : Leipzig Press, 1977.

BADHWAR, R. L., RAO, P. S. AND SETHI, H., *Some useful Aromatic Plants*, Faridabad : Government of India Press, 1964.

COOK, T., *Flora of Bombay*, Reprinted Edition, Vols. I, II and III, Calcutta : Botanical Survey of India, 1958.

DASTUR, J. F., *Medicinal Plants of India and Pakistan.* Bombay : D. B. Taraporevala sons and Co., Ltd., 1951.

DUTTA, A C., *Botany for degree students.* 4th Ed. Calcutta : Oxford University Press, 1974.

GAMBLE, J. S., *Flora of the Presidency of Madras.* Second Reprinted Edition, Vols. I, II and III, Calcutta : Botanical Survey of India, 1967.

JAIN, S. K., *Medicinal Plants.* New Delhi : National Book Trust, 1975.

HOOKER, J. D., *The Flora of British India*, Vols. I. II, III and IV London: L. Reeve and Co., 1872-85.

LAWRENCE, G. H. M., *Taxonomy of Vascular Plants.* New York : Macmillon Co., 1951.

SUTARIA, R.N., *A Text Book of Systematic Botany*, Ahamedabad: Khadayata Book Depot.

ಬೋರಯ್ಯ, ಜಿ ; ಸಸ್ಯವರ್ಗೀಕರಣ ಶಾಸ್ತ್ರ, ಬೆಂಗಳೂರು : ಕೃಷಿ ವಿಶ್ವವಿದ್ಯಾನಿಲಯ, 1975.

ಪಾರಿಭಾಷಿಕ ಶಬ್ದಕೋಶ

ಅಗ್ರ	Terminal
ಅಜೀರ್ಣ	Dyspepsia, Indigesfion
ಅಡರುಬಳ್ಳಿ	Tendril
ಅಣಬೆನಾಶಕ	Fungicide
ಅಧೋಶಲಾಕೆ	Hypogynous
ಅನುಬಂಧ	Appendage
ಅನುಪತ್ರ	Stipule
ಅಪಕ್ವ	Unripe
ಅಪೂರ್ಣ	Imperfect
ಅಭಿಮುಖ ಜೋಡಣೆ	Opposite arrangement
ಅಲೆಯಾಕಾರ	Wavy, Undulate
ಅಶಾಶ್ವತ ಉದುರುವ	Deciduous
ಅಸಮಗರಿ ರೂಪದ	Imparipinnate
ಅಸಮ ಅಂಚು	Unequal margin
ಅಕ್ಷ	Axis
ಅಕ್ಷಕ್ಕೆ ಸುತ್ತಿರುವ	Spiral
ಅಂಚಿನ	Marginal
ಅಂಟಿಕೊಂಡಿರುವ	Adhesion
ಅಂಟು, ತುಂಡು	Cutting
ಅಂಡಕ	Ovule
ಅಂಡಕದಂಡ	Echma
ಅಂಡಾಕಾರ	Ovate
ಅಂಡಾಶಯ	Ovary
ಅಂತ್ರಕ್ರಿಮಿನಾಶಕ	Anthelmenthic
ಅಂತ್ಯಾರಂಭಿ	Raceme
ಆಣಿ	Corn
ಆಮಶಂಕೆ	Dyscentery
ಆಲಿಕೆಯಾಕಾರ	Infundibuliform
ಆಗಂತುಕ ಬೇರು	Adventitious root
ಆವಿಬಾಷ್ಪೀಕರಣ	Steam distillation
ಇಪ್ಪಾಲಾಗಿ ತುಟಿಗಳಂತಿರುವ	Bilabiate
ಇಸುಬು	eczema
ಈಟಿಯಾಕಾರ	Lanceolate
ಉಚ್ಚ ಅಂಡಾಶಯ	Superior ovary
ಉದ್ದವಾಗಿ ಸೀಳುವ	Longitudinal split
ಉದ್ವೇಗಶಾಮಕ	Sedative
ಉಪತುದಿ	Subterminal
ಉಪಪತ್ರ	Spathe
ಉಪಭಾಗ	Subdivision
ಉಪರಿಶಲಾಕೆ	Epigynous
ಉಬ್ಬಸ	Asthma
ಉಬ್ಬಿದ	Inflated
ಉಬ್ಬಿದ ಗೆಣ್ಣು	Inflated node
ಉಭಯಲಿಂಗಿ	Monoecious
ಉರಿಮೂತ್ರರೋಗ	Dysuria
ಉರುಳೆಯಾಕಾರ	Subcylindric
ಉಳುಕು	Sprain
ಊತ	Swelling
ಎದ್ದುಕಾಣುವ	Showy
ಎರಡು ಅಂಡಕೋಶಗಳಿರುವ	Bicarpellate
ಎರಡು ಕೋಣೆಗಳುಳ್ಳ	Bilocular

ಎರಡು ತುಟಿಗಳುಳ್ಳ	Bilabiate
ಎರಡು ದರ್ಜೆಯ	Distichous
ಎರಡು ವೃತ್ತಗಳಿರುವ	Biseriate
ಎಲೆ	Leaf
ಎಲೆಯ ಕಂಕುಳು	Axil of leaf
ಎಲೆಯ ನರ	Vein
ಏಕಲಿಂಗ	Unisexual
ಏಕಸಂಲಾಗ	Monoadelphous
ಏಕ ಸಾಂವತ್ಸರಿಕ, ಏಕವಾರ್ಷಿಕ	Annual
ಏಕ ಸೀಳುಫಲ	Follicle
ಏರುಬಳ್ಳಿ	Climber
ಒಳಗೆ ತಿರುಗಿದ	Introrse
ಒಂಟಿ	Solitary
ಓಟೆ ಫಲ, ಅಷ್ಟಫಲ	Drupe
ಓರೆಯಾದ	Oblique
ಕವಲುಗಳುಳ್ಳ	Branched
ಕವಲೊಡೆಯದ ರೆಂಬೆ	Unbranched
ಕವಾಟ	Valve
ಕರ್ಪೂರ	Camphor
ಕಣ ಕಣವಾಗಿರುವ	Granular
ಕಫ ಕತ್ತರಿಸುವ ಗುಣ ಹೊಂದಿರುವ	Expectorant
ಕಾಮಾಲೆ ರೋಗ	Jaundice
ಕ್ರಿಮಿನಾಶಕ	Germicide
ಕಿರುಎಲೆ	Leaflet
ಕೀಟನಾಶಕ	Insecticide
ಕೀಲು ನೋವು	Joint pains
ಕೇಸರಕೊಳವೆ	Staminal tube
ಕೇಸರ ದಂಡ	Filament
ಕೇಸರ ಮಂಡಲ, ಪುಮಾಂಗ	Androecium
ಕೊಕ್ಕೆಯಂತಿರುವ	Aduncate
ಕೊಕ್ಕೆಹುಳು	Hook worm
ಕೊಳವೆಯಾಕಾರ	Tubular
ಕೋಣೆ	Locule, Cell, Chamber
ಕಂಕುಳಿನಲ್ಲಿರುವ	Axillary
ಕಂದಿಕೆ	Corm
ಕಾಂಡ	Stem
ಕಾಂಡದ ಮೇಲಿರುವ	Cauline
ಖಡ್ಗದಂತಿರುವ	Swordlike
ಗರಿಯಂಥ	Pinnate
ಗರಿರೂಪದ ಎಲೆಯ ತೊಟ್ಟು	Rachis
ಗಡ್ಡೆ	Tuber
ಗುದ್ದಲಿಯಾಕಾರ	Wedge shaped
ಗುರಾಣಿಯಾಕಾರ	Pettate, Scutate, Shield
ಗೆಣ್ಣು	Node
ಗೊಡ್ಡು	Sterile
ಗೋಳಾಕಾರ	Globose
ಗೊಂಚಲಿನಂತಿರುವ	Tufted
ಗೊಂಚಲು	Fascicle
ಘಟಕ	Element
ಘನೀಭವಿಸುವ	Solidification

ನೆಲದ ಮೇಲೆ ತೆವಳುವಂಥ	Prostrate
ನೇರವಾದ	Erect
ಪಕ್ಕದ	Accessary
ಪಕ್ವವಾದ	Ripe
ಪ್ರಕಾಂಡ	Shoot
ಪತ್ರಮಧ್ಯನರ	Midrib
ಪತ್ರವೃಂತ	Petiole
ಪನ್ನೀರು	Scented water
ಪ್ರಭೇದ	Species
ಪರ್ಯಾಯ	Alternate
ಪರಾಗಕೋಶ	Anther
ಪರಾಗ ಸಂಬಂಧಿತ	Connective
ಪರಾವಲಂಬಿ	Parasite
ಪರಿಮಳವುಳ್ಳ	Aromatic
ಪರಿಶಲಾಕೆ ಸ್ಥಿತಿಯ	Perigynous
ಪಾರದರ್ಶಕ	Transparent
ಪಾರ್ಶ್ವದ	Lateral
ಪಿತ್ತೋದ್ರೇಕ	Nausea
ಪೀನ	Convex
ಪುಷ್ಪದಳ	Petal
ಪುಷ್ಪದಳರಹಿತ	Apetalous
ಪುಷ್ಪವೃಂತ	Pedicel
ಪುಷ್ಪವೃಂತಪತ್ರಕ	Bracteole
ಪುಷ್ಪವೃಂತ ಪತ್ರಕವಿರುವ	Bracteolate
ಪುಷ್ಪಪತ್ರಕ	Bract
ಪುಷ್ಪಪತ್ರಕರಹಿತ	Ebracteate
ಪುಷ್ಪಪತ್ರಕ ಹೊಂದಿರುವ	Bracteate
ಪುಷ್ಪಪಾತ್ರಪತ್ರಕ	Sepal
ಪುಷ್ಪಪಾತ್ರಪತ್ರಕ ದಂತಿರುವ	Sepaloid
ಪುಷ್ಪಪಾತ್ರೆ	Calyx
ಪುಷ್ಪಪೀಠ	Receptacle
ಪುಷ್ಪಮಂಜರಿ	Inflorescence
ಪುಷ್ಪಮಂಜರಿವೃಂತ	Peduncle
ಪುಷ್ಪಾವರಣ	Floral envelops
ಪುಷ್ಪಾಕ್ಷ	Thalamus, Torus
ಪೂತಿನಾಶಕ ಪೂತಿನಿವಾರಕ	Antiseptic
ಪೇರಃಆಕಾರ	Pearshaped
ಪೊದರು	Shrub
ಪೊರೆ	Membrane, Sheath
ಪೊಳ್ಳು	Hollow
ಪಾಂಡುರೋಗ	Leucoderma
ಫಲ	Fruit
ಫಲವತ್ತಾದ	Fertile
ಬಗ್ಗಿರುವ	Pendulous
ಬದಿ	Marginal
ಬಳ್ಳಿ	Creeper
ಬಲೆಯಂತಿರುವ	Reticulate, Netted
ಬಹಿಸ್ಥಗೋಡೆಯ	Perietal
ಬಹುಭಿನ್ನಪತ್ರ	Decompound leaf
ಬಹುಸಂಲಾಗ	Polyadelphous
ಬಾಯಿ ಹುಣ್ಣು	Stomatitis
ಬಾಲಚಂದ್ರಾಕಾರ	Crescent
ಬಾಷ್ಪೀಕರಣ	Extraction
ಬಿಡಿ ಅಂಡ ಕೋಶಗಳುಳ್ಳ	Apocarpous
ಬಿಡಿ ದಳಗಳಿರುವ	Polypetalous
ಬಿಡಿ ಪುಷ್ಪಪಾತ್ರ ಪತ್ರಕಗಳುಳ್ಳ	Aposepalous
ಬಿಡಿಯಾಗಿರುವ	Free
ಬಿರಿಯದ	Indehiscent
ಬಿರಿಯುವ	Dehiscence
ಬೀಜ	Seed
ಬೀಜದ ಹೊರಕವಚ	Testa
ಬುಡದಲ್ಲಿ ಅಂಟಿಕೊಂಡಿರುವ	Basifixed

ಬೆಣೆಯಾಕಾರ	Cuneate
ಬೆನ್ನಿಗೆ ಅಂಟಿದ	Dorsifixed
ಬೇಗನೆ ಉದುರುವ	Caducous
ಬೇರು	Root
ಬೇರು ಕಾಂಡ	Rhizome
ಬೇರಿನಿಂದ ನೇರವಾಗಿ ಹೊರಡುವ ಎಲೆ	Radical leaf
ಬೇಲಿಗಿಡ	Hedge plant
ಬಂಜೆ	Abortive
ಬಂಜೆ ಕೇಸರ	Staminode
ಭಟ್ಟಿ ಇಳಿಸುವಿಕೆ	Distillation
ಭಾಗ	Division
ಭಿನ್ನದಳ	Polypetalous
ಭಿನ್ನಲಿಂಗಿ	Dioecious
ಭ್ರೂಣ	Embryo
ಭ್ರೂಣಾಹಾರ	Albumen, kernel
ಭೂಸ್ತಾರಿ	Runner
ಭೇದಿರೋಗ	Diarrhoea
ಭೇದಿವಿರೇಚಕ	Purgative
ಮಕರಂದಗ್ರಂಥಿ	Nectary
ಮಧ್ಯನರ	Midrib
ಮಧ್ಯಮ ಸ್ಥಾನದ	Half inferior
ಮಧ್ಯಾರಂಭಿ	Cymose
ಮಧು	Honey
ಮರ	Tree
ಮರದ ಚೇಗು	Heart wood
ಮಲಬದ್ಧತೆ	Constipation
ಮಸಾಲೆ ಪದಾರ್ಥ	Condiment
ಮಸೂರಾಕಾರ	Concave
ಮಿಶ್ರ	Mixed
ಮುಳ್ಳು	Spine, Thorn
ಮುಳ್ಳುಗಳಿರುವ	Echinate blend
ಮೂಗುಗಾಯ	Bruise
ಮೂರ್ಛೆರೋಗ	Epilepsy
ಮೂತ್ರಸ್ರಾವ ಉತ್ತೇಜಕ	Duretic
ಮೂತ್ರಕೋಶದ ಊತ	Cystitis
ಮೂತ್ರ ಪಿಂಡದ ಉರಿಯೂತ	Nephritic
ಮೂರು ಅಂಡಕೋಶಗಳಿರುವ	Tricarpellary
ಮೂರು ಭಾಗಗಳಾಗಿರುವ	Trifid
ಮೂಲವ್ಯಾಧಿ	Haemorhoids, Piles
ಮೂಲೆ	Cone
ಮೆದು ತಿರುಳು	Fleshy
ಮೆದುಳು ರೋಗ	Brain disease (Mental disorders)
ಮೇಲ್ಭಾಗ	Abaxial, dorsal
ಮೈಲಿ ರೋಗ	Smallpox
ಮೇಲು ಮುಳ್ಳು	Prickle
ಮೊಗ್ಗು	Bud
ಮುಂಭಾಗ	Anterior
ಮೊಂಡಾದ	Obtuse
ಯಥೇಚ್ಛವಾಗಿ ಬೆಳೆ	Wildly grow
ರಕ್ತಸ್ರಾವ	Haemorrhage bleeding
ರಕ್ತಸ್ರಾವ ತಡೆಗಟ್ಟುವ	Astringent
ರಸಫಲ	Berry
ರಸಭರಿತ	Fleshy, succulent
ರೆಕ್ಕೆಗಳುಳ್ಳ	Winged
ರೇಖಾಕಾರ	Linear
ರೋಗನಿರೋಧಕ	Prophylactic
ರೋಮಗಳುಳ್ಳ	Hairy
ರೆಂಬೆ	Branch
ಲತಾತಂತು	Tendril
ಲಾಡಿ ಹುಳು	Tapeworm

ಲಾಳಿಕೆಯಾಕಾರ	Funnel shaped
ಲೀನಕಾರಿ	Solvent
ವಾತ	Gout
ವಾತಹರ, ಹೊಟ್ಟೆ ಉಬ್ಬರ ನಿವಾರಕ	Carminative
ವಾಪೆ; ಕವಾಟ	Valve
ವಾರ್ಷಿಕ	Annual
ವಾಹಕ ಪಿಂಡ	Vascular bundle
ವಿರೋಹ	Stolon
ವೃತ್ತ, ಸುತ್ತು	Whorl, cycle
ವೃತ್ತಾಕಾರ	Cyclic, circular
ವೃತ್ತಾಕಾರವಿರದ	Acyclic
ವೃಂತ	Stalk
ವೃಂತಪರ್ಣ	Stipule
ವೃಂತಪರ್ಣವಿಲ್ಲದ	Exstipulate
ಶಕ್ತಿವರ್ಧಕ	Analeptic
ಶಲಾಕ, ಶಲಾಕ ಕೋಶ	Style
ಶಲಾಕಾಗ್ರ, ಶಲಾಕಕೋಶ	Stigma
ಶಲಾಕೆ	Pistil, gynoecium
ಶಾಕ	Herb
ಶಾಶ್ವತವಲ್ಲದ	Deciduous
ಶಾಶ್ವತವಾಗಿರುವ	Persistant
ಶ್ವಾಸನಾಳದ ಒಳ ಚರ್ಮದ ಊತ	Bronchoites
ಶಿಫಾವೃಂತ	Rhizome
ಶೀಘ್ರಪತನ	Caducous
ಶೀತಜ್ವರ	Typhoid
ಶುಕ್ಲದೋಷ	Gonorrhoea
ಸ್ಫಟಿಕ	Crystal
ಸಣ್ಣಪೊದರು	Bush
ಸಮಗರಿರೂಪದ ಎಲೆ	Paripinnate leaf
ಸಮದ್ವಿಪಾರ್ಶ್ವ	Isobilateral
ಸಮದ್ವಿಪಾರ್ಶ್ವರೂಪಿ	Zygomorphic
ಸಮರೂಪತೆ	Symmetry
ಸಮಾನಾಂತರ	Parallel
ಸಮಾನಾಂತರ ನರವಿನ್ಯಾಸ	Parallel venation
ಸರಳ	Simple
ಸರಳ ಎಲೆ	Simple leaf
ಸರ್ವತೋಮುಖ ಭ್ರಮಣ	Versatile
ಸಹಾಯಕ ಮೊಗ್ಗು	Accessary bud
ಸಾಗುವಳಿ	Cultivation
ಸಾಮೂಹಿಕ	Aggregate
ಸಾಮೂಹಿಕ ಫಲ	Aggregate fruit
ಸ್ನಾಯುವಿನ ಸೆಳೆತ	Spasmiodic
ಸ್ಥಿರಸ್ಥಾಯಿ	Persistant
ಸ್ಥಿರೀಕರಣ	Fixing quality
ಸುತ್ತು ಜೋಡಣೆ	Whorled
ಸುತ್ತು ಸುತ್ತಾಗಿರುವ	Cyclic
ಸುವಾಸನೆಯುಳ್ಳ	Aromatic
ಸಂತಾನಾಭಿವೃದ್ಧಿ	Reprodu-ction
ಸಂಧಿವಾತ	Rheumatism
ಸಂಬಂಧಿತ	Connective
ಸ್ತಂಭ	Column
ಸಂಯುಕ್ತ ಎಲೆ	Compound leaf
ಸಂಯುಕ್ತ ಎಲೆಗಳಲ್ಲಿ ಒಂದೇ ಕಿರು ಎಲೆ ಇರುವಿಕೆ	Unifoliate
ಸಂಯುಕ್ತ ಛತ್ರಿಗೊಂಚಲು	Compound umbel
ಸಂಯುಕ್ತ ಪುಷ್ಪದಳಗಳು	Gamopetalous
ಸಂಯುಕ್ತ ಪುಷ್ಪ ಪಾತ್ರಪತ್ರಕಗಳು	Gamose-palous

ಸಂಸಕ್ತ	Adnate, coherent
ಸಂಸ್ಕರಣೆ	Treatment
ಸುಂಕ	Glume
ಸೋಂಕು ನಿವಾರಕ	Disinfectant
ಹಣ್ಣಿನ ತೊಗಟೆ	Pericarp
ಹಬ್ಬು	Creeping
ಹಬ್ಬುವ ಸಸ್ಯ	Climber
ಹರಳುರೂಪಿತ	Granular
ಹಲ್ಲಿನ ಅಂಚುಳ್ಳ	Dental margin
ಹಲ್ಲಿನಾಕಾರದಲ್ಲಿರುವ	Toothed
ಹಲ್ಲು ಒಸಡು ನೋವು	Gingivitis
ಹಸ್ತದಂತೆ	Palmate
ಹಸ್ತದ ಬೆರಳಿನಂತಿರುವ	Digitate
ಹಸಿವು ವೃದ್ಧಿಗೊಳಿಸುವ	Appetizer
ಹುಣ್ಣು	Ulcer
ಹುರುಪೆ	Scale
ಹೂವೊಗ್ಗು	Floral bud
ಹೂ	Flower
ಹೃದಯಾಕಾರದ	Cordate, heart shaped
ಹೆಣ್ಣು ಹೂವು	Pistillate flower
ಹೊಟ್ಟೆ ಶೂಲೆ	Colic gastralgia
ಹೊರ ಉಬ್ಬಿನ	Convex
ಹೊರಚಾಚಿರುವ	Exerted
ಹೊರಸಿಪ್ಪೆ	Epicarp
ಹೊಳೆಯುವ	Glabrous
ಹೋಳು	Lobe
ಹಿಂಭಾಗ	Posterior, ventral
ಹಿಂಭಾಗಕ್ಕೆ ಜೋಡಿಸಿರುವ	Posticous

ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

		ಸಾದಾ	ಕ್ಯಾಲಿಕೊ
1.	ಸುಭಿಕ್ಷತೆಗೆ ತೆರೆದ ಬಾಗಿಲು (ದ್ವಿತೀಯ ಮುದ್ರಣ)	2–50	
2.	ಪೀಡೆ ನಿರ್ವಹಣೆ (ದ್ವಿತೀಯ ಮುದ್ರಣ)	7–00	
3.	ಕೀಟ ವಿಂಗಡಣೆ	15–00*	
4.	ಕೀಟ ಹತೋಟಿ (ದ್ವಿತೀಯ ಮುದ್ರಣ)	12–50	
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–1	6–25	
6.	ತರಕಾರಿ ಬೇಸಾಯ	12–50*	
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	5–00	6–25*
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	15–00	19–00*
9.	ರೈತರ ನೆಚ್ಚುಮೆಚ್ಚಿನ ಮರಗಳು	15–00	19–00*
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–2	11–25	15–00
11.	ಬೀಜಗಣಿತ ಪರಿಚಯ	15–00	20–00
12.	ಮಣ್ಣು ಮತ್ತು ನೀರು ನಿರ್ವಹಣೆ	15–00	19–00*
13.	ಮಣ್ಣು	11–25	15–00*
14.	ಕೃಷಿ ಸಹಕಾರ	6–25	10–00*
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	15–00	19–00*
16.	ಗೋಸಂಪತ್ತು	6–25	10–00*
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	7–50	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	17–50	21–25*
19.	ಪಶುವೈದ್ಯಕೀಯ ವಿಜ್ಞಾನ (ದ್ವಿತೀಯ ಮುದ್ರಣ)	6–00	16–00
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	8–25*	12–00*
21.	ಟ್ರ್ಯಾಕ್ಟರುಗಳು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	7–50*	12–50*
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–3	10–00	15–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	11–25*	16–25*
24.	ಕಣಜದ ಪೀಡೆಗಳು ಹಾಗೂ ಅವುಗಳ ಹತೋಟಿ	15–00	19–00
25.	ಸಸ್ಯವರ್ಗೀಕರಣಶಾಸ್ತ್ರ	15–00	20–00

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
26. ಪೌಷ್ಟಿಕ ಆಹಾರ (ದ್ವಿತೀಯ ಮುದ್ರಣ)	6–00	16–00
27. ಕಡಲ ಮೀನುಗಾರಿಕೆ	5–00	10–00
28. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75*	
29. ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4–50*	
30. ಶಿಶುವಿಹಾರ (ದ್ವಿತೀಯ ಮುದ್ರಣ)	6–00	
31. ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7–50	
32. ಕೃಷಿ ಎಂಜಿನಿಯರಿಂಗ್ ಪಠ್ಯ ಪುಸ್ತಕ ಸಮೀಕ್ಷಣೆ	9–50	14–00
33. ಇಲಿಗಳು ಹಾಗೂ ಅವುಗಳ ನಿಯಂತ್ರಣ	9–50	13–25
34. ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	21–50*	
35. ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	16–25*	
36. ಕ್ಯಾನಿಂಗ್–ಆಹಾರ ಜೋಪಾಸನೆಯ ಒಂದು ಆಧುನಿಕ ವಿಧಾನ	16–25	21–25
37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75	
38. ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ	20–00	25–00
39. ಎಲುಬುಶಾಸ್ತ್ರ	11–25	16–25
40. ಕಡಲೆಕಾಯಿ	10–00*	15–00
41. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ–1	25–00	30–00
42. ತೆಂಗು, ಅಡಿಕೆ, ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	9–00*	
43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12–00	
44. ಭಾರತದಲ್ಲಿ ಕೋಳಿಸಾಕಣೆ	22–50	27–50
45. ಕಲ್ಲುನಾರು (ಭೂತಾಳೆ) ಗಿಡಗಳು	5–00	

	ಸಾದಾ	ಕ್ಯಾಲಿಕೊ
46. ಎಣ್ಣೆ ಬೀಜ (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7–50	
47. ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–00	
48. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಿಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	5–00*	
49. ಮಾದಕ (ಹೊಗೆಸೊಪ್ಪು, ಗಾಂಜ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	3–75	
50. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4–50	
51. ಸಸ್ಯಸಾಮ್ರಾಜ್ಯ	25–00	30–00
52. ಮೀನುಗಾರಿಕೆ	10–00	15–00
53. ಭಾರತೀಯ ಗ್ರಾಮೀಣ ಯುವಕ ರೈತಸಂಘಗಳ ಸಂಘಟನೆ	8–25	13–25
54. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ–2	20–00	25–00
55. ಸಾವಯುವ ರಸಾಯನಶಾಸ್ತ್ರ ಪ್ರವೇಶಿಕೆ	14–00	19–00
56. ಪಶುರೋಗಗಳು ಹಾಗೂ ಸಾರ್ವಜನಿಕ ಆರೋಗ್ಯ	12–50	17–50
57. ಭಾರತದಲ್ಲಿ ಜೇನುಸಾಕಣೆ	20–00	25–00
58. ಸಾಕುಪ್ರಾಣಿ ಮೂಲದ ಸೋಂಕುರೋಗಗಳು	7–50	12–00
59. ದೊಡ್ಡರೋಗ	5–00	
60. ಮೂಲ ಅರ್ಥಶಾಸ್ತ್ರ	19–00	24–00
61. ಜೇನುಸಾಕಣೆ	17–50	22–50
62. ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–25	
63. ಮಣ್ಣು ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದನೆ	20–00	25–00
64. ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು		60–00
65. ಸಹಕಾರಿ ಬೇಸಾಯ	18–00	23–00
66. ಕೋಶ	20–00	25–00
67. ತರಕಾರಿ ಬೆಳೆಗಳ ಕೀಟನಿಯಂತ್ರಣ	12–50	19–00
68. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	20–00	25–00
69. ಸಂಸ್ಕೃತಿಯ ರೂಪಿಕೆಗಳು	17–00	22–00

	ಸಾದಾ	ಕ್ಯಾಲಿಕೊ
70. ರೇಖಾತ್ಮಕ ಬೀಜಗಣಿತ	30–00	35–00
71. ಹುಲಿ–ಭಾರತದ ರಾಷ್ಟ್ರೀಯ ಮೃಗ	20–00	24–00
72. ನೀರಾವರಿ ತತ್ವ ಹಾಗೂ ಪದ್ಧತಿಗಳು	45–00	50–00
73. ಮಣ್ಣು ಶಿಲೀಂಧ್ರ ಕೃಷಿ	45–00	50–00
74. ಪ್ರಾಣಿಗಳ ವರ್ತನೆ	17–00	22–00
75. ಬೆಳೆಕೀಟಗಳು ಮತ್ತು ಅವುಗಳ ಹತೋಟಿ		125–00*
76. ಸಸ್ಯತಳಿ ಅಭಿವೃದ್ಧಿ ವಿಧಾನಗಳು		60–00
77. ಪ್ರಾಣಿಗಳ ಶರೀರಕ್ರಿಯಾಶಾಸ್ತ್ರ	17–00	22–00
78. ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಗಳಿಸಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ–1)	8–50	
79. ಕೆಲವು ಸಸ್ಯಗಳ ವೈಜ್ಞಾನಿಕ, ಕುಟುಂಬ, ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು	15–00	20–00
80. ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತ ಜೋಪಾಸನೆ	20–00	25–00
81. ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ	20–00	25–00
82. ಕುರಿಸಾಕಣೆ	8–00	13–00
83. ಜೋಳ	10–00	15–00
84. ಹಂದಿಯ ಭ್ರೂಣಶಾಸ್ತ್ರ	35–00	40–00
85. ಆಧುನಿಕ ಹೈನಾಗಾರ ದನಗಳ ನಿರ್ವಹಣೆ	25–00	30–00
86. ದಾಸ್ತಾನು ಕೀಟಗಳು ಹಾಗೂ ಅವುಗಳ ಹತೋಟಿ	8–00	
87. ಮನೆ ಕೀಟಗಳು, ಇತರ ಪೀಡೆಗಳು ಹಾಗೂ ಅವುಗಳ ಹತೋಟಿ	10–00	
88. ಜಾನುವಾರು ಮತ್ತು ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–00*	
89. ತೆಂಗಿನ ಬೇಸಾಯ	9–00	14–00*
90. ಆಹಾರ ಸಂರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ–2)	11–00	
91. ಸೂಕ್ಷ್ಮಜೀವಿ ಶಾಸ್ತ್ರದ ಬೆಳವಣಿಗೆ ಹಾಗೂ ವಿಧಾನಗಳು (ಸೂಕ್ಷ್ಮಜೀವಿ ಜಗತ್ತು, ಭಾಗ–1)	17–00	

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
92.	ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-00	
93.	ಹಸುರು ಸಸ್ಯದ ಜೀವನ	12-00	17-00
94.	ಸೂಕ್ಷ್ಮಜೀವಿಗಳ ಚಯಾಪಚಯ (ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯ ಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18-00	
95.	ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತು ರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15-00	
96.	ಸೂಕ್ಷ್ಮಜೀವಿಗಳಿಂದ ಉತ್ಪತ್ತಿಯಾದ ಕಿಣ್ವಗಳು ಮತ್ತು ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7-00	
97.	ರೋಗಕ್ಕೆ ಸಂಬಂಧಪಟ್ಟಂತೆ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5-00	
98.	ಆಹಾರ ನೈರ್ಮಲ್ಯ ಹತೋಟಿ ಮತ್ತು ಪರೀಕ್ಷೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7-00	
99.	ಕೃಷಿ ಕರ್ನಾಟಕ	12-50	17-50
100.	ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35-00
101.	ಮತ್ಸ್ಯಶಾಸ್ತ್ರ		50-00
102.	ಹಣ್ಣು ಮತ್ತು ತರಕಾರಿ ಸಂರಕ್ಷಣೆ	35-00	40-00
103.	ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60-00
104.	ಆಹಾರ ಸೂಕ್ಷ್ಮಜೀವಿ ವಿಜ್ಞಾನ		62-50
105.	ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25-00	35-00
106.	ಬತ್ತದ ಬೇಸಾಯ	15-00	25-00
107.	ಧಾನ್ಯದ ಬೆಳೆಗಳಿಗೆ ಬೀಳುವ ರೋಗಗಳು ಹಾಗೂ ಅವುಗಳ ಹತೋಟಿ	12-00	17-00
108.	ವ್ಯವಸಾಯ ಮುನ್ನಡೆ	18-00	28-00
109.	ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3-50	
110.	ಸಚಿತ್ರ ಬತ್ತದ ಬೆಳೆ	12-50	22-50
111.	ಕೋಳಿಸಾಕಣೆ ಕೈಪಿಡಿ	7-50	17-50
112.	ಮಣ್ಣು ಸೂಕ್ಷ್ಮಜೀವಿಶಾಸ್ತ್ರ	10-00	20-00

	ಸಾದಾ	ಕ್ಯಾಲಿಕೊ
113. ಭೂಸಾರ ಸಂರಕ್ಷಣೆ	7–50	17–50
114. ಬಿಳಿಕಸ	9–00	19–00
115. ವೈರಸ್‌ಗಳು (ಸೂಕ್ಷ್ಮಜೀವಿ ಜಗತ್ತು, ಭಾಗ–3)	7–50	
116. ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	20–00	30–00
117. ಲವಂಗ	3–50	
118. ಸೂಕ್ಷ್ಮಜೀವಿಗಳ ಉತ್ಪರಿವರ್ತನೆ ಹಾಗೂ ಅನುವಂಶೀಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿ ಜಗತ್ತು, ಭಾಗ–4)	15–00	
119. ಬ್ಯಾಕ್ಟೀರಿಯಗಳ ವರ್ಗೀಕರಣ ಮತ್ತು ವಿವರಣೆ (ಸೂಕ್ಷ್ಮಜೀವಿ ಜಗತ್ತು, ಭಾಗ–5)	25–00	
120. ಎಣ್ಣೆಕೊಡುವ ಕೆಲವು ಹೊಸ ಸಸ್ಯಗಳು	12–00	22–00
121. ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ರಕ್ಷಣಾ ಶಾಸ್ತ್ರ (ಸೂಕ್ಷ್ಮಜೀವಿ ಜಗತ್ತು, ಭಾಗ–6)	20–00	
122. ಕೃಷಿ ಯಂತ್ರಗಳು ಮತ್ತು ಉಪಕರಣಗಳು		80–00
123. ಸಸ್ಯಪೋಷಕಗಳು ಮತ್ತು ಅವುಗಳ ಪಾತ್ರ	10–00	20–00
124. ಮೆಣಸು–ಕಪ್ಪುಹೊನ್ನು	9–00	19–00
125. ಮಾನವ ಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಸೂಕ್ಷ್ಮಜೀವಿ ಜಗತ್ತು, ಭಾಗ–7)	5–00	
126. ಕೃಷಿ ಆರ್ಥಿಕ ವಿಶ್ಲೇಷಣೆ ಪ್ರವೇಶಿಕೆ	25–00	35–00
127. ರೇಷ್ಮೆ ವ್ಯವಸಾಯ	20–00	30–00
128. ಕೃಷಿ ಪ್ರಸರಣೆ	25–00	35–00
129. ಹಣ್ಣಿನ ಬೆಳೆಗಳ ಕೀಟ ನಿಯಂತ್ರಣ	12–00	22–00
130. ತ್ರಿಕೋನಮಿತಿ	15–00	25–00
131. ಬಿದಿರು ಮತ್ತು ಬೆತ್ತ	10–00	20–00
132. ಬತ್ತದ ಬೆಳೆ ಕೀಟ ನಿಯಂತ್ರಣ	6–00	
133. ಇಪ್ಪತ್ತೊಂಬತ್ತನೆಯ ದಿನ		(ಅಚ್ಚಿನಲ್ಲಿದೆ)
134. ಮಣ್ಣಿನ ಭೌತಿಕ ಗುಣಧರ್ಮಗಳು		,,
135. ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ		,,
136. ಸುಗಂಧದ್ರವ್ಯ ಸಸ್ಯಗಳು	12–50	22–50
137. ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ		

	ಸಾದಾ	ಕ್ಯಾಲಿಕೊ
92. ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-00	
93. ಹಸುರು ಸಸ್ಯದ ಜೀವನ	12-00	17-00
94. ಸೂಕ್ಷ್ಮಜೀವಿಗಳ ಚಯಾಪಚಯ (ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯ ಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18-00	
95. ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತು ರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15-00	
96. ಸೂಕ್ಷ್ಮಜೀವಿಗಳಿಂದ ಉತ್ಪತ್ತಿಯಾದ ಕಿಣ್ವಗಳು ಮತ್ತು ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7-00	
97. ರೋಗಕ್ಕೆ ಸಂಬಂಧಪಟ್ಟಂತೆ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5-00	
98. ಆಹಾರ ನೈರ್ಮಲ್ಯ ಹತೋಟಿ ಮತ್ತು ಪರೀಕ್ಷೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7-00	
99. ಕೃಷಿ ಕರ್ನಾಟಕ	12-50	17-50
100. ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35-00
101. ಮತ್ಸ್ಯಶಾಸ್ತ್ರ		50-00
102. ಹಣ್ಣು ಮತ್ತು ತರಕಾರಿ ಸಂರಕ್ಷಣೆ	35-00	40-00
103. ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60-00
104. ಆಹಾರ ಸೂಕ್ಷ್ಮಜೀವಿ ವಿಜ್ಞಾನ		62-50
105. ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25-00	35-00
106. ಬತ್ತದ ಬೇಸಾಯ	15-00	25-00
107. ಧಾನ್ಯದ ಬೆಳೆಗಳಿಗೆ ಬೀಳುವ ರೋಗಗಳು ಹಾಗೂ ಅವುಗಳ ಹತೋಟಿ	12-00	17-00
108. ವ್ಯವಸಾಯ ಮುನ್ನಡೆ	18-00	28-00
109. ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3-50	
110. ಸಚಿತ್ರ ಬತ್ತದ ಬೆಳೆ	12-50	22-50
111. ಕೋಳಿಸಾಕಣೆ ಕೈಪಿಡಿ	7-50	17-50
112. ಮಣ್ಣು ಸೂಕ್ಷ್ಮಜೀವಿಶಾಸ್ತ್ರ	10-00	20-00

		ಸಾದಾ	ಕ್ಯಾಲಿಕೊ
113.	ಭೂಸಾರ ಸಂರಕ್ಷಣೆ	7–50	17–50
114.	ಬಿಳಿರಸ	9–00	19–00
115.	ವೈರಸ್‌ಗಳು (ಸೂಕ್ಷ್ಮಜೀವಿ ಜಗತ್ತು, ಭಾಗ–3)	7–50	
116.	ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	20–00	30–00
117.	ಲವಂಗ	3–50	
118.	ಸೂಕ್ಷ್ಮಜೀವಿಗಳ ಉತ್ಪರಿವರ್ತನೆ ಹಾಗೂ ಅನುವಂಶೀಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿ ಜಗತ್ತು, ಭಾಗ–4)	15–00	
119.	ಬ್ಯಾಕ್ಟೀರಿಯಗಳ ವರ್ಗೀಕರಣ ಮತ್ತು ವಿವರಣೆ (ಸೂಕ್ಷ್ಮಜೀವಿ ಜಗತ್ತು, ಭಾಗ–5)	25–00	
120.	ಎಣ್ಣೆಕೊಡುವ ಕೆಲವು ಹೊಸ ಸಸ್ಯಗಳು	12–00	22–00
121.	ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ರಕ್ಷಣಾ ಶಾಸ್ತ್ರ (ಸೂಕ್ಷ್ಮಜೀವಿ ಜಗತ್ತು, ಭಾಗ–6)	20–00	
122.	ಕೃಷಿ ಯಂತ್ರಗಳು ಮತ್ತು ಉಪಕರಣಗಳು		80–00
123.	ಸಸ್ಯಪೋಷಕಗಳು ಮತ್ತು ಅವುಗಳ ಪಾತ್ರ	10–00	20–00
124.	ಮೆಣಸು–ಕಪ್ಪುಹೊನ್ನು	9–00	19–00
125.	ಮಾನವ ಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಸೂಕ್ಷ್ಮಜೀವಿ ಜಗತ್ತು, ಭಾಗ–7)	5–00	
126.	ಕೃಷಿ ಆರ್ಥಿಕ ವಿಶ್ಲೇಷಣೆ ಪ್ರವೇಶಿಕೆ	25–00	35–00
127.	ರೇಷ್ಮೆ ವ್ಯವಸಾಯ	20–00	30–00
128.	ಕೃಷಿ ಪ್ರಸರಣೆ	25–00	35–00
129.	ಹಣ್ಣಿನ ಬೆಳೆಗಳ ಕೀಟ ನಿಯಂತ್ರಣ	12–00	22–00
130.	ತ್ರಿಕೋನಮಿತಿ	15–00	25–00
131.	ಬಿದಿರು ಮತ್ತು ಬೆತ್ತ	10–00	20–00
132.	ಬತ್ತದ ಬೆಳೆ ಕೀಟ ನಿಯಂತ್ರಣ	6–00	
133.	ಇಪ್ಪತ್ತೊಂಬತ್ತನೆಯ ದಿನ		(ಅಚ್ಚಿನಲ್ಲಿದೆ)
134.	ಮಣ್ಣಿನ ಭೌತಿಕ ಗುಣಧರ್ಮಗಳು		,,
135.	ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ		,,
136.	ಸುಗಂಧದ್ರವ್ಯ ಸಸ್ಯಗಳು	12–50	22–50
137.	ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ		